Electrical Department (Amount involved in sanctioning demands of Employees).

Q.—624. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) what is the extra cost to Government if the proposals made by the Committee regarding the demands of the employees of the Electrical Department are accepted ;

(*b*) how many persons were sent out of employment during and after their strike ?

A.—Sri H. M. CHANNABASAPPA (Minister for Industries).—

(*a*) Rs. 2,07,440.

(*b*) None.

BUDGET FOR 1956-57—DEMANDS FOR GRANTS.

Mr. SPEAKER.—Now the discussion on Demands for Grants will be resumed. We have got 4 Demands. Taking into consideration that the House will sit till 6 P.M. I have allotted time like this :—

Demand Nos. 4 and 36	...	1½ hours.
Demand No. 33	...	15 minutes.
Demand No. 35A	...	45 minutes.

DEMAND NO. 4—FOREST.

10. FOREST.

Mr. SPEAKER.—Motion moved :

"That a sum not exceeding Rs. 54,89,000 be granted to the Government to defray the charges which will come in course of payment during the year ending 31st day of March 1957, in respect of 'Forest'."

Discussion may take place on both the Demands, Nos. 4 and 36.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಫಾರೆಸ್ಟಿಗೆ ಸಂಬಂಧಪಟ್ಟ ಡಿಮ್ಯಾಂಡ್ ಮನವಿಯನ್ನು ನಾನು ವಿರೋಧಿಸುತ್ತಾ ಈ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಮುಖ್ಯವಾಗಿ ಮಲೆನಾಡಿನಲ್ಲಿ ಕಾಡುಗಳನ್ನು ಕಡಿಯುತ್ತಾ ಇರತಕ್ಕ ರೀತಿ ನೋಡಿದರೆ ಆಗಲೇ ಅದು ಬಯಲು ಸೀಮೆಯಾಗಿದೆ. ಇನ್ನು ಕೆಲವು ವರ್ಷಗಳಲ್ಲಿ ಬೆಂಗಳೂರಿನ ಕಡೆಗೆ ಬರಬೇಕಾಗುತ್ತದೆ. ಫಾರೆಸ್ಟ್ ಒಳಗಡೆ ನಾಟಾಗಳನ್ನು ಕತ್ತರಿಸಿ ಅದನ್ನು ಹೊರಗೆ ತರುವಾಗ ಅಲ್ಲಿ ಆಗತಕ್ಕ waste ನೋಡಿದರೆ, ಒಂದು ಕೋಟಿ ರೂಪಾಯಿ waste ಇರಬಹುದೋ ಏನೋ? ದೊಡ್ಡ ಮರ ಕಡಿಯುತ್ತಾರೆ. ಮಧ್ಯದ ತುಂಡನ್ನು ತೆಗೆದುಕೊಳ್ಳುತ್ತಾರೆ. ಬಾಕಿಯೆಲ್ಲಾ ಅಲ್ಲಿಯೇ ಬಿದ್ದಿರುತ್ತದೆ. ಆ ರೀತಿ ಒಂದು ಪರ್ವತ ಬಿದ್ದ ಹಾಗೆ ಬಿದ್ದಿರುತ್ತದೆ. ಅದನ್ನು ಯಾವ ರೀತಿ ಉಪಯೋಗ ಮಾಡುವುದಕ್ಕೂ ಕೂಡ ಫಾರೆಸ್ಟ್ ಇಲಾಖೆಯವರು ಯೋಚನೆಮಾಡಿಲ್ಲ ಮತ್ತು ವ್ಯವಸ್ಥೆ ಮಾಡಿಲ್ಲ. ಆನೆಗಳ ಮುಖಾಂತರ, ಜನಗಳ ಸಹಾಯದಿಂದ ಕೆಲವು ತುಂಡುಗಳನ್ನು ಹೊರಗೆ ತರುತ್ತಾರೆ. ಬಾಕಿ ಎಲ್ಲಾ ಅಲ್ಲಿಯೇ waste ಆಗುತ್ತದೆ. 10—15 ದಿವಸಗಳು ಅಲ್ಲಿಯೇ ಇದ್ದು ಕಾಡುಗಿಚ್ಚು ಬಿದ್ದಾಗ ಅದು ಅಷ್ಟು ಬೂದಿಯಾಗುತ್ತದೆ ಎಂಬುದನ್ನು ತಾವು ನೋಡಿರಬಹುದು. ಅನೇಕ ಕಡೆ ಪರ್ವತೋಪಾದಿಯಲ್ಲಿ waste ಬಿದ್ದಿರತಕ್ಕದ್ದನ್ನು ಯಾರು ಬೇಕಾದರೂ ನೋಡಬಹುದು. ಅದು ಸರ್ಕಾರದ ಲೆಖ್ಖಕ್ಕೆ ಸೇರುವುದಿಲ್ಲ. ಈ ರೀತಿ ಮಧ್ಯೆ ಬಹಳ waste ಆಗುತ್ತಿದೆ. ಮರವನ್ನು ಕಡಿದು ಅದರ ಬುಡದಲ್ಲಿ ತೊಗಟೆ ತೆಗೆದು clean ಮಾಡಿಬಿಟ್ಟರೆ ಮೊಳಕೆ ಬಂದು ನಾಲ್ಕಾರು ಸಸಿಗಳಾಗಿ ಬಿಡುತ್ತವೆ. ಈ ಕೆಲಸವನ್ನು ಇವೊತ್ತು ಯಾರೂ ಮಾಡುತ್ತಾ ಇಲ್ಲ. ಒಂದು ವೇಳೆ ಅಂತಹ ಮರಗಳನ್ನು ಬೆಳೆಸಿದರೂ ಆ ಕಾಡುಗಿಚ್ಚನ್ನು ತಡೆಗಟ್ಟುವುದಕ್ಕೆ ಯಾವ ಕ್ರಮವೂ ಇಲ್ಲದೇ ಇರುವುದರಿಂದ, ಆ ಸಸಿಗಳು ಸೊಪ್ಪುಸದೆ ಇವುಗಳ ಜೊತೆಗೆ ಸುಟ್ಟು ಹೋಗಿ ಬೇರೆ ಮರ ಬೆಳೆಯುವುದಕ್ಕಾಗುವುದಿಲ್ಲ.

ಈ ರೀತಿ ನಾವು ಯೋಚನೆ ಮಾಡಿ ನೋಡಿದರೆ, ಈ ಹೊತ್ತು ಟಿಂಬರ್‌ನ ರೇಟು ಬಹಳ ಹೆಚ್ಚಾಗಿದೆ. ಸುಮಾರು 1937ನೆಯ ಇಸವಿಯನ್ನು ಹೋಲಿಕೆಗೆ ತೆಗೆದುಕೊಂಡರೆ, ಸುಮಾರು ಇಪ್ಪತ್ತು ವರ್ಷದಿಂದೀಚೆಗೆ ಒಂದಕ್ಕೆ ಹತ್ತರಷ್ಟು ಬೆಲೆಯಾಗಿದೆಯೆಂದು ಹೇಳಬಹುದು. ಆಗ ಮೂರಾಣೆ ನಾಲ್ಕಾಣೆ ಇದ್ದುದು ಈ ಹೊತ್ತು ಮೂರು ರೂಪಾಯಿ, ನಾಲ್ಕು ರೂಪಾಯಿ ಆಗಿದೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಅಂದರೆ, ಹದಿನಾರರಷ್ಟಾಯಿತು!

ಶ್ರೀ ಎಸ್. ಗೋಪಾಲಗೌಡ.—ಸಾಮಾನ್ಯವಾಗಿ ಹೇಳಿದೆ, ಅಷ್ಟೆ. ತೇಗ ಮುಂತಾದ ಮರಗಳಿಗೆ ಇನ್ನೂ ಹೆಚ್ಚಾಗಿದೆ. ಆದರೆ ಬಡ್ಜೆಟ್ಟನಲ್ಲಿ ಈ ಬಾಬನ್ನು ನೋಡಿದರೆ, ವರಮಾನದಲ್ಲಿ ಒಂದಕ್ಕೆ ಹತ್ತರಷ್ಟು ಹೆಚ್ಚಿಲ್ಲವೆಂದು ಕಂಡುಬರುತ್ತದೆ. ನಾಲ್ಕೈದು ವರ್ಷದ ಖರ್ಚು, ಮತ್ತು ವರಮಾನವನ್ನು ಪರಿಶೀಲನೆ ಮಾಡಿದರೂ ಕೂಡ, 1954-55 ರಲ್ಲಿ ಫಾರೆಸ್ಟ್ ಇಲಾಖೆಯ ಆದಾಯ 125·17, ಅಂದಾಜು ಮಾಡಿರುವ ಪ್ರಕಾರ 108·67 ಲಕ್ಷ ಎಂದು ಹೇಳಿದ್ದಾರೆ. ವರಮಾನದಲ್ಲಿ ಖೋತಾ ಆಗಿದೆ. ಅವರು ಹೇಳಿದಂತೆ ಗಂಧದ ಮರದಿಂದ ಬಹಳ ಆದಾಯ ಪಡೆಯುತ್ತಿದ್ದೇವೆ, ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದೇವೆ. ಇದಕ್ಕೆ ಹೆಚ್ಚು

(ಶ್ರೀ ಎಸ್. ಗೋಪಾಲಗೌಡ.)

ಹಣವನ್ನು ಕೊಡಿ ಎಂದು ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳಿ ತೆಗೆದುಕೊಂಡಿದ್ದಾರೆ, ಮತ್ತು ಕೇಳಿದ್ದಾರೆ. 1954-55 ರಲ್ಲಿ 41·51 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈಗ ಬಡ್ಜೆಟ್ ಪ್ರಕಾರ 54·89 ಲಕ್ಷ ಖರ್ಚಾಗುತ್ತದೆಂದು ಇದರಲ್ಲಿ ತೋರಿಸಿದ್ದಾರೆ. ಆದರೆ, ಈ ಅರಣ್ಯ ಇಲಾಖೆ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೂ, ಕಣ್ಣಿಗೆ ಕಾಣುವ ನಷ್ಟವನ್ನು (waste) ಕಡಮೆ ಮಾಡುವುದಕ್ಕೂ ಯಾವುದೊಂದು ತೀವ್ರ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ; ಖರ್ಚು ಮಾತ್ರ ಹೆಚ್ಚುತ್ತಿದೆ. ಯಾವ ರೀತಿ ಖರ್ಚು ಗೊತ್ತಿದೆಯೆಂದರೆ, ಕಾಗದದಮೇಲೆ ಹಾಕಿಕೊಂಡಿರುವ ಕೆಲವು ಯೋಜನೆಗಳ ಮೇಲೆ ಖರ್ಚಾಗುತ್ತಿದೆ. ಮರಗಳೇ ಬೆಳೆಯದೇಯಿರುವ ಪ್ರದೇಶಗಳಲ್ಲಿ ಮರ ಬೆಳೆಸುತ್ತೇವೆ, ಗಾಳಿ ಮರ ಬೆಳೆಸುತ್ತೇವೆ ಎಂದು ಹೇಳುತ್ತಾರೆ. ಬೆಂಗಳೂರಿನ ಹತ್ತಿರ ನೋಡಿದರೆ ಕಾಣುತ್ತದೆ, ಆ ಮರದ ಹೆಸರು ನನಗೆ ಗೊತ್ತಿಲ್ಲ. ಇಂಥದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದನ್ನು ನೋಡಿ ರೈತರು ನಗುತ್ತಾರೆ. ಮರ ನೆಡುವುದಕ್ಕೆ ಇಷ್ಟು ಖರ್ಚು ಮಾಡುತ್ತಿದ್ದಾರೆಂದು ಹೇಳಿದರೆ, ಹೊಟ್ಟೆ ಹುಣ್ಣಾಗುವಷ್ಟು ನಗುತ್ತಾರೆ. ಅಧಿಕಾರಿಗಳು ಮಾಡುವುದರಿಂದ ಅವರೇನು ಮಾಡುತ್ತಾರೆ! ಇಂಥ ಯೋಜನೆಗಳಿಂದ ಖರ್ಚು ಹೆಚ್ಚಾಗಿದೆ ಎನ್ನುವುದು ನಮಗೆ ಕಂಡು ಬಂದಿದೆ. ಮಲೆನಾಡಿನಲ್ಲಿ ಭದ್ರಾ ಜಲಾಶಯವನ್ನು ಈಗ ಕಟ್ಟುತ್ತಿದ್ದಾರೆ; ಅದರಲ್ಲಿ ಬಹಳ ಕಾಡು ಮುಳುಗಿ ಹೋಗುತ್ತಿದೆ, ತುಂಗಾ ಜಲಾಶಯದಲ್ಲಿ ಮುಳುಗಿಹೋಯಿತು. ಹಿರೇಭಾಸ್ಕರ್‌ನಲ್ಲಿ ಮುಳುಗಿ ಹೋಯಿತು. ಗಣನೀಯವಾದಷ್ಟು ವಿಸ್ತೀರ್ಣದ ಕಾಡು ಮುಳುಗಿಹೋಗುತ್ತಿದೆ.

ಇಂಥ ಸಂದರ್ಭದಲ್ಲಿ ಸರ್ಕಾರದವರು ಅಲ್ಲಿರುವ ಟಿಂಬರ್ ಅನ್ನಾದರೂ ಕತ್ತರಿಸಿ ಉಪಯೋಗ ಮಾಡಿಕೊಳ್ಳೋಣ ಎಂದು ಒಂದು ಯೋಜನೆಯನ್ನು ಮಾಡಲಿಲ್ಲ. ಸಾಮಾನ್ಯವಾಗಿ ಟೆಂಡರ್ ಕರೆಯುತ್ತಾರೆ. ಅವರು ಮುಖ್ಯವಾದ ಮರಗಳನ್ನು ಕಡಿದು ಸಾಗಿಸುತ್ತಾರೆ. ಹಿರೇ ಭಾಸ್ಕರ್ ಜಲಾಶಯವನ್ನು ಕಟ್ಟಿ ಹತ್ತು ಹದಿನೈದು ವರ್ಷವಾಯಿತು, ಅದರಲ್ಲಿ ಮುಳುಗಿ ಹೋದ ಮರಗಳು ಕೊಳೆತು ಇನ್ನೂ ವಾಸನೆ ಬರುತ್ತಿದೆ. ಆಯೋಜನೆಗೆ ಸಂಬಂಧವಾದ ಏರ್ಪಾಡು ಹೀಗಿದೆ! ಇನ್ನು ಟಿಂಬರ್ ಯಾರ್ಡುಗಳ ವಿಚಾರ ನೋಡಿದರೆ, ತರೀಕೆರೆ ಶಿವಮೊಗ್ಗ ಯಾರ್ಡುಗಳನ್ನು ನೋಡಿದರೆ, ಕೆಲವು ತುಂಡುಗಳು ಅಲ್ಲೇ ಹತ್ತು ವರ್ಷದಿಂದ ಬಿದ್ದಿವೆ, ಯಾರೂ ಮುಟ್ಟಿಲ್ಲ. ಅಲ್ಲಿಗೆ ಯಾರೋ ಒಬ್ಬರು ಅಧಿಕಾರಿ ಬರುತ್ತಾರೆ, ಅದರ ವಿಷಯದಲ್ಲಿ ಇಲಾಖೆಯಲ್ಲಿ ಏನೋ ತಕರಾರಿರುತ್ತದೆ, ಅಲ್ಲಿಗೆ ಬೇರೆಯವರು ಬಂದರೆ ಅವರೂ ಹೀಗೆಯೇ ಮುಂದುವರಿಸಿಕೊಂಡು ಹೋಗುತ್ತಾರೆ. ಅದು ಗೆದ್ದಲು ಹಿಡಿದಿರುತ್ತದೆ, ಕೆಲವು ವರ್ಷಗಳಾದರೆ ಆ ಟಿಂಬರು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲ. ಮಲೆನಾಡಿನಲ್ಲಿ ಟಿಂಬರನ್ನು ಸೀಸನ್ ಮಾಡುವ ಅಥವಾ ಇದಕ್ಕೆ ಸಂಬಂಧಪಟ್ಟ ಯಾವ ಕೈಗಾರಿಕೆಯೂ ಇಲ್ಲ. ಆಧುನಿಕ ಪದ್ಧತಿಗಳನ್ನುಪಯೋಗಿಸಿ ನಾಟಾವನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳುವುದಕ್ಕೂ, ಉಪಯೋಗಿಸುವುದಕ್ಕೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಕಾಡು ಹೆಚ್ಚಾಗಿರುವ ಮಲೆನಾಡು ಪ್ರದೇಶಗಳಲ್ಲಿ ನಾಟಾಗಳಿಗೆ ಸಂಬಂಧಪಟ್ಟ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು. ಮೊದಲನೆಯದಾಗಿ ನಾಟಾ ಕೆಡದೇಯಿರುವ ರೀತಿಯಲ್ಲಿ ಅದನ್ನು preserve ಮಾಡಲು ವ್ಯವಸ್ಥೆ ಮಾಡಬಹುದು.

ಒಬ್ಬ ಸದಸ್ಯರು.—ಭದ್ರಾವತಿಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿಗೆ ಬರುವ ಹೊತ್ತಿಗೆ ಒಣಗಿ ಕೆಟ್ಟುಹೋಗುತ್ತದೆ. ನಾಟಾ ಕಡಿಯುವುದಕ್ಕೂ ಅಲ್ಲಿಟ್ಟಿರುವುದಕ್ಕೂ ಪ್ರಮಾಣದಲ್ಲಿ ಬಹಳ ಕಡಮೆ, ಅದು ಸಾಲದು. ಎಷ್ಟು ಕಡಿಯುತ್ತೇವೆಯೋ ಅಷ್ಟು ಪ್ರಮಾಣದಲ್ಲಿಲ್ಲ. ನಾಟಾವನ್ನು ಬೇರೆ ಕಡೆ ಸಾಗಿಸುತ್ತೇವೆ. ಇದಕ್ಕೆ ಬದಲು ಇದಕ್ಕೆ ಸಂಬಂಧಪಟ್ಟ ಕೈಗಾರಿಕೆಯನ್ನು ಅಲ್ಲೇ ಸ್ಥಾಪನೆ ಮಾಡಿದರೆ ಹೆಚ್ಚು ಸಂಪಾದನೆ ಮಾಡಬಹುದು. ಈ ಹೊತ್ತು ಮೈಸೂರು ಸರ್ಕಾರ ಗೃಹನಿರ್ಮಾಣ ಯೋಜನೆಯನ್ನಿಟ್ಟುಕೊಂಡಿದ್ದಾರೆ. ಇದಕ್ಕೆ ಸರಿಯಾದ ರೀತಿಯಲ್ಲಿ ಬಡಗಿಗಳನ್ನಿಟ್ಟುಕೊಂಡು ಕೆಲಸ ಮಾಡಿಸಿದರೆ, ಅಲ್ಲಾಗುವ waste ನಲ್ಲಿ ಲಕ್ಷಾಂತರ ಮನೆಗಳಿಗೆ ಆಗುವಷ್ಟು ಮರದ ಸಾಮಾನುಗಳನ್ನು ಅದರಿಂದ ಮಾಡಿಸಬಹುದು. ಬೆಲೆಯೂ ಕಡಮೆಯಾಗುತ್ತದೆ. ಇದರಿಂದ ಬಡವರಿಗೂ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ದಿಮ್ಮಿಗಳನ್ನು ಕಾಡಿನಿಂದ ಆನೆಗಳಿಂದ ಸಾಗಿಸುತ್ತೇವೆ, ಆದರೆ ಬಾಕಿ ಸಣ್ಣವನ್ನು ತರುವುದಿಲ್ಲ, ಅಲ್ಲೇ ಬಿಡುತ್ತೇವೆ. ಆ ಕಾಡಿನಲ್ಲಿ ಕಟ್ಟಿಗೆಯಾಗಿ ಕೂಡ ಇದನ್ನು ಉಪಯೋಗಿಸುವುದಿಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಿ, ಸರಿಯಾದ ರೀತಿಯಲ್ಲಿ ನಾಟಾವನ್ನುಪಯೋಗಿಸಿಕೊಂಡು ಇದರಿಂದ ಬೇಕಾದಷ್ಟು ಫರ್ನಿಚರನ್ನೂ ಮನೆಗಳಿಗೆ ಬೇಕಾದ ಬಾಗಿಲು, ಕಿಟಕಿ ಮುಂತಾದ ಮರ ಮುಟ್ಟುಗಳನ್ನು ಮಾಡಿಕೊಳ್ಳಬಹುದು. ಅಲ್ಲದೆ ಇನ್ನೂ ಸರ್ಕಾರಕ್ಕೆ ಬೇಕಾದ ಮರದ ಸಾಮಾನುಗಳನ್ನೂ ಮಾಡಿಸಬಹುದು.

ಇನ್ನೊಂದು ವಿಷಯ, ಬಿದಿರಿಗೆ ಸಂಬಂಧಪಟ್ಟ ಹಾಗೆ, ಪ್ರತಿವರ್ಷವೂ ಬಿದಿರನ್ನು ಕಡಿದು ಅದರ ಬುಡವನ್ನು ಸುಡುತ್ತಾರೆ. ಇದನ್ನುಪಯೋಗಿಸಿಕೊಳ್ಳುವುದಕ್ಕೆ ಏನೂ ಏರ್ಪಾಡು ಮಾಡಿಲ್ಲ. ಭದ್ರಾವತಿಗೆ ಕೊಡುವುದನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಕಾಡೇ ಇಲ್ಲದಿರುವ ತುಮಕೂರಿನಲ್ಲಿ ಫರ್ನಿಚರಿಗೆ ಸಂಬಂಧಪಟ್ಟ ಕೈಗಾರಿಕೆಯನ್ನು ಬಡಾವಣೆ ಮಾಡಬೇಕೆಂದು ಹೇಳುತ್ತಾರೆ. ಈಗಿರುವುದನ್ನೇ ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲ. ಅಂತೂ ತುಮಕೂರಿನಲ್ಲಿಟ್ಟಿದ್ದಾರೆ, ಯಾವ ಬಲವತ್ತರ ಕಾರಣದಿಂದ ಅಲ್ಲಿಟ್ಟಿದ್ದಾರೋ ಗೊತ್ತಿಲ್ಲ. ಈ ರೀತಿ ಕೆಲಸ ನಡೆಯುವುದರಿಂದ, ಕೇವಲ ತೋರಿಕೆಗಾಗಿ ಮಾಡುತ್ತಾರೆಂದು ಕಾಣುತ್ತದೆ. ಲ್ಯಾಬೊರೇಟರಿ ಇದೆಯೋ ಎಂದು ಕೇಳಿದರೆ ಇದೆ, ಸಂಶೋಧನೆ ನಡೆಸುತ್ತೀರಾ ಎಂದು ಕೇಳಿದರೆ, ನಡೆಸುತ್ತೇವೆ, ತಜ್ಞರು ಇದ್ದಾರೆಯೆ ಎಂದರೆ, ಇದ್ದಾರೆ ಎಂದು ಹೇಳಬಹುದು. ಎಲ್ಲವೂ ಬೆಂಗಳೂರಿನಲ್ಲಿದೆ, ಇಲಾಖೆಯಲ್ಲಿದೆ, ಸರ್ಕಾರಕ್ಕೆ ಸಂಬಂಧಪಟ್ಟ ಬೋರ್ಡುಗಳೂ ಇವೆ. ಗಾಂಧಿನಗರದಲ್ಲಿ ಕೂಡ ಒಂದು ಬೋರ್ಡನ್ನು ನೋಡಬಹುದು.

ಈ ರೀತಿ ಇಲಾಖೆಗಳಿವೆ. ಅವುಗಳನ್ನು ನಿಗಾವಣೆಯಲ್ಲಿಟ್ಟುಕೊಂಡು ಅವು ಯಾವ ಉದ್ದೇಶಕ್ಕಾಗಿ, ಯಾವ ಕೆಲಸಕ್ಕಾಗಿ ಸ್ಥಾಪನೆಯಾಗಿವೆಯೋ ಅದನ್ನು ಮಾಡುತ್ತಿದೆಯೋ, ನಿರ್ವಹಿಸುತ್ತಿದೆಯೋ ಎನ್ನುವುದನ್ನು ನೋಡಿಕೊಬೇಕು. ನಮಗೇನೋ ಬಹಳ ಆಸೆ ಇತ್ತು ಡಾಕ್ಟರ್ ನಾಗನಗೌಡರು ಮೈಸೂರಿಗೆ ಬಂದರೆಂದರೆ, ಅವರು ಕೃಷಿಯಲ್ಲಿ ಬಹಳ ತಜ್ಞರು, ಫಾರೆಸ್ಟ್ ವಿಷಯದಲ್ಲಿ ತಜ್ಞರು, ಸಹಕಾರದಲ್ಲಿ

ತಜ್ಞರು, ನಮಗೆ ಬಹಳ ಸಹಾಯವಾಗಿ ಇಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಪರಿಹಾರ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು.

Mr. SPEAKER.—Now he will take cent per cent interest because Bellary is added on to Mysore.

ಶ್ರೀ ಎಸ್. ಗೋಪಾಲಗೌಡ.—ಸಂಡೂರು ಫಾರೆಸ್ಟ್ ಬಳ್ಳಾರಿಯಲ್ಲಿದೆ. ಅದು ಬಹಳ ದೊಡ್ಡ ಕಾಡು. ಬಳ್ಳಾರಿಯ ಬಗ್ಗೆ ಸ್ವಲ್ಪ ಹೆಚ್ಚಿನ ನಿಗಾ ವಹಿಸುವುದು ಸ್ವಾಭಾವಿಕ.

ಆದುದರಿಂದ ನಮ್ಮ ದೃಷ್ಟಿಯಲ್ಲಿ, ನಮ್ಮ ಇಲಾಖೆಯ ಅಧಿಕಾರಿಗಳ ಮನೋಭಾವ ಶ್ರೀ ನಾಗನಗೌಡರಿಗೆ ಅರ್ಥವಾಗಿರಲಿಲ್ಲವೋ ಏನೋ. ಈಚೆಗೆ ತಿಳಿದುಬರುವುದರಲ್ಲಿ ಇವರೆಲ್ಲ ಸಲೀಸಾಗಿ ಕೆಲಸ ಮಾಡುತ್ತಾರೆಂದು ತಿಳಿದುಕೊಂಡಿದ್ದಾರಂತೆ. ಮದರಾಸಿನಲ್ಲಿ ಹೇಗೆ ನಡೆಯುತ್ತದೆಂದು ಕೇಳಿದ್ದೇನೆ. ಅಲ್ಲಿ ಯಾವ ಒತ್ತಾಯವೂ ಇಲ್ಲದೆ, ಬೇರೊಬ್ಬರ ಶಿಫಾರ್ಸಿಲ್ಲದೆ, ಯಾವ ಕಾಗದ ಎಲ್ಲಿಗೆ ಹೋಗಬೇಕೋ, ಎಷ್ಟು ದಿವಸಗಳಲ್ಲಿ ಹೋಗಬೇಕೋ ಮತ್ತು ಕೊನೆಗೆ ಅದಕ್ಕೆ ಏನು ಸಂಸ್ಕಾರವಾಗಬೇಕೋ ಅದೆಲ್ಲ ಆಗುತ್ತದೆಂದು ತಿಳಿದಿದ್ದೇನೆ. ಇಲ್ಲಿಯೂ ಹಾಗೆಯೇ ಕೆಲಸಗಳು ನಡೆಯುತ್ತವೆ ಎಂದು ಅವರು ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಆ ರೀತಿ ಇಲ್ಲಿ ನಡೆಯುವುದಿಲ್ಲವೆಂದು ಅವರಿಗೆ ಈಗ ತಿಳಿದಿರಬಹುದು. ಮಂತ್ರಿಮಂಡಳವು ತನ್ನ ಕೊನೆಯ ದಿವಸಗಳಲ್ಲಿರುವಾಗ ಗೊತ್ತಾದರೆ ತಾನೆ ಅದರಿಂದ ಏನು ಪ್ರಯೋಜನವಾದೀತು ?

ಈ ವಿಷಯದಲ್ಲಿ ಸರ್ಕಾರದವರು ಫಾರೆಸ್ಟ್ ಸಂಬಂಧದಲ್ಲಿ ಸರಿಯಾದ ರೀತಿನೀತಿಗಳನ್ನನುಸರಿಸಿಲ್ಲ. ಮೊದಲನೆಯದಾಗಿ waste ತಡೆಗಟ್ಟತಕ್ಕದ್ದು ಮುಖ್ಯ, ಮತ್ತು afforestation scheme ಎಂದು ಹಾಕಿಕೊಂಡಿದ್ದಾರೆ. ಅದರಲ್ಲಿ ಹೊಸದಾಗಿ ಕಾಡನ್ನು ಬೆಳೆಸುವುದು ಎಂದರೆ ತೇಗ ಇತ್ಯಾದಿ ಮರಗಳನ್ನು ಬೆಳೆಸುವುದು. ಆದರೆ ಸಾಮಾನ್ಯವಾಗಿ ಕಾಡನ್ನು ಈ ರೀತಿ ರಕ್ಷಣೆ ಮಾಡುತ್ತಿಲ್ಲ. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು. ಬೆಂಗಳೂರಿನ ಸುತ್ತಮುತ್ತಲೂ ಕಾಡನ್ನು ಬೆಳೆಸುವುದಕ್ಕಿಂತ ದೊಡ್ಡದಾದ ಕಾಡು ಎಲ್ಲಿದೆಯೋ ಅಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ರಕ್ಷಣೆ ಮಾಡುವುದಕ್ಕೆ, ಅಲ್ಲಿ ಕಾಡನ್ನು ಹೆಚ್ಚಿಗೆ ವಿಸ್ತರಿಸುವುದಕ್ಕೆ ಅವಕಾಶವಿರುವ ಕಡೆ ಮಾಡಬೇಕು.

ಮಲೆನಾಡಿನಲ್ಲಿ ಮನೆಗಳನ್ನು ಕಟ್ಟಬೇಕಾಗಿದ್ದರೆ ಫಾರೆಸ್ಟ್ ಇಲಾಖೆಯಿಂದ ಗುಂಡಿ ಲೈಸನ್ಸ್ ಕೊಡುತ್ತಿದ್ದರು. ಈಚೆಗೆ ಈ ಲೈಸೆನ್ಸನ್ನು ಎರಡು ಮೂರು ಕಡೆ ಪಡೆಯಬೇಕಾಗಿದೆ. ಮೊದಲು ಕೊಡುತ್ತಿದ್ದುದಕ್ಕಿಂತಲೂ ಕಡಿಮೆಮಾಡಿದ್ದಾರೆ. ಹಾಗೆ ಮಾಡಿರುವುದರಲ್ಲಿ ಇನ್ನೂ ಒಂದು ತೊಂದರೆ ಏನೆಂದರೆ, ಮರವನ್ನು ಕಡಿದರೆ ಅದನ್ನು ಸಾಗಿಸಿಕೊಂಡು ಬಂದು ಇಂಥಕಡೆಯೇ ಕುಯ್ಯಬೇಕು ಎಂದು ಆಜ್ಞೆ ಮಾಡುತ್ತಾರೆ. ಹಿಂದೆ ಕಾಡುಗಳಲ್ಲಿಯೇ ಗುಂಡಿಯನ್ನು ತೆಗೆದು ಮರವನ್ನು ಕುಯ್ಯುತ್ತಿದ್ದರು. ಇದನ್ನು ತಪ್ಪಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದರಿಂದ ವ್ಯಾಪಾರವನ್ನು ಮಾಡಿಕೊಂಡಿರುವವನಿಗೆ ಮಾತ್ರ ಅನುಕೂಲವಾಗಿದೆ. ಅಲ್ಲಿಗೆ ಯಾರಾದರೂ ಆಫೀಸರು ಬರಲಿ ಅವರ ಹತ್ತಿರ ಒಂದು ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡು ವ್ಯಾಪಾರಸ್ಥರು ತಮ್ಮ ವ್ಯಾಪಾರವನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತಾರೆ ಮತ್ತು ಇದು ಸಾರೋದ್ಧಾರವಾಗಿ ನಡೆದುಕೊಂಡು ಬರುತ್ತಿದೆ. ವ್ಯವಸ್ಥೆ ಅಂದರೆ ಇಷ್ಟಿಷ್ಟು ಮರಗಳನ್ನು ಕಡಿಯುತ್ತೇನೆ ಮುಂತಾಗಿ ಆಫೀಸರ ಸಮ್ಮುಖದಲ್ಲಿ ಗೊತ್ತುಮಾಡಿಕೊಂಡು ಅದೇ ಒಂದು ರೀತಿಯ ವ್ಯಾಪಾರ ಮಾಡಿಕೊಂಡು ಹೋಗುತ್ತಾನೆ. ಆದುದರಿಂದ ವ್ಯಾಪಾರಗಾರನಿಗೆ ಯಾವ ಕಷ್ಟವೂ ಆಗುವುದಿಲ್ಲ. ನಷ್ಟವೂ ಆಗುವುದಿಲ್ಲ. ಆದರೆ ರೈತನಾದವನು ಸಾಮಾನ್ಯವಾಗಿ ಒಂದು ತಲೆ ಮಾರಿನಲ್ಲಿ ಒಬ್ಬನು ಒಂದು ಮನೆಯನ್ನು ಕಟ್ಟಬಹುದು. ಪ್ರತಿವರ್ಷವೂ ಮನೆಕಟ್ಟುವುದಕ್ಕೆ ಯಾರೂ ಹೋಗುವುದಿಲ್ಲ. 50 ವರ್ಷ, 100 ವರ್ಷಗಳಿಗೆ ಒಂದು ಮನೆಯನ್ನು ಒಬ್ಬನು ಕಟ್ಟಬಹುದು. ಅಥವಾ 10, 15, ವರ್ಷಗಳಿಗೊಮ್ಮೆ ಮನೆಯನ್ನು ರಿಪೇರಿಮಾಡಬಹುದು. ರೈತನಾದವನು ತನಗೆ ಕೆಲವು ನಾಟಗಳು ಬೇಕು ಎಂದರೆ ಇವೊತ್ತು ಅದಕ್ಕೆ ಬಹಳ ಕಷ್ಟವಾಗಿದೆ. ಮೊದಲು ಹಕ್ಕಿನ ನಾಟ ಎಂದು ಇರುತ್ತಿತ್ತು. ಅವನ ಜಮೀನಿನ ಹತ್ತಿರ ಅಥವಾ ಮನೆಗಳ ಹತ್ತಿರವಿರತಕ್ಕ ಮರಗಳಮೇಲೆ ಅವನಿಗೆ ಹಕ್ಕಿತ್ತು. ಆದರೆ ಈಗ ಅರಣ್ಯ ಇಲಾಖೆಯವರು ಅದನ್ನು ಆಕ್ರಮಿಸಿಕೊಂಡಿದ್ದಾರೆ. ಸ್ವಂತಮನೆಗಳ ಸುತ್ತಮುತ್ತಲೂ ಇರುವ ನಾಟವನ್ನು ಕೂಡ ಅವನು ಕಡಿಯುವ ಹಾಗಿಲ್ಲ. ಅಲ್ಲದೆ ಐದು ಗಾಡಿಗೆ ಎಂದು ಲೈಸೆನ್ಸ್ ಕೊಟ್ಟಿರುವುದರಲ್ಲಿ ಒಂದು ಮರದ ತುಂಡು ಜಾಸ್ತಿಯಾಗಿದ್ದರೂ ಸಹ ಆರು ಗಾಡಿ ಮರವಿದೆ ಎಂದು ಅವನ ಮೇಲೆ ಕೇಸು ಹಾಕುತ್ತಾರೆ. ಆಗ ರೈತನು ತೀರ್ಥಹಳ್ಳಿಗೋ ಇಲ್ಲವೇ ಸಾಗರಕ್ಕೋ ಹೋಗಬೇಕಾಗುತ್ತದೆ. ಅಂಥ ಸಮಯಗಳಲ್ಲಿ ಇರುವ ಮರದ ತುಂಡನ್ನೂ ಬಿಟ್ಟು ಬಿಟ್ಟು ಸಾಲಮಾಡಿಯಾದರೂ ಹತ್ತು ಹದಿನೈದು ರೂಪಾಯಿಗಳನ್ನು ಕೊಟ್ಟು ಕೈಮುಗಿದು ವಾಪಸು ಬರುತ್ತಾನೆ. ಅವನು ಅನಂತರ ಮನೆಯನ್ನೂ ಕಟ್ಟುವುದಿಲ್ಲ, ಕೊಟ್ಟಿಗೆಯನ್ನೂ ಕಟ್ಟುವುದಿಲ್ಲ. ಇಂಥ ಕಷ್ಟ ಪರಿಸ್ಥಿತಿ ಇದೆ. ನಮ್ಮ ಕಡೆಯ ಜನ ಒಂದು ರೀತಿ ಮುಗ್ಧ ಸ್ವಭಾವದವರು, innocent people ಇದ್ದಹಾಗೆ. ಅವರಿಗೆ ಪ್ರತಿವರ್ಷವೂ ಕಾನೂನು ಬದಲಾವಣೆಯಾಗುತ್ತದೆಂಬುದು ಸಹ ಗೊತ್ತಿರುವುದಿಲ್ಲ, ಇಂಥ ಆರ್ಡರು ಬಂತು, ಇಂಥ ಆರ್ಡರು ಹೋಯಿತು ಎಂದು ಅವರಿಗೆ ಗೊತ್ತಿರುವುದಿಲ್ಲ. ಅವರು ಗೆಜೆಟ್ಟನ್ನು ನೋಡುವುದಿಲ್ಲ. ಅವರಿಗೆ ಪ್ರತಿದಿನವೂ ಆಗುತ್ತಿರುವ ಬದಲಾವಣೆಗಳು ತಿಳಿಯುವುದಿಲ್ಲ. ಅವರು ಸಾಮಾನ್ಯವಾದ ಒಂದು ರೀತಿಯ ಕಾಡು ಜೀವನವಿದ್ದ ಹಾಗೆ ನಡೆಸಿಕೊಂಡು ಹೋಗುತ್ತಾರೆ. Ignorant ಆಗಿ ಒಂದು ಸಣ್ಣ ತುಂಡನ್ನು ತಂದರೂ ಅವನಿಗೆ ಶಿಕ್ಷೆ ಮಾಡುತ್ತಾರೆ. ಕಾನೂನು ಪ್ರಕಾರ ಶಿಕ್ಷೆಮಾಡುತ್ತಾರೆಂದರೂ ಕೂಡ, ಪ್ರತಿಯೊಬ್ಬ ರೈತನಿಗೂ ಯಾವ ರೀತಿಯ ಅನಾನುಕೂಲವಾಗಿದೆ ಎಂದು ಪರಿಶೀಲನೆ ಮಾಡಬೇಕು. ಮಲೆನಾಡಿನ ಕಡೆ ಪ್ರವಾಸ ಹೋದ ಕಾಲದಲ್ಲಿ ರೈತರನ್ನು ಕರೆದು ಅವರ ಕಷ್ಟಸುಖಗಳನ್ನು ಅರಿತು ಇದನ್ನು ಪರಿಶೀಲನೆಮಾಡಬೇಕು. ಯಾರೋ ಕಂಟ್ರಾಕ್ಟರ್ ಬಂದು ಇಂಗ್ಲೀಷಿನಲ್ಲಿ ಮಾತನಾಡಿದರೆ, ಅದರಿಂದ ಏನೂ ಸಾರ್ಥಕವಾಗುವುದಿಲ್ಲ. ನಾಟದ ವ್ಯಾಪಾರಕ್ಕೆ ಅನುಕೂಲವಾಗುವಂಥ ಸಲಹೆಗಳನ್ನೇ ಅವನು ಕೊಡುತ್ತಾನೆ. ರೈತರು ಮರಗಳನ್ನು ಕಡಿಯುತ್ತಿದ್ದಾರೆ, restrict ಮಾಡಬೇಕು ಎಂದು ಹೇಳುತ್ತಾನೆ. ಆದುದರಿಂದ ಸರ್ಕಾರದವರು ರೈತರ ಕೆಲವು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಮೊದಲಿನಿಂದಲೂ

(ಶ್ರೀ ಎಸ್. ಗೋಪಾಲಗೌಡ).

ಹೇಳುತ್ತಿದ್ದೇನೆ. ಎರಡು ಮೂರು ಲೈಸೆನ್ಸ್‌ಗಳು ದೊರೆಯುತ್ತಿದ್ದುದು ಈಗ ಒಂದಕ್ಕೆ ಬಂದಿದೆ. ರೈತರಿಗೆ ಮಾಫಿ ಲೈಸೆನ್ಸ್ ಕೊಡುತ್ತಾರೆ. ಆದರೆ ಮನೆಯನ್ನು ಕಟ್ಟಿಕೊಳ್ಳಲು ಇನ್ನೂ ಹೆಚ್ಚಿನ ಸೌಕರ್ಯಗಳು ರೈತರಿಗೆ ದೊರೆಯುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Timber smuggling ಆಗುತ್ತಿರುವುದನ್ನು ಸರ್ಕಾರದವರು ತಡಗಟ್ಟುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಪೂರ್ತಿಯಾಗಿ ತಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಗುವುದಕ್ಕೆ ಇಲಾಖೆಯವರು ನಿಸ್ಪೃಹರಾಗಿ ಕೆಲಸ ಮಾಡದೆ ಇರುವುದು ಮೊದಲನೆಯ ಕಾರಣ. ಇದರಲ್ಲಿ ಎಲ್ಲರೂ ಕೆಟ್ಟವರೇ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ; ಬಹಳ ಕಷ್ಟದಿಂದ smuggling ಆಗುವುದನ್ನು ತಡೆಗಟ್ಟುತ್ತಾರೆ. ಕೆಲವು ಸಂದರ್ಭಗಳಲ್ಲಿ smuggle ಆಗುತ್ತಿರುವುದನ್ನು ಹಿಡಿಯಲು ಹೋದರೆ ಪ್ರಾಣಾಪಾಯ ಒದಗುವ ಸಂದರ್ಭಗಳೂ ಇರುತ್ತವೆ. Smuggle ಮಾಡುವವರು ಆ ಕೆಲಸದಲ್ಲಿ ಚೆನ್ನಾಗಿ ನುರಿತ ಕದೀಮರಾಗಿರುತ್ತಾರೆ. ಆದುದರಿಂದ ಅಧಿಕಾರಿಗಳು ಬಹಳ risk ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಆದರೂ ಇದರಲ್ಲಿ fool-proof ಆಗಿ ಕೆಲಸ ಮಾಡುವ ದಕ್ಷತೆ ಇಲಾಖೆಗೆ ಬಂದಿಲ್ಲ. ಕಣ್ಣುಮುಚ್ಚಿಕೊಂಡು ನಾವು notice ಮಾಡುವುದಿಲ್ಲ ಎಂದು ಹೇಳಿದ ಹಾಗೆ ಕೆಲಸ ನಡೆಯುತ್ತಿದೆ. ಆನೆ ಹೋದರೂ ಹೋಗಲಿ, ಮರ ಬೇಕಾದರೂ ಹೋಗಲಿ, ಏನುಬೇಕಾದರೂ ಹೋಗಲಿ, ಎಲ್ಲಿಯಾದರೂ ಹೋಗಲಿ, ನಮ್ಮ ಗಮನಕ್ಕೆ ಬರಲಿಲ್ಲವೆಂದು ಹೇಳುತ್ತಾರೆ. ಗಾರ್ಡುಗಳು ಮೊದಲಾದವರು ಬಂದು ತಿಳಿಸಿದರೂ ಸಹ, ಎಲ್ಲಿಯಾದರೂ ಹಾಳಾಗಿ ಹೋಗಲಿ, ಅದನ್ನು ಹಿಡಿದು ಕೇಸು ಹಾಕುವ ತೊಂದರೆ ಯಾಕೆ, ಸುಮ್ಮನೆ ಇರು—ಇನ್ನು ಮುಂದೆ ಹೋಗದೆ ಇರುವ ಹಾಗೆ ನೋಡಿಕೊಳ್ಳೋಣವೆಂದು ಹೇಳುತ್ತಾರೆಂದು ತಿಳಿದಿದ್ದೇನೆ. ಈ ರೀತಿಯಾದರೆ smuggling ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹಾಸನದಲ್ಲಿ smuggling ಆಗಿದೆ ಎಂದು ನಮಗೆ ತಿಳಿದಿದೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಸಾಮಾನ್ಯವಾಗಿ ನಡೆಯುತ್ತದೆ. ಹತ್ತಕ್ಕೆ ಲೈಸನ್ಸ್ ಇದ್ದರೆ ಅದರ ಜೊತೆಯಲ್ಲಿ ಇನ್ನೂ ಹೆಚ್ಚಾಗಿ ಹೋಗುತ್ತದೆ. ಈ ರೀತಿ ಆಗಬಾರದು.

3 P.M.

ಮತ್ತು ಇಲಾಖೆಗಳಲ್ಲಿ ಲಾರಿ ಸರ್ವಿಸಸ್ ಇವೆ, ಆನೆಗಳಿವೆ, ಬೇಕಾದಷ್ಟು ಸಿಬ್ಬಂದಿಯಿದೆ. ಅವನ್ನೆಲ್ಲಾ ಉಪಯೋಗಿಸಿಕೊಂಡು ವನಸಂಪತ್ತನ್ನು ಹೆಚ್ಚಿಸುವುದು, ಮಲೆನಾಡಿನಲ್ಲಿ ಗಿಡ ಕಡಿಯುವುದನ್ನು ತಡೆಗಟ್ಟುವುದು, ಕಡಿದಿರುವ ಭಾಗದಲ್ಲಿ ಪುನಃ ಸಸಿಗಳನ್ನು ನೆಟ್ಟು ಗಿಡ ಬೆಳೆಸುವುದು ಮುಂತಾದ ಕಾರ್ಯವನ್ನು ಕೈಕೊಂಡು ಅದನ್ನು ಮುಂದುವರಿಸಬೇಕೆಂದು ಸರ್ಕಾರಕ್ಕೆ ತಿಳಿಸುತ್ತೇನೆ.

ಮುಖ್ಯವಾಗಿ ಲೈಸೆನ್ಸ್ ಬಗ್ಗೆ ಸರ್ಕಾರದವರು ಸ್ವಲ್ಪ ಗಮನ ಕೊಡಬೇಕು. ಮಲೆನಾಡಿನಲ್ಲಿ ಈ ಲೈಸೆನ್ಸ್ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಏನು ದೂರು ಬಂದಿದೆಯೋ ಅದನ್ನು ಪರಿಶೀಲಿಸಿ ನಿಮ್ಮ ಇಲಾಖೆ ರೈತರಿಗೆ ತೊಂದರೆ ಕೊಡುತ್ತಿರುವುದನ್ನು ತಪ್ಪಿಸಬೇಕು. ರೈತರನ್ನು ಕಳ್ಳರೆಂಬ ದೃಷ್ಟಿಯಿಂದ ನೋಡುವುದು ಬೇಡ, ಅವರ ಮನೆಗಳಿಗೆ ಸಾಕಾಗುವಷ್ಟು ನಾಟಾ ನೀವೇ ಕೊಡಿಸಿ ಕೊಡಿ, ಪರವಾಗಿಲ್ಲ. ಕಳ್ಳ ಎಂದು ರೈತರನ್ನು ದೂರುವುದಕ್ಕಿಂತ ರೈತರಿಗೆ ಬೇಕಾದ ನಾಟಾ ಕೊಡುವ ಕೆಲಸವನ್ನು ನೀವೆ ತೆಗೆದುಕೊಂಡು ಬೇಕಾದಷ್ಟು ಕೊಡಲು ಇಲಾಖೆಯವರೇ ಬೇಕಾದರೆ ಏರ್ಪಾಡು ಮಾಡಬಹುದು. ನಿಜವಾಗಿಯೂ ರೈತರಿಗೆ ಮನೆ ಕಟ್ಟಲು ನಾಟಾ ಕೇಳಿದರೆ ಅದನ್ನೊದಗಿಸಲು ಹೆಚ್ಚಿನ ಅನುಕೂಲ ಮಾಡಬೇಕು. ನೇಗಿಲಿಗೆ ಬೇಕಾದ ಮರ ಕಡಿಯುವುದು ಕೂಡ ಕಷ್ಟವಾಗಿದೆ. ವರ್ಷಕ್ಕೆ ಎರಡು ನೇಗಿಲು ಬೇಕು. ಅದಕ್ಕೆ ಬೇಕಾದ ಮರ ತೆಗೆದುಕೊಂಡರೆ, ನಾಟಾ ತೆಗೆದುಕೊಂಡರೆ ಅದರಮೇಲೆ ಕೇಸು ಹಾಕುವುದನ್ನು ನಿಲ್ಲಿಸಬೇಕು. ಇಷ್ಟು ಹೇಳಿ ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಶ್ರೀ ಗೋಪಾಲಗೌಡರ ಹಾಗೆ ನಾನು ದಟ್ಟವಾದ ಅರಣ್ಯದಲ್ಲಿ ವಾಸ ಮಾಡದಿದ್ದರೂ ಹೊರಗೆ ಬರುವುದಕ್ಕೆ ದಾರಿ ಸಿಕ್ಕುವುದೇ ಕಷ್ಟವಾಗಿದೆ. ಅವರು ದಟ್ಟವಾದ ಕಾಡಿನಲ್ಲಿದ್ದರೂ ಬಯಲು ಸೀಮೆಯವರ ಕಷ್ಟ ತಿಳಿಸಿದ್ದಾರೆ. ನಾನು ಬೈಲು ಸೀಮೆಯಲ್ಲಿ ನೋಡಿದ ಹಾಗೆ ಮೈದಾನದ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಅನುಮಾನವಾಗಿದೆ. ಇಲಾಖೆಯವರು, ಸಂಬಂಧಪಟ್ಟ ಮಂತ್ರಿಯವರು ಮೈದಾನ ಡಿಸ್ಟ್ರಿಕ್ಟುಗಳಲ್ಲಿರುವ ಫಾರೆಸ್ಟುಗಳನ್ನು ಯಾವಾಗಲಾದರೂ ನೋಡಿದ್ದರೆಯೆ, ಇಲ್ಲಿ ಫಾರೆಸ್ಟಿದೆಯೆಂಬುದು ಅವರ ಲೆಕ್ಕದಲ್ಲಿದೆಯೆ ಎಂಬ ಅನುಮಾನಕ್ಕೆ ಆಸ್ಪದವಾಗಿದೆ. ಹೋದ ವರ್ಷ ನಾನು ಈಗಾಗಲೇ ಕೆಲವರು ಹೇಳಿದ ಹಾಗೆ ಅರಣ್ಯ ರೋದನ ಮಾಡಿದ್ದೆ. ಕುಣಿಗಲು ತಾಲ್ಲೂಕಿನಲ್ಲಿ ಸುಮಾರು 23 ಸಾವಿರ ಎಕರೆ ಅರಣ್ಯ ಪ್ರದೇಶವಿದೆ. ಅದರಿಂದ ವರ್ಷಕ್ಕೆ 11 ಸಾವಿರ ರೂಪಾಯಿಗಳ ಖರ್ಚು, ಮೂರು ಸಾವಿರ ರೂಪಾಯಿಗಳ ಉತ್ಪತ್ತಿ ಇದೆ. ಇದು ಸರ್ಕಾರದವರೇ ಕೊಟ್ಟಿರುವ ಉತ್ತರ. ನಾನು ನೋಡಿರುವ ಇಪ್ಪಾಡಿ ಫಾರೆಸ್ಟ್ ಎಂಬುದೊಂದಿದೆ. ಅದರಲ್ಲಿ ಈ 23 ಸಾವಿರ ಎಕರೆಯಲ್ಲಿ ನಾಲ್ಕು ಸಾವಿರ ಎಕರೆ ಪ್ರದೇಶವೇನು ಇದೆಯೋ ಅದರಲ್ಲಿ ಎರಡು ಆಲದ ಮರ ಮಾತ್ರವಿದೆ; ಇದು ನಂಬಿದರೆ ನಂಬಿ, ಬಿಟ್ಟರೆ ಬಿಡಿ ಎಂದು ಹೇಳುವ ಹಾಗಿದೆ. ನಾಲ್ಕು ಸಾವಿರ ಎಕರೆ ಪ್ರದೇಶದಲ್ಲಿ ಎರಡು ಆಲದ ಮರವಿದೆಯೆಂದರೆ ಆಶ್ಚರ್ಯವಾಗುತ್ತದೆ. ಊರು ಪಕ್ಕದಲ್ಲಿ ರೈತರು ವ್ಯವಸಾಯ ಮಾಡುವ ಜಮೀನಿನಲ್ಲೇ ಒಂದು ಎಕರೆಗೆ 10-12 ಮರಗಳಾದರೂ ಇರುತ್ತವೆ. ಹಾಗಿರುವಾಗ ಸರ್ಕಾರದವರು ಸಾವಿರಾರು ರೂಪಾಯಿ ಖರ್ಚು ಮಾಡುವಾಗ ಎಕರೆಗೊಂದು ಮರ ಸಹ ಇಲ್ಲ, ನಾಲ್ಕು ಎಕರೆಗಳಲ್ಲಿ ಎರಡು ಮರ ಮಾತ್ರ ಹಾಕಿದ್ದಾರೆ ಎಂದು ಹೇಳುವುದು ಬಹಳ ಆಶ್ಚರ್ಯಕರ.

ಇನ್ನೊಂದು ಕಡೆ ಫೈರ್‌ವುಡ್ ಬೆಳೆಸುವ ಯೋಜನೆಯಿದೆ. ಅಲ್ಲಿ ದಟ್ಟವಾಗಿ ಬೆಳೆದಿರುವ ಲಾಂಟಾನ ಮಾತ್ರವಿದೆ, ಅದರಿಂದ ಮೂರು ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಲಾಂಟಾನವೇ ಅಲ್ಲಿ ಬೆಳೆಸಿರುವ ಸೌದೆ, ಫೈರ್‌ವುಡ್ ಬೇರೆ ಇಲ್ಲ. ಹೋದ ವರ್ಷವೇ ಈ ವಿಚಾರ ಹೇಳಿದೆ. ಸಂಬಂಧಪಟ್ಟ ಮಂತ್ರಿಗಳಾಗಲಿ, ಚೀಫ್ ಕನ್ಸರ್ವೇಟರಾಗಲಿ ಅಥವಾ ಉಳಿದ ಆಫೀಸರುಗಳಾಗಲಿ ಯಾರೂ ಅಲ್ಲಿಗೆ ಬರಲಿಲ್ಲ. ಒಂದು ಎಕರೆಗೂ ಮರ ನೆಡಸುವ ಯೋಜನೆ ಮಾಡಲಿಲ್ಲ.

ಶ್ರೀ ಗೋಪಾಲಗೌಡರು ಮನೆ ಕಟ್ಟುವುದಕ್ಕೆ ನಾಟಾ ಸಿಕ್ಕುವುದಕ್ಕೆ ಬಹಳ ತೊಂದರೆಯಾಗಿದೆಯೆಂದು ಹೇಳಿದರು, ಅದು ನಿಜ, ಬೈಲು ಸೀಮೆಯಲ್ಲಿ ಗಾಡಿ ಮಾಡುವುದಕ್ಕೆ ಮರ ಕೊಡಿ ಎಂದು ಕೇಳಿದರೆ ಅದಕ್ಕೆ ಅರಣ್ಯ ಇಲಾಖೆ ಏನೂ ವ್ಯವಸ್ಥೆ ಮಾಡುತ್ತಿಲ್ಲ. ವ್ಯವಸಾಯಗಾರರಿರುವ ಈ ದೇಶದಲ್ಲಿ ಗಾಡಿಗೆ ಆವಶ್ಯಕವಾಗಿರುವ ಮರ ಬೇಕೆಂದರೆ ಅದನ್ನು ಒದಗಿಸದಿದ್ದರೆ ವ್ಯವಸಾಯ ಮುಂದುವರಿಯುವುದು ಹೇಗೆ? ಸರ್ಕಾರದವರು ರೈತರಿಗೆ ಸಹಾಯ ಮಾಡುತ್ತಾರೆಂಬುದನ್ನು ತಿಳಿಯುವುದು ಹೇಗೆ? ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ವನಮಹೋತ್ಸವವೆಂದು ಮಾಡಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಲಕ್ಷಾಂತರ ಗಿಡ ಹಾಕಿದ್ದೇವೆಂದು ಪ್ರೆಸ್ ನೋಟ್ ಹೊರಡಿಸಿ ಅದರಲ್ಲಿ ಎಷ್ಟೋ ಲಕ್ಷ ಗಿಡ ಹಾಕಿದ್ದೇವೆಂದು ತಿಳಿಸುತ್ತಾರೆ. ಏಳೆಂಟು ವರ್ಷಗಳಿಂದ ಆ ಗಿಡಗಳೇನು ಹಾಕಿದ್ದರೋ ಅವೆಲ್ಲಾ ಬೆಳೆದಿದ್ದರೆ ಮೈಸೂರು ದೇಶವೇ ಒಂದು ದೊಡ್ಡ ಕಾಡಾಗಿ ಕಾಣುತ್ತಿತ್ತೋ ಏನೋ. ಲಕ್ಷಾಂತರ ಗಿಡ ಹಾಕಿರುವಕಡೆ ನೂರಾರು ಗಿಡ ಕೂಡ ಕಣ್ಣಿಗೆ ಬೀಳುವುದಿಲ್ಲ. ವ್ಯರ್ಥವಾಗಿ ಇದಕ್ಕೆ ಹಣ ಖರ್ಚಾಯಿತಲ್ಲಾ ಎಂದು ಚಿಂತೆಯಾಗಿದೆ.

ಇನ್ನು ಬೆಂಗಳೂರು-ಮೈಸೂರು ರಸ್ತೆಯಲ್ಲಿ ತೆಂಗಿನ ಗಿಡ ನೆಡುವ ಯೋಜನೆಯಿದೆ. ಇದು ವನಮಹೋತ್ಸವಕ್ಕೆ ಸೇರಿದೆಯೋ ಅಥವಾ ಫಾರೆಸ್ಟ್ ಇಲಾಖೆಗ ಸೇರಿದೆಯೋ ಗೊತ್ತಿಲ್ಲ. ಆರು ರೂಪಾಯಿಗಳನ್ನು ಕೊಟ್ಟು ಒಂದು ಗೂಡು ಕಟ್ಟಿ ನೀರಿಲ್ಲದಿರುವ ಕಡೆ ತೆಂಗಿನ ಗಿಡ ಹಾಕುವ ಪ್ರಯತ್ನವಿದೆ. ತೆಂಗಿನ ತೋಟ ಬೆಳೆಯುವ ಕಷ್ಟ ಸರ್ಕಾರಕ್ಕೆ ಗೊತ್ತಿದ್ದರೆ ಅಲ್ಲಿ ತೆಂಗಿನ ಗಿಡ ಹಾಕುವುದಕ್ಕೆ ಸರ್ಕಾರ ಕೈಹಾಕುತ್ತಿರಲಿಲ್ಲ. ಸಾಮಾನ್ಯವಾಗಿ ರಸ್ತೆ ಪಕ್ಕದಲ್ಲಿ ನೆರಳಿಗಾಗಿ ಮರ ನೆಡುವುದು ಪೂರ್ವದಿಂದ ಬಂದಿರುವ ಪದ್ಧತಿ. ಈ ತೆಂಗಿನ ಗಿಡದಿಂದ ನೆರಳೂ ಇಲ್ಲ, ಆ ಗಿಡ ಬೆಳೆಯುವುದೂ ಇಲ್ಲ; ಇಂಥ ಕಡೆ ತೆಂಗಿನ ಗಿಡ ಹಾಕುವ ವ್ಯವಸ್ಥೆ ವನಮಹೋತ್ಸವಕ್ಕೆ ಸಂಬಂಧಪಟ್ಟಿದೆಯೆ ಅಥವಾ ಫಾರೆಸ್ಟ್ ಇಲಾಖೆ ಅಫಾರೆಸ್ಟೇಷನ್ನಿಗೆ ಸಂಬಂಧಪಟ್ಟಿದೆಯೆ ಅಥವಾ ಬೇರೆ ಯಾವುದಾದರೂ ಯೋಜನೆಗೆ ಸಂಬಂಧಪಟ್ಟಿದೆಯೆ ಎಂಬುದನ್ನು ಮಂತ್ರಿಗಳು ಹೇಳಬೇಕು.

ಇನ್ನು ಫಾರೆಸ್ಟ್ ಇಲಾಖೆಯಲ್ಲಿ ಪ್ರಿಸರ್ವೇಷನ್ ಆಫ್ ವೈಲ್ಡ್ ಲೈಫ್ ಎಂಬ ಬಾಬಿಗೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಅದರ ತಪಶೀಲನ್ನು ನೋಡಿದರೆ ' construction of a hotel, telephone connection, electrical equipment' ಎಂಬುದೆಲ್ಲಾ ಅದರಲ್ಲಿ ಅಡಕವಾಗಿವೆ, ಇದು ಪ್ರಿಸರ್ವೇಷನ್ ಆಫ್ ವೈಲ್ಡ್ ಲೈಫ್, ವನವಿಹಾರಕ್ಕೆ ಹೋಗುವವರ ಸೌಕರ್ಯಕ್ಕಾಗಿ ಹೋಟಲನ್ನು ಕಟ್ಟಿಸುವುದನ್ನು ವೈಲ್ಡ್ ಲೈಫ್ ಪ್ರಿಸರ್ವೇಷನಿಗೆ ಎಂದು ಅರ್ಥಮಾಡಿಕೊಳ್ಳಬೇಕೆ? ಈಗ ಸಾಮಾನ್ಯವಾಗಿ ಕೆ. ಆರ್. ಎಸ್.ನಲ್ಲಿ ಒಂದು ದೊಡ್ಡ ಹೋಟಲನ್ನು ವಿಹಾರಕ್ಕಾಗಿ ಬರುವವರಿಗಾಗಿ ಕಟ್ಟಿದ್ದಾರೆ. ಅದರ ಖರ್ಚನ್ನು ತಡೆಕೊಂಡರೆ ಸಾಕಾಗಿದೆ, ಹಾಗಿರುವಾಗ ಬಂಡೀಪುರ ಫಾರೆಸ್ಟಿನಲ್ಲಿ ಹೋಟಲನ್ನು ಕಟ್ಟಿ ಟೆಲಿಫೋನ್ ಕನೆಕ್ಷನ್, ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಇವನ್ನೆಲ್ಲಾ ಒದಗಿಸಿ ಎರಡು ಲಕ್ಷ ರೂಪಾಯಿಗಳ ನಷ್ಟ ಮಾಡುವುದೇಕೋ ಗೊತ್ತಿಲ್ಲ. ಅದೇ ಮುಖ್ಯ ಮಂತ್ರಿಗಳು ಅಸ್ತಿಭಾರ ಶಿಲೆ ಹಾಕಿದ ಸ್ಕೂಲಿನಲ್ಲಿ ಮೂರು ಅಡಿ ಗೋಡೆ ಕೂಡ ಎದ್ದಿಲ್ಲ. ಉದಾಹರಣೆಗೆ ತಿಪಟೂರು ತಾಲ್ಲೂಕು ಅಲ್ಬೂರಿನಲ್ಲಿ ಮಿಡ್ಲ್ ಸ್ಕೂಲು ಕಟ್ಟಡಕ್ಕೆ ಫೌಂಡೇಷನ್ ಸ್ಟೋನ್ ಹಾಕಿ ಮೂರು ವರ್ಷಗಳಾದವು. ಆ ಕಟ್ಟಡ ಇನ್ನೂ ಆಗಿಲ್ಲ. ಹಾಗಿರುವಾಗ ಬಂಡೀಪುರದಲ್ಲಿ ಎರಡು ಲಕ್ಷ ರೂಪಾಯಿಗಳ ಕಟ್ಟಡವೇಕೆ? ಕೆ. ಆರ್. ಎಸ್. ನಲ್ಲಿರುವ ಹಾಗೆ ವನವಿಹಾರಕ್ಕಾಗಿ ಕಟ್ಟಿಸುವುದಾದರೆ ಅದಕ್ಕಿಂತ ಅಕ್ಷಮ್ಯವಾದ ಅಪರಾಧ ಇನ್ನೊಂದಿಲ್ಲವೆಂಬ ಭಾವನೆಯಿದೆ. ಸ್ವಾಮಿ, ರೈತರುಗಳಿಂದ ಬರತಕ್ಕಂಥ ದುಡ್ಡನ್ನು ಖರ್ಚುಮಾಡುವಾಗ ಅದನ್ನು ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಖರ್ಚು ಮಾಡಬೇಕಾದದ್ದು ನ್ಯಾಯ. ಹಾಗೆ ಅದನ್ನು ಖರ್ಚು ಮಾಡುವಾಗ ಮೊಟ್ಟಮೊದಲು ಆ ಹಣವನ್ನು ಯಾವ ಬಾಬಿಗೆ ಖರ್ಚುಮಾಡಬೇಕು ಎಂಬುದನ್ನು ಆಲೋಚನೆ ಮಾಡದೆ ಈ ದಿವಸ preservation of wild life ಎಂಬ ಹೆಸರಿಟ್ಟು ಕಾಡಿನಲ್ಲಿ ಹೋಟಲು, ಟೆಲಿಫೋನ್ ಕನೆಕ್ಷನ್ ಮತ್ತು ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಇತ್ಯಾದಿಗಳನ್ನು ಒದಗಿಸತಕ್ಕ ಬಗ್ಗೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿರುವುದನ್ನು ನೋಡಿದರೆ ಈ ನಮ್ಮ ಸರ್ಕಾರ ಯಾವ ನೀತಿಯನ್ನು ತೋರಿಸುತ್ತದೆ ಮತ್ತು ಅನುಸರಿಸುತ್ತಿದೆ ಎನ್ನುವುದರ ಜೊತೆಗೆ ಇದು ಯಾವ ದಾರಿಯಲ್ಲಿ ಹೋಗುತ್ತಿದೆ ಎಂಬುದೂ ಗೊತ್ತಾಗುತ್ತದೆ. ಸರ್ಕಾರದವರು ಈಗಲೂ ಕೂಡ ಮನಸ್ಸು ಮಾಡಿ ಈ ಕಾಡನ್ನು ಅಭಿವೃದ್ಧಿಗೊಳಿಸುವುದಕ್ಕೇ ಈ ಮೊಬಲಗನ್ನು ಖರ್ಚುಮಾಡಬೇಕೆಂದು ಹೇಳುತ್ತೇನೆ. ಇದಕ್ಕೆಲ್ಲಾ ಸರ್ಕಾರ ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಹಿಂದೆ ನಾನು ಆ ಬಂಡೀಪುರದ ಕಾಡಿಗೆ ಹೋಗಿ ಅದನ್ನು ನೋಡತಕ್ಕಂಥ ಸುಯೋಗ ನನಗೆ ಒಂದೆರಡು ಸಾರಿ ದೊರೆತಿತ್ತು. ಅಲ್ಲಿ ಈಗಾಗಲೇ 3-4 ಬಹಳ ಸೊಗಸಾದ ಕಟ್ಟಡಗಳಿವೆ. ಅಂಥ ಕಾಡಿನ ಮಧ್ಯದಲ್ಲಿ ಅಷ್ಟು ಸೊಗಸಾದಂಥ ಕಟ್ಟಡಗಳನ್ನು ಕಟ್ಟಿಸತಕ್ಕಂಥ ಆವಶ್ಯಕತೆ ಏನಿತ್ತು ಅನ್ನುವುದೇ ನನಗೆ ಗೊತ್ತಾಗಲಿಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಹೀಗೆಲ್ಲಾ ಮಾಡುವುದು ಖಂಡಿತ ಸರಿಯಾದದ್ದಲ್ಲ. ಈ ಇಲಾಖೆಗೆ ಒದಗಿಸಿರುವ ಮೊಬಲಗನ್ನು ಅಫಾರೆಸ್ಟೇಷನಿಗೋಸ್ಕರವೇ ಉಪಯೋಗಿಸಬೇಕೆಂದು ನಾನು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಕಾಡುಗಳನ್ನು ಏತಕ್ಕೋಸ್ಕರವಾಗಿ ಉಳಿಸಿಕೊಂಡು ಬರಬೇಕು ಮತ್ತು ಏನು ಈ ಕಾಡುಗಳಿಂದ ನಮಗೆ ಪ್ರಯೋಜನವಿದೆ ಎನ್ನುವುದನ್ನು ಅನೇಕ ಕಾಲದಿಂದ ನಾವು ಸರ್ಕಾರದವರಿಗೆ ತಿಳಿಸುತ್ತಲೇ ಬಂದಿದ್ದೇವೆ. ಅದಕ್ಕೆ ಪ್ರತಿಯಾಗಿ ಅವರೂ ಕೂಡ ಹೇಳಿದ್ದನ್ನೇ ಹೇಳುತ್ತ ಮಾಡುವುದನ್ನು ಮಾಡುತ್ತಲೇ ಬರುತ್ತಿದ್ದಾರೆ. ಆದರೆ ವ್ಯವಸಾಯ ಮಾಡತಕ್ಕ ಜಮೀನು ಇಷ್ಟಿದ್ದರೆ. ಅದಕ್ಕೆ ಇಷ್ಟೇ ಕಾಡಿರಬೇಕು ಎಂಬ ಒಂದು ನಿಕಟವಾದ ಸಂಬಂಧ ಇವೆರಡಕ್ಕೂ ಇರುತ್ತದೆ. ಕಾರಣವೇನೆಂದರೆ ಎಷ್ಟು ದೇಶದಲ್ಲಿ ಕಾಡು ಪುಷ್ಕಳವಾಗಿದ್ದರೆ ಅಲ್ಲಿ ಅಷ್ಟು ಮಳೆ ಚೆನ್ನಾಗಿ ಬೀಳುತ್ತದೆ ಎಂಬ ಒಂದು ನಂಬಿಕೆ ಮತ್ತು ಭಾವನೆಗಳು ನಮ್ಮಲ್ಲಿರುತ್ತವೆ. ಈ ಒಂದು ಕಾರಣದಿಂದ ನಾವು ಕಾಡು ಪ್ರದೇಶಗಳನ್ನು ವ್ಯವಸಾಯೋದ್ದೇಶಕ್ಕಾಗಿ ಏಕೆ ಕೇಳಬೇಕು, ನಮ್ಮಿಂದ ಈ ಮಳೆ ಬರುವುದಕ್ಕೆ ಏಕೊಂದು ಅಡ್ಡಿಯಾಗಬೇಕು ಎನ್ನುವ ಉದ್ದೇಶದಿಂದ ನಾವು ಹಾಗೆ ಈ ಭೂಮಿಯನ್ನು ಕೇಳತಕ್ಕ ಆವಶ್ಯಕತೆಯಿದ್ದರೂ ಆ ಭೂಮಿಯನ್ನು ಕೇಳದೆ ಹಾಗೇ

(ಶ್ರೀ ಕೆ. ಪ್ರಭಾಕರ್.)

ಸುಮ್ಮನಿದ್ದೆವು. ಆದರೆ ಸರ್ಕಾರದವರು ಅಲ್ಲಿ ಎಕರೆಗಳನ್ನು ಮಾತ್ರ ಲೆಕ್ಕಕ್ಕೆ ಉಳಿಸಿಕೊಂಡು ಬರುತ್ತಿದ್ದಾರೆಯೇ ಶಿವಾಯಿ ಅಲ್ಲಿ ಮರಗಳನ್ನು ಅಭಿವೃದ್ಧಿಗೊಳಿಸುವುದಾಗಲಿ ಅಥವಾ ಇರತಕ್ಕ ಮರಗಳನ್ನು ಉಳಿಸಿಕೊಂಡು ಬರುವುದಾಗಲಿ ಯಾವುದನ್ನೂ ಮಾಡದೆ ಹಾಗೆಯೇ ಈ ಇಲಾಖೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ನಾವು ಈ ಫಾರೆಸ್ಟ್ ಇಲಾಖೆಯನ್ನು ಒಂದು ಆದಾಯ ತರತಕ್ಕಂಥ ಇಲಾಖೆಯೆಂದು ಭಾವಿಸಿದ್ದೆವು. ಆದರೆ ಈ ಇಲಾಖೆಯು ಹಾಗೆ ವಿದ್ಯಾಭ್ಯಾಸದ ಇಲಾಖೆಯನ್ನು ಭಾವಿಸಲು ಆಗುವುದಿಲ್ಲ. ಅಲ್ಲಿ ಈ ದಿವಸ ಒಬ್ಬ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳವೇನು ? ಅಲ್ಲಿ ಹುಡುಗರಿಂದ ವಸೂಲಾಗುತ್ತಿರುವ ಫೀಜೇನು ಎಂದು ಲೆಕ್ಕ ಹಾಕುವುದಿಲ್ಲ. ಆದಕಾರಣ ಇದನ್ನು ಒಂದು ಅರ್ನಿಂಗ್ ಡಿಪಾರ್ಟ್‌ಮೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ರೈಲ್ವೆ ಇಲಾಖೆ ಇದೆ. ಈ ಇಲಾಖೆಯು ಆದಾಯ ಮತ್ತು ವೆಚ್ಚಗಳನ್ನು ಲೆಕ್ಕ ಹಾಕಿ ಅದಕ್ಕೆ ಒಂದು ಬಡ್ಜೆಟ್ ತಯಾರಿಸಿ ಅದರಿಂದ ಬರುತ್ತಿರುವಂಥ ಆದಾಯವನ್ನು ಇತರ ಬಾಬುಗಳಿಗೆ ಉಪಯೋಗಿಸಲು ಎಂದರೆ ದೇಶಾಭಿವೃದ್ಧಿಯ ಕಾರ್ಯಗಳನ್ನು ನಡೆಸಲು ಆ ಹಣವನ್ನು ತೆಗೆದುಕೊಳ್ಳಿ ಎಂದು ಹೇಳತಕ್ಕ ಮಟ್ಟದಲ್ಲಿ ರೈಲ್ವೆ ಇಲಾಖೆ ಕೆಲಸ ನಡೆಸುತ್ತಿದೆ. ಆದರೆ ಈ ಫಾರೆಸ್ಟ್ ಇಲಾಖೆ ಆ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ. ಈ ದಿವಸ ಈ ಫಾರೆಸ್ಟ್ ಇಲಾಖೆಯವರು ನರ್ಸರಿ ಬೆಳೆಸುವ ಕೆಲಸವನ್ನು ಕೈಗೊಂಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ನಾವು ಇದನ್ನು ನಂಬುವುದಕ್ಕಾಗುವುದಿಲ್ಲ. ಈ ಕೆಲಸ ಅಷ್ಟು ಸಮರ್ಪಕವಾದ ರೀತಿಯಲ್ಲಿ ನಡೆಯುತ್ತದೆಂದು ಕೂಡ ಹೇಳುವುದಕ್ಕಾಗುವುದಿಲ್ಲ. ಇನ್ನು ಟಿಂಬರ್‌ಗಳನ್ನು ಖರ್ಚುಮಾಡತಕ್ಕ ಬಗ್ಗೆ ಅವುಗಳಲ್ಲಿ ಅನುಸರಿಸಬೇಕಾದ ಒಂದು ಸಕ್ರಮವನ್ನು ಇವರು ಅನುಸರಿಸುತ್ತಿಲ್ಲ. ಅಂತು ಒಂದು ಸುವ್ಯವಸ್ಥಿತವಾದ ಆಚರಣೆಯನ್ನೇ ಇವರು ಕಂಡುಹಿಡಿದಿಲ್ಲ. ವರ್ಷೇ ವರ್ಷ ಸರ್ಕಾರದವರು ತಮ್ಮ ಯೋಜನೆಗಳನ್ನು ಕೊಡುತ್ತಲೇ ಬಂದಿದ್ದಾರೆ. ಆದರೆ ಕೆಲಸ ಮಾತ್ರ ಏನೂ ನಡೆದಿಲ್ಲ. ಆದಕಾರಣ ಈಗ ಇವರು ಹೇಳುತ್ತಿರುವುದನ್ನು ಸರಿಯಾಗಿದೆಯೆಂದು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ಫಾರೆಸ್ಟ್ ಬಾಬಿನಲ್ಲಿ ಎಕ್ಸ್‌ಪರ್ಟ್‌ಗಳಾಗಿ ಬರಲು ನಮ್ಮ ಜನರು ಡೆಹರಾಡೂನ್ ಇತ್ಯಾದಿಗಳಿಗೇನೋ ಹೋಗಿ ಬರುತ್ತಿದ್ದಾರೆ. ಆದರೆ ಅವರು ಅಲ್ಲಿಗೆ ಹೋಗಿ ಹೆಚ್ಚಿನ ವಿದ್ಯವನ್ನು ಕಲಿತುಕೊಂಡು ಇಲ್ಲಿಗೆ ವಾಪಸ್ಸು ಬಂದ ಮೇಲೆ ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕ ಬಗ್ಗೆ ಅಲ್ಲಲ್ಲೇ ಜನರು ಏನೇನೋ ಮಾತನಾಡಿಕೊಳ್ಳುತ್ತಿದ್ದಾರೆ. ಆ ರೀತಿ ಎಕ್ಸ್‌ಪರ್ಟ್‌ಗಳಾಗಿ ಬರತಕ್ಕಂಥ ಜನರ ಮನಸ್ಸಿನಲ್ಲೇನೋ ಇಲ್ಲಿಯ ಅರಣ್ಯಗಳನ್ನು ಬಹಳ ಚೆನ್ನಾಗಿಟ್ಟುಕೊಳ್ಳಬೇಕೆಂಬಆಸೆಯಿರುತ್ತದೆ. ತೇಗ, ಹೊನ್ನೆ ಇತ್ಯಾದಿ ಮರಗಳನ್ನು ಹೊಸದಾಗಿ ಬೆಳೆಸುವುದಕ್ಕೂ ಮತ್ತು ಈಗ ಹಾಲಿ ಇರತಕ್ಕಂಥಾ ಮರಗಳನ್ನು ಉಳಿಸಿಕೊಂಡು ಬರುವುದಕ್ಕೂ ಅವರ ಮನಸ್ಸಿನಲ್ಲಿ ಒಂದು ಹೆಚ್ಚಿನ ಆಸೆ ಇದೆ. ಇದಕ್ಕೆ ಸರ್ಕಾರದವರು ಒಂದು ಸರಿಯಾದ ಅವಕಾಶ ಮಾಡಿಕೊಡಬೇಕು.

ಇನ್ನು ಕೆಲವು ಕಡೆಗಳಲ್ಲಿ ಫಾರೆಸ್ಟ್ ಇಲಾಖೆಯವರು ಕೆಲವು ನಾಮಕಾವಾಸ್ತೆ ಫಾರೆಸ್ಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಅವನು ಹೆಸರಿಗೆ ಮಾತ್ರ ಕಾಡುಗಳೆಂದು ಕರೆಯುತ್ತಿದ್ದಾಗ್ಯೂ ಅಲ್ಲಿ ಬೆಳೆದಿರತಕ್ಕದ್ದು ಬರಿ ಲಾಂಟಾನ ಮತ್ತು ಇತರ ಮುಳ್ಳುಗಿಡಗಳುಮಾತ್ರ. ಹೀಗೆ ಕೇವಲ ಹೆಸರಿಗೆ ಮಾತ್ರ ಫಾರೆಸ್ಟ್ ಎಂದು ಇಟ್ಟುಕೊಂಡಿರತಕ್ಕ ಜಮೀನನ್ನು ಜಮೀನಿಲ್ಲದ ಜನರಿಗಾದರೂ ವ್ಯವಸಾಯಕ್ಕೆ ಬಿಟ್ಟುಕೊಡಿ ಎಂಬುದಾಗಿ ಎಷ್ಟೇ ಕೇಳಿಕೊಳ್ಳುತ್ತಿದ್ದಾಗ್ಯೂ ಸರ್ಕಾರದವರು ಅದರಲ್ಲಿ ಒಂದು ಇಂಚಿನಷ್ಟು ಜಮೀನನ್ನು ಕೂಡ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. 'ಎಂದರೆ ನಮ್ಮ ಅರಣ್ಯ ಶಾಖಾಮಂತ್ರಿಗಳು ಮೇಲಿನವರು ಹೇಗೆ ಹೇಳಿದರೆ ಹಾಗೇ ನಡೆದುಕೊಳ್ಳುವಂಥ ಒಂದು ಪಾಲಸಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಡಾ|| ನಾಗನಗೌಡರು ನಮ್ಮ ಸುದೈವದಿಂದ ನಮ್ಮ ಮೈಸೂರಿಗೆ ಮಂತ್ರಿಗಳಾಗಿ ಬಂದಮೇಲೆ ಇವರು ಮೇಲಿನವರ ಮಾತನ್ನು ಒಂದು ಇಂಚೂ ಸಹ ಮೀರಿ ಮುಂದಕ್ಕೆ ಹೋಗುವುದಿಲ್ಲ. ಆ ನೆರಳನ್ನು ಬಿಟ್ಟು ಹೋಗಲು ಇವರಿಗೆ ಸಾಧ್ಯವೇ ಇಲ್ಲ. ಅವರು ಜಮೀನನ್ನು ಕೊಡಿ ಎಂದರೆ ಇವರು ಕೊಡುತ್ತಾರೆ ; ಬೇಡ ಎಂದರೆ ಬಿಡುತ್ತಾರೆ. ಈ ರೀತಿಯ ಒಂದು ಪಾಲಸಿಯ ಮೇಲೆ ಇವರು ಹೋಗುತ್ತಿದ್ದಾರೆ. ನಾನು ಇಲ್ಲಿಗೆ 4-5 ವರ್ಷಗಳಿಂದಲೂ ಒಂದೇ ಸಮನಾಗಿ ಆ ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ಕೃಷ್ಣರಾಜಪುರ ಪ್ಲಾನ್‌ಟೇಷನ್ನಿನಲ್ಲಿರತಕ್ಕ ಜಮೀನನ್ನು ಜಮೀನಿಲ್ಲದ ಬಡಜನರಿಗೆ ಕೊಡಿ ಎಂದು ಕೇಳುತ್ತಲೇ ಬಂದಿದ್ದೇನೆ. ಮಾನ್ಯ ಮಂತ್ರಿಗಳು ಆ ಜಮೀನನ್ನು ಆದಷ್ಟು ಜಾಗ್ರತೆ ಮಂಜೂರು ಮಾಡುವುದಾಗಿ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಅದಿನ್ನೂ ಮಂಜೂರಾಗಿಲ್ಲ. ಆ ಜಮೀನಿನಲ್ಲಿ ಹುರುಳಿ ವಿನಾ ಮತ್ತೇನೂ ಬೆಳೆಯುವುದಿಲ್ಲ. ಈ ದಿವಸ ಆ ಕಾಡು ಸುಮ್ಮನೆ ಏಕೆ ಪಾಳು ಬಿದ್ದಿರಬೇಕೆಂದು ಬಡ ರೈತರು ಯಾರಾದರೂ ಹುರುಳಿ ಇತ್ಯಾದಿ ಬೆಳೆಗಳನ್ನಿಟ್ಟರೆ ಅದಕ್ಕೂ ಅಲ್ಲಿನ ಅಧಿಕಾರಿಗಳು ತಕರಾರ್ ತಃಖ್ತೆ ಇತ್ಯಾದಿಗಳನ್ನು ಇಡುತ್ತಿದ್ದಾರೆ. ಆದರೆ ಬಹುಶಃ ಸರ್ಕಾರಕ್ಕೆ ಇಂಥ ಬಡವರಿಗೆ ಅನುಕೂಲ ಮಾಡಲು ಮನಸ್ಸಿಲ್ಲವೆಂದು ಕಂಡು ಬರುತ್ತಿದೆ. ಹಿಂದಿನ ಕಾಲದಲ್ಲಿ ಶ್ರೀ ಕೆ. ವಿ. ಅನಂತರಾಮನ್ ಇತ್ಯಾದಿ ಅಧಿಕಾರಿಗಳು ಇದ್ದಂಥಾ ಕಾಲದಲ್ಲಿ ಅವರ ಅಡಿಗೆ ಆಳುಗಳು ಇತ್ಯಾದಿಯವರಿಗೇನಾದರೂ ಜಮೀನು ಬೇಕೆಂದು ಅಪೇಕ್ಷಿಸಿದ್ದರೆ ಅವರು ಎಲ್ಲಿಯೇ ಜಮೀನಿದ್ದರೂ ಆದರಲ್ಲಿ 25-30 ಎಕರೆಗಳನ್ನು ಅವರಿಗೆ ಕೂಡಲೇ ಮಂಜೂರು ಮಾಡುತ್ತಿದ್ದರು. ಆದಿವಸ ರೈತರು ಬೇಡವಾಗಿತ್ತು. ಆದರೆ ಈ ಹೊತ್ತೂ ಅದೇರೀತಿ ತಮ್ಮ ಮನಸ್ಸಿನಲ್ಲೂ ಆ ರೈತನ ವಿಚಾರದಲ್ಲಿ ಆಸಕ್ತಿ ಇದ್ದಂತೆ ಕಾಣುತ್ತಿಲ್ಲವೆಂದೇ ಹೇಳಬೇಕಾಗಿದೆ. ಸಾಲದ್ದಕ್ಕೆ ತಾವೀಗ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯ ವ್ಯವಸ್ಥೆಯನ್ನು ಬೇರೆ ಜಾರಿಗೆ ತರುವುದಾಗಿ ಹೇಳುತ್ತಿದ್ದೀರಿ. ಆದರೆ ಜಮೀನಿಲ್ಲದವರಿಗೆ ಜಮೀನು ಕೊಡಿ ಎಂದರೆ ಮಾತ್ರ ಕೊಡುತ್ತಿಲ್ಲ! ಚುಂಚನ ಫಾರೆಸ್ಟಿನಲ್ಲಿ ಹರಿಜನರಿಗೆ ಜಮೀನು ಕೊಡಿ ಎಂದು ಕೇಳಿದರೆ ಇಲ್ಲ ಎಂದು ಹೇಳುತ್ತಿದ್ದಾರೆ. ಕಾರಣ ಅಲ್ಲಿ ಯಾರೋ ಒಬ್ಬರು ಕ್ರಿಶ್ಚಿಯನ್ನರಿದ್ದರು, ಅವರು ಅಲ್ಲಿ ಏನೋ ಒಂದು ಪ್ಲಾನ್ ಹಾಕಬೇಕೆಂದು ಹೇಳಿದ್ದಾರಂತೆ. ಅದಕ್ಕಾಗಿ ಆ ಜಮೀನನ್ನೆಲ್ಲಾ ಅವರಿಗೆ ಕೊಡಬೇಕೆಂದು ಮಾಡಿದ್ದಾರಂತೆ. ಹೀಗೆ "ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು" ಎನ್ನುವಂತೆ ಕೆಲಸಗಳು ನಡೆಯುತ್ತಿವೆಯೇ ಹೊರತು ಒಂದು ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ.

ಈ ಕಾರಣಗಳಿಂದ ಎಲ್ಲಿ ಫಾರೆಸ್ಟನ್ನು ಬೆಳೆಸುವುದಕ್ಕೆ ಅವಕಾಶವಿಲ್ಲವೋ ಅಂಥ ಭೂಮಿಗಳನ್ನು ಭೂಮಿಯಿಲ್ಲದ ರೈತರಿಗೆ ವ್ಯವಸಾಯಕ್ಕಾಗಿ ಬಿಟ್ಟುಕೊಡುವುದು ಒಳ್ಳೆಯದು. ನಮ್ಮ ದೇಶದಲ್ಲಿ ಜಮೀನಿಲ್ಲದೆ ರೈತರಿಗೆ ಸುಮಾರು 81 ಸಾವಿರ ಎಕರೆ ಸಾಗುವಳಿಯಾಗದ ಭೂಮಿಯಿದೆ, ಅದನ್ನು ಕೊಡಿ ಎಂದು ಕೇಳಿದ್ದಕ್ಕೆ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಆ ಜಮೀನನ್ನು ಹಂಚಿಕೊಡಲು ಮೂರು ಜನರ ಒಂದು ಕಮಿಟಿಯನ್ನು ಮಾಡುವುದಾಗಿ ಹೇಳಿದ್ದು ಇನ್ನೂ ಆಗುವುದರಲ್ಲೇ ಇದೆ. ಈ ವಿಚಾರದಲ್ಲಿ ಇವರು tossing the baby ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಬಿಲ್ಲನ್ನು ಮಂಡಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದರು ಅದನ್ನೂ ನಿರೀಕ್ಷೆ ಮಾಡಿದ್ದಾಯಿತು. ಆದರೆ ಏನೂ ಉಪಯೋಗವಾಗಲಿಲ್ಲ. ತಾವು ಹಿಂದಿನ ಪದ್ಧತಿಗಳನ್ನೆಲ್ಲಾ ರದ್ದುಮಾಡಿ ಎಲ್ಲೆಲ್ಲಿ ಫಾರೆಸ್ಟನ್ನು ಬೆಳೆಸಲು ಸಾಧ್ಯವಿದೆಯೋ ಅಲ್ಲೆಲ್ಲಾ ಮರಗಳನ್ನು ಅಭಿವೃದ್ಧಿಗೆ ತರಬೇಕೆಂದೂ, ಉಪಯೋಗಕ್ಕೆ ಬಾರದ್ದನ್ನು ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂದೂ ಸಲಹೆ ಮಾಡುತ್ತೇನೆ. ಈ ವಿಚಾರಗಳಲ್ಲಿ ತಾವು ಕ್ಯಾಬಿನೆಟ್ ಮೀಟಿಂಗ್ ನಡೆಸುವಾಗ ದೇಶಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರದಲ್ಲೂ ಒಂದೇ ರೀತಿ ತೀರ್ಮಾನ ತೆಗೆದುಕೊಳ್ಳಬೇಕು. ವಿನಾಯಿತಿ ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಇಲ್ಲ ಎನ್ನುವುದು ಸರಿಯಲ್ಲ. ಆದಕಾರಣ ಇನ್ನಾದರೂ ಈ ಅರಣ್ಯಗಳ ಅಭಿವೃದ್ಧಿ ಕಾರ್ಯವನ್ನು ಚೆನ್ನಾಗಿ, ಜಯಪ್ರದರಾಗಿ ನಡೆಸಿಕೊಂಡು ಬರಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈಗ ಮಲೆನಾಡಿನಲ್ಲಿ ಕಾಡು ಬಹಳವಾಗಿ ನಶಿಸಿ ಹೋಗುತ್ತಾ ಇದೆ. ಈಗಾಗಲೇ ಈ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ನಾನೂ ಸಹ ಇದೇ ವಿಚಾರವಾಗಿ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ, ಆ ಉದ್ದೇಶದಿಂದ ನಾನೀಗ ನಿಂತಿದ್ದೇನೆ. ಈ ದಿವಸ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಸೌದೆಗಾಗಿ, ಇದ್ದಿಲಿಗಾಗಿ ಎಷ್ಟೋ ಸಾವಿರಾರು ಎಕರೆ ಮಲೆನಾಡು ಪ್ರದೇಶ ಈಗ ಬರಿದಾಗಿದೆ. ಇನ್ನು ಭದ್ರಾ ಛಾನಲ್ ಕಾಲುವೆ ಬಂದನಂತರ ಅದರ ಅಕ್ಕಪಕ್ಕಗಳಲ್ಲಿ ಭತ್ತದ ವ್ಯವಸಾಯಕ್ಕಾಗಿ ಅನೇಕ ಎಕರೆ ಕಾಡಿರತಕ್ಕಂಥ ಭೂಮಿ ಬೀಳಾಗುತ್ತದೆ. ಇದರ ಜೊತೆಗೆ ಇನ್ನೂ ಹೊನ್ನೆ ಮರದ ಯೋಜನೆ ಪ್ರಾರಂಭವಾದನಂತರ ಅಲ್ಲಿ ಬೇರೆ ಕಾಡು ನಾಶವಾಗುತ್ತದೆ. ಅಂತೂ ಈ ನಾನಾ ಕಾರಣಗಳಿಂದ ಮಲೆನಾಡಿನಲ್ಲಿದ್ದಂಥ ಅರಣ್ಯ ಸಂಪತ್ತು ಈಗ ಬಹಳ ವೇಗವಾಗಿ ಕಮ್ಮಿಯಾಗುತ್ತಿದೆ. ಇನ್ನು ತುಂಗಾ ಬಲಕಾಲುವೆಗಾಗಿ ಈಗಾಗಲೇ ಹತ್ತು ಸಾವಿರ ಎಕರೆ ಭೂಮಿಯನ್ನು ಸಾಗಿಗೆ ತರಲು ಅಂದಾಜು ಮಾಡಲಾಗಿದೆ. ಭದ್ರಾ ಚಾನಲ್ಲಿಗೂ ಹೀಗೆ ಯಥೇಷ್ಟವಾಗಿ ಅರಣ್ಯವಿರತಕ್ಕಂಥಾ ಪ್ರದೇಶವನ್ನು ವ್ಯವಸಾಯಕ್ಕಾಗಿ ಬಿಟ್ಟುಕೊಡಬೇಕಾಗುತ್ತದೆ. ಹೀಗೆ ಈ ಅರಣ್ಯ ಸಂಪತ್ತು ದಿನೇ ದಿನೇ ಮಲೆನಾಡಿನಲ್ಲಿ ಕಡಮೆಯಾಗುತ್ತಾ ಬರುತ್ತಿದೆ. ಆದರೆ ಈಗ ಈ ಅರಣ್ಯ ಸಂಪತ್ತು ಯಾವ ವೇಗದಲ್ಲಿ ಕಡಮೆಯಾಗುತ್ತಿದೆಯೋ ಅದೇ ವೇಗದಲ್ಲಾದರೂ ಹೊಸಗಿಡ-ಮರಗಳನ್ನು ಬೆಳೆಸತಕ್ಕ ಕಾರ್ಯ ಭರದಿಂದ ಸಾಗಬೇಕಾದದ್ದು ತೀರ ಅತ್ಯಗತ್ಯ.

ಇವೊತ್ತು ನಮ್ಮ ಬಡ್ಜೆಟ್ಟಿನಲ್ಲಾಗಲಿ ಅಥವಾ ಇಲಾಖೆಯ ಪ್ರಯತ್ನಗಳನ್ನಾಗಲಿ ನೋಡಿದರೆ ಆ ಪ್ರಮಾಣಕ್ಕೆ ಸರಿಹೊಂದುವಂಥ ಕಾಡಿನ ಕೆಲಸ ನಡೆಯುತ್ತಾ ಇಲ್ಲ. ಈ ಪರಿಸ್ಥಿತಿಯನ್ನು ಹೀಗೆಯೇ ಮುಂದುವರಿಸಿಕೊಂಡು ಬಂದರೆ ದೇಶದಲ್ಲಿ ಮಳೆಗಳಾಗದೆ, ಹವಾಮಾನದ ಸ್ಥಿತಿ ಕೆಟ್ಟು ಬಹುಶಃ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಿ ಬರಬಹುದು. ಆದ್ದರಿಂದ ವಿಶೇಷವಾದಂಥ ಪ್ರಯತ್ನದಿಂದ ಹೊಸ ಹೊಸ ಕಾಡುಗಳನ್ನು ರಚನೆಮಾಡಬೇಕು.

ಅಫಾರಸ್ಟೇಷನ್ ಸ್ಕೀಂನಲ್ಲಿ ಕೆಲವು ಸಾರಿ ಈ ಇಲಾಖೆಯ ಅಧಿಕಾರಿಗಳು ಸುಮಾರು 30-40 ಮೈಲಿ ದೂರ ಕಾಡಿನೊಳಗೆ ಹೋಗಿ ಅಫಾರಸ್ಟೇಷನ್ ಕೆಲಸ ನೋಡಿಕೊಳ್ಳಬೇಕಾಗುತ್ತದೆ. ಈ ಅಧಿಕಾರಿಗಳಿಗೆ ಜೀಪುಗಳನ್ನೊದಗಿಸಿಕೊಟ್ಟರೆ ಅನುಕೂಲ. ಹೆಚ್ಚಿನ ಕೆಲಸ ಆಗುತ್ತದೆ.

ವನಮಹೋತ್ಸವದ ಕಾರ್ಯ ಕೆಲವು ವರ್ಷಗಳ ಹಿಂದೆ ಬಹಳ ಶ್ರದ್ಧೆಯಿಂದ ಪ್ರಾರಂಭವಾಯಿತು. ಆದರೆ ಈಗ ಎರಡು ಮೂರು ವರ್ಷಗಳಿಂದ ಯಾವ ಪ್ರಯತ್ನವೂ ಕಂಡುಬರುತ್ತ ಇಲ್ಲ. ನನ್ನ ಅಭಿಪ್ರಾಯದಲ್ಲಿ ಈ ವನಮಹೋತ್ಸವ ಏನಿದೆ ಇದು ಈ ದೇಶದ ಒಂದು ವೈಶಿಷ್ಟ್ಯ. ಇದು ಒಂದು ಪ್ರಾಮುಖ್ಯವಾದ ರಚನಾತ್ಮಕವಾದ ಕೆಲಸ ಎಂದು ಹೇಳಿ ನಾನು ಭಾವಿಸುತ್ತೇನೆ. ಅನೇಕ ಸದಸ್ಯರು ಇದನ್ನು ಬಹಳ ಲಘುವಾಗಿ ಟೀಕಿಸುವುದುಂಟು. ಆದರೆ ಈ ಕಾರ್ಯಕ್ರಮದ ಉದ್ದೇಶವನ್ನು ಪ್ರತಿಯೊಬ್ಬ ಪ್ರಜೆಯೂ ಅರಿತು ಹೆಚ್ಚು ಶ್ರದ್ಧೆಯಿಂದ ಅಧಿಕಾರಿಗಳು ಮತ್ತು ಸಾರ್ವಜನಿಕರು ನೆಟ್ಟಂಥ ಸಸಿಗಳ ವಿಚಾರದಲ್ಲಿ ಸಾಕಾದಷ್ಟು ರಕ್ಷಣೆಯನ್ನು ತೆಗೆದುಕೊಂಡು, ಆ ಸಸಿಗಳು ಗಿಡಗಳಾಗುವಂತೆ, ಮರಗಳಾಗುವಂತೆ ನೋಡಿಕೊಂಡರೆ ನಮ್ಮ ದೇಶದ ಒಂದು ಬಹು ದೊಡ್ಡ ಸಮಸ್ಯೆಯನ್ನು ಬಹಳ ಸುಲಭವಾಗಿ ಬಿಡಿಸಿದಂತಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ವನಮಹೋತ್ಸವದ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿದ್ದಲ್ಲಿ ಅದನ್ನು ಪುನಃ ಪ್ರಾರಂಭಿಸಿ, ದೇಶಾದ್ಯಂತ ಈ ಸಮಸ್ಯೆಯ ಕಡೆಗೆ ಜನತೆಯ ದೃಷ್ಟಿ ಬಿದ್ದು, ಅವರಲ್ಲಿ ಜಾಗ್ರತಿಯುಂಟಾಗಲು ಬೇಕಾದಂಥ ಪ್ರಚಾರವನ್ನು ಕೈಕೊಳ್ಳಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಫಾರೆಸ್ಟ್ ಇಲಾಖೆಯಲ್ಲಿರತಕ್ಕವರು ಮತ್ತು ರೆವಿನ್ಯೂ ಅಧಿಕಾರಿಗಳೂ ಕೂಡ ಈ ವನಮಹೋತ್ಸವದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕು; ಮತ್ತು ವನಮಹೋತ್ಸವದಿನಗಳಲ್ಲಿ ನೆಡತಕ್ಕ ಗಿಡಗಳಲ್ಲಿ ಇಂತಿಷ್ಟು ಪರ್ಸೆಂಟೇಜ್ ಗಿಡಗಳಾದರೂ ಬೆಳೆಯಲೇಬೇಕು ಎಂಬ ಒಂದು ನಿಗದಿಯನ್ನು ಹಾಕಬೇಕು ಅಥವಾ ಸ್ಥಳೀಯ ಅಧಿಕಾರಿಗಳ ಮೇಲೆ ಒಂದು ವಿಧವಾದ ಜವಾಬ್ದಾರಿಯನ್ನು ಹೊರಿಸಿ ಈ ಕೆಲಸವನ್ನು ಯಶಸ್ವಿಯಾಗಿ ಮಾಡುವಂತೆ ಸರ್ಕಾರ ಪುನಃ ಈ ಬಗ್ಗೆ ಪ್ರಯತ್ನ ಮಾಡಬೇಕು. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಂದರ್ಭದಲ್ಲಿ ನಾನು ಜಮೀನು ವಿಲೇವಾರಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀ ಪ್ರಭಾಕರ್ ಅವರು ಫಾರೆಸ್ಟ್ ಜಮೀನಿನ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ನನ್ನದೂ ಕೂಡ ಅದೇ ಅಭಿಪ್ರಾಯವಾಗಿದೆ, ಸ್ವಾಮಿ. ಫಾರೆಸ್ಟ್ ಇಲಾಖೆಯು

(ಶ್ರೀ. ಎಂ. ಚಿಕ್ಕಲಿಂಗಯ್ಯ).

ದರಖಾಸ್ತು ವಿಚಾರದಲ್ಲಿ ಅನೇಕ ರೀತಿಯಾಗಿ ಹೇಳುತ್ತಾರೆ. ಒಂದು ಕಡೆ ಬೆಲೆ ಜಾಸ್ತಿ ಆಗುತ್ತದೆ ಎನ್ನುವುದು, ಇನ್ನೊಂದು ಕಡೆ ಗೋಮಾಳದ ಜಮೀನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವುದು ಹೀಗೆಲ್ಲಾ ಹೇಳಿಕೊಂಡು ಬರುತ್ತಾ ಇದ್ದೀರಿ. ನಾನು ಹೇಳುವುದೇನೆಂದರೆ ಈಗ ಫಾರೆಸ್ಟ್ ಇಲಾಖೆಯಲ್ಲಿ ಸರ್ವೆ ಆಗಿ 50 ವರ್ಷ ಆಗಿರಬಹುದು. ಫಾರೆಸ್ಟ್ ಸರ್ವೆ ಇದುವರೆಗೂ ಯಾರೂ ಮಾಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಏನು ಹೇಳುತ್ತಾರೋ ಗೊತ್ತಿಲ್ಲ. ಕೆಲವು ಕಡೆ ಫಾರೆಸ್ಟ್ ಜಮೀನು ಎಂದು ಹೇಳಿ ಫಾರೆಸ್ಟಿಗೆ ಸೇರಿಸಿಕೊಂಡಿದ್ದೀರಿ. ಅಲ್ಲಿ ಗಿಡ ಮರಗಳು ಯಾವುದೂ ಇಲ್ಲ. ದನಕರುಗಳಿಗೂ ಕೂಡ ಮೇವಿಗೆ ಅವಕಾಶವಿಲ್ಲ. ಅಂಥ ಫಾರೆಸ್ಟಿಗೂ ಕೂಡ ನಾಲಾಯಕ್ಕಾದ ಜಮೀನಿದೆ. ಅಂಥ ಜಮೀನನ್ನು ದರಖಾಸ್ತಿನಲ್ಲಿ ಕೊಟ್ಟರೂ ಪ್ರಯೋಜನವಿಲ್ಲ. ಆಕಾರ ಕಂಡ ಜಮೀನು ಬೇಕಾದಷ್ಟು ಇದೆ ಎಂದು ಕೆಲವರು ಹೇಳುತ್ತಾರೆ. ಮಳವಳ್ಳಿ ತಾಲ್ಲೂಕಿನಲ್ಲಿ ಜಮೀನುಬೇಕೆಂದು ಕೇಳಿದರೆ ಶಿವಮೊಗ್ಗಕ್ಕೆ ಹೋಗಿ ಎಂದರೆ ಆಗುತ್ತದೆಯೇ? ಆಗುವುದಿಲ್ಲ. ಅದಕ್ಕೆ ಫಾರೆಸ್ಟ್ ಸರ್ವೇ ಮಾಡಿಸಿ ಎಂದು ಹೇಳುತ್ತೇನೆ. ಈ ವರ್ಷದಲ್ಲಿ ಸ್ವಲ್ಪ ಹಣ ಅಲಾಟ್ ಮಾಡಿದ್ದೀರಿ. ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಫಾರೆಸ್ಟ್ ಇದೆ, ಯಾವ ಯಾವ ಫಾರೆಸ್ಟನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ ಎಂಬ ವಿಚಾರದಲ್ಲಿ ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು, ಎಲ್ಲಿ ಫಾರೆಸ್ಟನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡು ಬರುತ್ತದೆಯೋ ಅಂಥ ಕಡೆ ಬಡವರು ಎಲ್ಲಿ ಕೇಳುತ್ತಾರೋ ಅಂಥ ಕಡೆ ಎರಡು ಅಥವಾ ನಾಲ್ಕು ಎಕರೆ ಕೊಡುವುದಕ್ಕೆ ಕಷ್ಟವಾಗುವುದಿಲ್ಲ. ಇದನ್ನು ಪರಿಶೀಲನೆ ಮಾಡಬೇಕು. ನಿಜವಾಗಿಯೂ ಕೂಡ ಇದು ಕ್ಯಾಬಿನೆಟ್ ಪ್ರಶ್ನೆ. ಮೈಸೂರು ದೇಶದಲ್ಲಿ ಅರಣ್ಯದ ಜಮೀನು ನಿರ್ದಿಷ್ಟವಾದ ಪರ್ಸೆಂಟೇಜ್ ಇಲ್ಲ ಎಂದು ಹೇಳುತ್ತೀರಿ, ನಿಜ. ಆದರೆ ಅನಾವಶ್ಯಕವಾದ ಜಮೀನಿಟ್ಟುಕೊಂಡು ಏನು ಪ್ರಯೋಜನ?

ಇನ್ನೊಂದು ಕಡೆ ಏನು ಮಾಡಿದ್ದೀರಿ? ಬೇಚರಾಕು ಗ್ರಾಮ ಎಂದು ಹೇಳಿ ಫಾರೆಸ್ಟಿಗೆ ಸೇರಿಸಿಕೊಂಡಿದ್ದೀರಿ. ಆದರೆ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು ಅಭಿವೃದ್ಧಿ ಮಾಡುವುದಕ್ಕೆ ತಾವು ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಫಾರೆಸ್ಟ್ ಪ್ರದೇಶ ಎಂದು ಇಟ್ಟುಕೊಂಡಿದ್ದೀರಿ. ನಾವು ಪರೀಕ್ಷೆ ಮಾಡಿನೋಡಿದ್ದೇವೆ, ಅಲ್ಲಿ ಮರಗಳೇ ಇರುವುದಿಲ್ಲ, ಅಲ್ಲಿರುವುದು ಮುಳ್ಳಿನ ಗಿಡ ಮಾತ್ರ. ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಅಂತಹ ಕಡೆ ಸುತ್ತಮುತ್ತಲೂ ಜಮೀನಿಲ್ಲದೇ ಇರತಕ್ಕವರು ಯಾರಿದ್ದಾರೋ ಅವರಿಗೆ ಎರಡೆರಡು ಎಕರೆ ಜಮೀನು ಕೊಡಿ ಎಂದರೂ ಕೂಡ ಇಷ್ಟು ದಿವಸವಾದರೂ ಏನೇನೂ ಆಗದೇ ಇರುವುದು ಸರ್ಕಾರದ ಒಂದು ಉದಾಸೀನ ಮನೋಭಾವವೋ ಅಥವಾ ಆ ಜನಗಳ ದುರದೃಷ್ಟವೋ ಗೊತ್ತಿಲ್ಲ.

ಇನ್ನು ಟಿಂಬರ್ ನಷ್ಟನ್ನಮಾಡತಕ್ಕ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಬಿಲ್ಡಿಂಗ್ ಮೆಟೀರಿಯಲ್ಸ್ ನಷ್ಟನ್ನಮಾಡುವುದಕ್ಕೆ ಒಂದು ರೇಟ್ ಪ್ರಕಾರ ಸೀನಿಯೊರೆಜ್ ಫಿಕ್ಸ್ ಮಾಡಿ ಲೈಸೆನ್ಸ್ ಕೊಡುತ್ತೀರಿ. 45 ರೂಪಾಯಿ ಬೆಲೆ ಆಗುವುದನ್ನು ಕಾಡಿನಿಂದ 200-300 ಮೈಲಿ ತರಬೇಕಾದರೆ ಮಧ್ಯದಲ್ಲೇ ಬೇರೆ ಯಾರಿಗಾದರೂ ಮಾರಿ ಬ್ಲಾಕ್‌ಮಾರ್ಕೆಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಕಾಡಿಗೆ ಸ್ವಲ್ಪ ಹತ್ತಿರದಲ್ಲೇ ಇರುವ ತೋಪುಗಳಲ್ಲಿ ಮರದ ಸಾಮಾನುಗಳು ಸಿಕ್ಕುವಂತೆ ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಾ ಇದ್ದೇವೆ. ಇವೊತ್ತಿನವರೆಗೂ ಕೂಡ ನಿರ್ದಿಷ್ಟವಾದ ಜವಾಬು ಬಂದಿಲ್ಲ. ಅದನ್ನು ಕೂಡ ಪರಿಶೀಲನೆ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಕಾಡಿನಿಂದ ಸೌದೆಯ ಮರಗಳು ಲಾರಿಗಟ್ಟಲೆ ಹೋಗುತ್ತಾ ಇವೆ. ಹಿಂದೆ ಅನೇಕ ಸಾರಿ ಹೇಳಿದ್ದೇನೆ. ಇಂಡಸ್ಟ್ರಿಯಲ್ ವರ್ಕ್‌ಷಾಪ್ಸ್ ಮುಂತಾದ ಕಡೆಗಳಲ್ಲಿ ಎಲ್ಲಿ ಮರಗಳನ್ನು ಸೌದೆಗಾಗಿ ಉಪಯೋಗಿಸುತ್ತಾರೋ ಅಂಥ ಕಡೆ ಅದನ್ನು ತಪ್ಪಿಸಿ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಸಲಹೆ ಮಾಡಿದ್ದೇನೆ. ಆ ವಿಚಾರದಲ್ಲಿ ಸರ್ಕಾರದವರು ಪರಿಶೀಲನೆ ಮಾಡುತ್ತೇವೆ, ಸಲಹೆ ಬಹಳ ಉತ್ತಮವಾದದ್ದು ಎಂದು ಜವಾಬು ಕೊಟ್ಟಿದ್ದರೂ ಕೂಡ ಇವೊತ್ತಿನವರೆಗೂ ಏನೇನು ಕಾರ್ಯಕ್ರಮ ಕೈಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಫೈರ್ ಪ್ರೊಟೆಕ್ಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕಾಡುಕಿಚ್ಚು ಬೀಳುತ್ತದೆ ಎಂದು ಹೇಳುತ್ತಾರೆ, ಅದನ್ನು ತಡೆಗಟ್ಟುವುದಕ್ಕೋಸ್ಕರ 50 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಯಾರು ಬೆಂಕಿ ಹಾಕುತ್ತಾರೆಯೋ ಏನೋ? ಹಿಂದೂ ಗೊತ್ತಾಗುವುದಿಲ್ಲ. ತಾವು ಇದಕ್ಕಾಗಿ ಹಣ ಒದಗಿಸಿರುವುದರಿಂದ ಸರಿಯಾಗಿ ಸೂಪರ್‌ವೈಸ್ ಮಾಡಿ ಉದ್ದೇಶಪೂರ್ವಕವಾಗಿ ಯಾರಾದರೂ ಬೆಂಕಿ ಹಾಕುತ್ತಾರೆಯೋ ಅಥವಾ ತನಷ್ಟಕ್ಕೆ ತಾನೇ ಬೆಂಕಿ ಹೊತ್ತಿಕೊಳ್ಳುತ್ತದೆಯೋ ಎಂಬುದರ ಕಡೆಗೆ ನಿಗಾಇಟ್ಟು ಬೆಂಕಿ ಬೀಳದ ಹಾಗೆ ನೋಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಕಾಡಿನಲ್ಲಿ ಜನ ಹೋಗುತ್ತಾರಲ್ಲ ಅವರು ಬೆಂಕಿ ಕಡ್ಡಿ ಗೀರಿ ಆರಿಸದೆ ಹಾಗೆಯೇ ಹಾಕುವುದೂ ಉಂಟು.

3-30 P.M.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜನಗಳಿಂದ ಏನಾದರೂ ತೊಂದರೆಯಾದ ಪಕ್ಷಕ್ಕೆ ಅದನ್ನು ಇಲಾಖೆಯವರು ಸುಲಭವಾಗಿ ತಪ್ಪಿಸಬಹುದೆಂದು ನನ್ನ ಅಭಿಪ್ರಾಯ.

ಆಮೇಲೆ, ಖೆಡ್ಡ ಆಪರೇಷನ್ನಿಗಾಗಿ ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಚಾಮರಾಜನಗರ ತಾಲ್ಲೂಕಿನಲ್ಲಿ ಬಸವನಪುರದ ಕಡೆ ಆನೆಗಳು ಬಂದು ಫಸಲನ್ನೂ, ತೆಂಗಿನ ಗಿಡಗಳನ್ನೂ ಧ್ವಂಸಲು ಮಾಡುತ್ತಿವೆ. ಬೂದಿಪಡಗನಹಳ್ಳಿಯ ಕಡೆ ಬೇಕಾದಷ್ಟು ಆನೆಗಳಿವೆ. ಸರ್ಕಾರದರವರು ಖೆಡ್ಡ ಕಾರ್ಯಕ್ರಮಗಳನ್ನು ಏರ್ಪಡಿಸುವುದರಿಂದ ನಷ್ಟ ಕೂಡ ಇಲ್ಲ. ಆದ್ದರಿಂದ ಈ ಕಾರ್ಯಕ್ರಮವನ್ನು ಇನ್ನೂ ಹೆಚ್ಚಿಸುತ್ತಾರೆಂದು ನಂಬಿದ್ದೇನೆ.

ಚಾಮರಾಜನಗರ ತಾಲ್ಲೂಕಿನಲ್ಲಿ 16-17-18ನೆಯ ಸರ್ವೆ ನಂಬರುಗಳನ್ನು ಹುಲ್ಲುಬನ್ನಿಗೆಂದು ಬಿಟ್ಟಿತು. ಅದಕ್ಕೊಂದು ದರವನ್ನು ಕೂಡ ಗೊತ್ತುಮಾಡಿದ್ದರು. ರೈತರು ಆ ದರವನು ಕೊಟ್ಟು ತಮ್ಮ ದನಕರುಗಳನ್ನು ಮೇಯಿಸಬಹುದಾಗಿತ್ತು. ಇಷ್ಟೆಲ್ಲಾ ಆಗುತ್ತಿದ್ದರೂ ಇದುವರೆಗೂ ಆ ಜಮೀನುಗಳನ್ನು ಜೇತವಾರಿ ರಿಜಿಸ್ಟರಿನಿಂದ ತೆಗೆದುಹಾಕಿಲ್ಲ. ಇಂಡೆಕ್ಸ್ ರಿಜಿಸ್ಟರಿನಲ್ಲಿ ಇವತ್ತಿಗೂ ಸೇರಿದೆ. ನೋಡಿದರೆ ಆ ಸರ್ವೆ ನಂಬರಿನಲ್ಲಿ

ಒಂದು ಮರವೂ ಇಲ್ಲ; ಫಾರೆಸ್ಟ್ ಎಂಬ ಚಿಹ್ನೆಯೂ ಇಲ್ಲ. ಬರೀ ಕುರುಚಲು ಗಿಡಗಳು ಮಾತ್ರ ಇವೆ. ಈ ಜಮೀನುಗಳನ್ನು ಹುಲ್ಲುಬನ್ನಿಗಾಗಿ ಬಿಡಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಅರಣ್ಯದ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕೆಂದಿದ್ದೇನೆ. ಅರಣ್ಯ ಇಲಾಖೆಗೆ ಸೇರಿದ್ದಾಗಿ ಬೆಂಗಳೂರಿನಲ್ಲಿ Forest Research Laboratory ಯೊಂದಿದೆ. ಇದು ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಇದನ್ನು ಈಚೆಗೆ ಇಂಡಿಯಾ ಸರ್ಕಾರದವರಿಗೆ ವಹಿಸಿಕೊಡುತ್ತಾರೆಂದು ಕೇಳಿ ಬಂದಿದೆ. ಇದರಿಂದಾಗಿ ಇದರ ಬಡಾವಣೆಗೆ ಮತ್ತು ಇದು ಮಾಡತಕ್ಕ ಕೆಲವು ಕೆಲಸಗಳಿಗೆ ಬಹಳ ಮಟ್ಟಿಗೆ ಲೋಪಬಂದಿದೆ. ಏಕೆಂದರೆ ಸರ್ಕಾರದವರು ಇದರ ಸಂಬಂಧವಾಗಿ ಒಂದು ಸರಿಯಾದ ನೀತಿಯನ್ನಿಟ್ಟುಕೊಂಡಿಲ್ಲ. ವರ್ಗಾಯಿಸುವುದಾದರೂ ಯಾವಾಗ ಮಾಡುತ್ತಾರೆಂಬುದನ್ನು ತೀರ್ಮಾನ ಮಾಡಬೇಕು. ಏನಿದ್ದರೂ ಬೇಗ ವರ್ಗಾಯಿಸಬೇಕು, ಇಲ್ಲದಿದ್ದರೆ ಅಲ್ಲಿನ ನೌಕರವರ್ಗದವರಿಗೆ ತಕ್ಕ ಪ್ರೋತ್ಸಾಹ ಕೊಟ್ಟು ಕೆಲಸವನ್ನು ಮುಂದುವರಿಸಬೇಕು. ಹಾಲಿ ಈಗಿರತಕ್ಕ ನೀತಿಯಿಂದ ಈ ರಿಸರ್ಚ್ ಲ್ಯಾಬೊರೇಟರಿಗೆ ಬಹಳ ಆತಂಕವುಂಟಾಗಿದೆಯೆಂದರೆ ತಪ್ಪಲ್ಲ.

ಎರಡನೆಯದಾಗಿ ರೇಂಜರುಗಳನ್ನು ತಯಾರು ಮಾಡತಕ್ಕ ಸ್ಕೂಲು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಅನೇಕ ಕಡೆಗಳಿಂದ ದೂರು ಬಂದಿದೆ. ಆದ್ದರಿಂದ ರೇಂಜರುಗಳ ಸ್ಕೂಲನ್ನು ಸರಿಯಾಗಿ ನಡೆಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಮೂಲಿಕೆಗಳ ವಿಷಯ. ತಾವು ನಿಜವಾಗಿಯೂ ಆಯುರ್ವೇದಕ್ಕೆ ಪ್ರೋತ್ಸಾಹ ಕೊಡಬೇಕಾದರೆ ನಮ್ಮ ಅರಣ್ಯವನ್ನು ಚೆನ್ನಾಗಿ ಮಾಡಬೇಕು. ಈಗ ಅರಣ್ಯ ಇಲಾಖೆಯಲ್ಲಿ ನಾನಾ ಮೂಲಿಕೆಗಳನ್ನು ತಿಳಿದಿರುವವರು ಇಲ್ಲ, ಅವುಗಳನ್ನು ಶೇಖರಿಸುವವರು ಇಲ್ಲ. ಆದಕಾರಣ ತಾವು ದಯವಿಟ್ಟು ಆಯುರ್ವೇದವನ್ನು ತಿಳಿದಿರುವವರನ್ನು ನೇಮಿಸಿ ಅರಣ್ಯದಲ್ಲಿರುವ ನಾನಾ ಮೂಲಿಕೆಗಳನ್ನು ಶೇಖರಿಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಅರಣ್ಯದ ವಿಷಯವಾಗಿ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅರಣ್ಯ ಅಭಿವೃದ್ಧಿಯ ದೃಷ್ಟಿಯಿಂದ ನಮ್ಮ ದೇಶದಲ್ಲಿ ಏರ್ಪಡಿಸಿರುವ ವನಮಹೋತ್ಸವ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಮುನ್ಷಿಯವರು ವನಮಹೋತ್ಸವವನ್ನು ಮೊದಲು ನಮ್ಮ ದೇಶದಲ್ಲಿ ಜಾರಿಗೆ ತಂದರು. ದೇಶದ ಅರಣ್ಯಸಂಪತ್ತಿನ ದೃಷ್ಟಿಯಿಂದ ಇದು ಬಹಳ ಅವಶ್ಯಕ. ಇದರಿಂದಾಗಿ ನಮ್ಮ ವನಸಂಪತ್ತು ಅಭಿವೃದ್ಧಿ ಹೊಂದಲು ಬೇಕಾದಷ್ಟು ಅವಕಾಶವಿದೆ. ಒಂದು ಸಾವಿರ ಮರಗಳನ್ನು ಹಾಕಿದರೆ ನೂರು ಮರಗಳಾದರೂ ಉಳಿಯುತ್ತವೆನ್ನಬಹುದು. ಈ ರೀತಿ ಮಾಡುತ್ತಾ ಹೋದರೆ ನಮ್ಮಲ್ಲಿನ ವೃಕ್ಷಸಂಪತ್ತು, ವನಸಂಪತ್ತು ಕ್ರಮೇಣ ವೃದ್ಧಿ ಹೊಂದಿಯೇ ಹೊಂದುತ್ತದೆ. ಈಗ ನಮ್ಮ ಮಾನ್ಯ ಸಚಿವರೂ ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವವರಾಗಿದ್ದಾರೆ.

ಆದರೆ, ನಮ್ಮ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕೆಲವು ಫಾರೆಸ್ಟ್‌ಗಳ ವಿಷಯ ಹೇಳುವುದಾದರೆ ಅಲ್ಲಿ ವಾಸ್ತವವಾಗಿ ಯಾವ ಗಿಡಮರಗಳೂ ಇಲ್ಲ. ನಾವು ಕಾವಸ್ತೆ ಕಾಡಾಗಿದೆ. ಬರೀ ಲಾಂಟಾನಾ ಗಿಡಗಳು ಬೆಳೆಯುತ್ತಿವೆ. ನಮ್ಮ ನೆಲಮಂಗಲ ತಾಲ್ಲೂಕಿನಲ್ಲೇ ಕೃಷ್ಣರಾಜಪುರವೆಂಬ ಒಂದು ಬೇಚರಾಕ್ ಹಳ್ಳಿಯಿದೆ. ಅದನ್ನೀಗ ಅರಣ್ಯವೆಂದು ಭಾವಿಸಿ ಈಗ ನಾವುಗಳು ಸಾಗುವಳಿಗೆ ಎರಡೆರಡು ಎಕರೆಗಳನ್ನು ಜಮೀನಿಲ್ಲದವರಿಗೆ ಕೊಡಿಯೆಂದು ಹೇಳಿದರೂ ಕೊಟ್ಟಿಲ್ಲ. ಕೇಳಿದರೆ ಅಲ್ಲಿ ಯಾವುದೋ ಕೈಗಾರಿಕೆಯನ್ನು ಸ್ಥಾಪಿಸುತ್ತೇವೆಂದು ಹೇಳುತ್ತಾರೆ. ನೋಡಿದರೆ ಲಾಂಟಾನಾ ಬೆಳೆಯುವುದಕ್ಕೆ ಬಿಟ್ಟಿರುವಂತೆ ಕಾಣುತ್ತೆ. ಆದ್ದರಿಂದ afforest ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವಿಲ್ಲವೋ ಆ ಪ್ರದೇಶಗಳನ್ನು ಸಾಗುವಳಿಗೆ ಕೊಡುವ ಏರ್ಪಾಡು ಮಾಡಬೇಕು. ದೇಶದಲ್ಲಿ ಈಗ ಫಾರೆಸ್ಟ್ ಎಂದು ಹೇಳಿ ಬಿಟ್ಟಿರುವ ಎಲ್ಲಾ ಭಾಗಗಳನ್ನೂ afforest ಮಾಡಬೇಕಾದರೆ ನೂರಾರು ವರ್ಷ ಬೇಕಾಗುತ್ತದೆ. ಹತ್ತು ವರುಷಗಳಲ್ಲಿ ಮಾಡುತ್ತೇವೆನ್ನುವುದು ಬರೀ ಭ್ರಾಂತಿ. ಆದ್ದರಿಂದ ಎಲ್ಲೆಲ್ಲಿ forest ಇಲ್ಲದೆ ಬರೀ ಲಾಂಟಾನಾಗಳು ಬೆಳೆದಿವೆಯೋ ಅಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಕೇಳಿದಪಕ್ಷದಲ್ಲಿ ಎರಡೆರಡು ಎಕರೆಗಳನ್ನಾದರೂ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಹೊಸ ಸಲಹೆಯನ್ನು ನಾನು ಸರ್ಕಾರದವರಿಗೆ ಕೊಡಬಯಸುತ್ತೇನೆ. ತಮ್ಮ ಉದ್ದೇಶ ಮುಖ್ಯವಾಗಿ afforest ಮಾಡಬೇಕೆಂಬುದೇ ಆಗಿದ್ದರೆ ಮತ್ತು ಮರಗಳನ್ನು ಮುಖ್ಯವಾಗಿ ಬೆಳೆಸಬೇಕೆಂಬುದೇ ಆಗಿದ್ದರೆ, ಸಾಗುವಳಿಗೆ ಈ ಜಮೀನುಗಳನ್ನು ಕೊಡುವುದರಲ್ಲಿ, ಎಕರೆಯೊಂದಕ್ಕೆ 20-30 ಮರಗಳನ್ನು ಬೆಳೆಸಬೇಕೆಂಬ ಒಂದು ಷರತ್ತನ್ನು ಹಾಕಿ ಕೊಡಬಹುದು. ಈ ರೀತಿ ಮಾಡಿದರೆ ನೀವು afforest ಕಾರ್ಯಕ್ರಮದ ಪ್ರಕಾರ ಎಷ್ಟು ಮರಗಳನ್ನು ಬೆಳೆಸಬೇಕೆಂದಿದ್ದೀರೋ ಅದರ ಹತ್ತರಷ್ಟು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯ ಷರತ್ತು ಹಾಕುವುದರಲ್ಲಿ ತೊಂದರೆಯೇನೂ ಇಲ್ಲ. ಖಂಡಿತವಾಗಿಯೂ ಜಾಗ್ರತೆಯಾಗಿ ಮತ್ತು ಇನ್ನೂ ಹೆಚ್ಚಿಗೆ ಮರಗಳು ಬೆಳೆದು ನೀವು ಯಾವ ಉದ್ದೇಶದಿಂದ ಈ ಪ್ರದೇಶಗಳನ್ನು ಅರಣ್ಯದ ಭಾಗವೆಂದಿಟ್ಟುಕೊಂಡಿದ್ದೀರೋ ಆ ಉದ್ದೇಶ ಸಾರ್ಥಕವಾಗುತ್ತದೆ.

ಕೊನೆಯದಾಗಿ ಇನ್ನೊಂದು ವಿಷಯ. ಅನೇಕ ಹಳ್ಳಿಗಳ ಪಕ್ಕದಲ್ಲೇ ಅರಣ್ಯಗಳಿವೆ. ಅಲ್ಲಿ ದನಗಳನ್ನು ಮೇಯಿಸಬೇಕಾದರೆ ಆ ಅರಣ್ಯಗಳಿಗೇ ಕಳುಹಿಸಬೇಕು. ಏಕೆಂದರೆ ನಮ್ಮ ಕಡೆ ಹಳ್ಳಿಗಳಿಗೆ ಗೋಮಾಳವಿಲ್ಲ. ಇಂಥ ಸಂದರ್ಭಗಳಲ್ಲಿ ಅರಣ್ಯಗಳಲ್ಲಿ ದನಗಳನ್ನು ಮೇಯಿಸಲು ಅವಕಾಶ ಕೊಡದೆ ಇದ್ದರೆ ರೈತರಿಗೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಅರಣ್ಯಗಳಲ್ಲಿ ದನಗಳನ್ನು ಮೇಯಿಸುವುದಕ್ಕೆ ಅವಕಾಶ ಕೊಡಬೇಕು. ಬೇಕಾದರೆ ಮೇಕೆಗಳನ್ನು ಬಿಡಬೇಡಿ. ಅವುಗಳನ್ನು ಬಿಟ್ಟು ಮಿಕ್ಕ ದನಗಳಿಗೆ ಅವಕಾಶ ಕೊಡುವುದರಿಂದ ರೈತರಿಗೆ ವ್ಯವಸಾಯಕ್ಕೆ ಬಹಳ ಅನುಕೂಲಮಾಡಿಕೊಟ್ಟಂತಾಗುತ್ತದೆ. ಮಾನ್ಯ ಸಚಿವರು ಬಹಳ ಮೇಧಾವಿಗಳು. ಅರಣ್ಯದ ಸಂಬಂಧದಲ್ಲಿ afforestation ವಿಷಯದಲ್ಲೇ ಅಲ್ಲ, ವ್ಯವಸಾಯದ ವಿಷಯದಲ್ಲಿಯೂ ಅನೇಕ ಮಾರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಅವರು

(ಶ್ರೀ ಡಿ. ಎಂ. ಗೋವಿಂದರಾಜು.)

ನನ್ನ ಈ ಕೆಲವು ಸಲಹೆಗಳನ್ನು ಮನಸ್ಸಿಗೆ ತಂದುಕೊಂಡು ಸೂಕ್ತ ಏರ್ಪಾಡುಗಳನ್ನು ಮಾಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸಾಧಾರಣವಾಗಿ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು ಎನ್ನುವ ವಿಷಯದಲ್ಲಿ ಮಾನ್ಯ ಸದಸ್ಯರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ಹೇಳಬೇಕಾಗಿದೆ. ಮುಖ್ಯವಾಗಿ ಇಲ್ಲಿ ಅರಣ್ಯ ಸಂಪತ್ತು ಬೆಳೆಯುವುದಕ್ಕೆ ಸಾಧ್ಯವಿಲ್ಲವೇ ಇಲ್ಲ ಎಂಬುದ್ ಆಲೋಚಿಸತಕ್ಕದ್ದು ಪ್ರಥಮ ಕರ್ತವ್ಯ. ಸಾವಿರಾರು ಎಕರೆ ಜಮೀನು ಇದ್ದು ಹತ್ತು ವರ್ಷಗಳಾದರೂ ಕೂಡ ಗಿಡಗಳು ಬೆಳೆಯದೆ ಜನರು ಉಪವಾಸ ವಿದ್ದು ಸತ್ತರೂ ಚಿಂತೆಯಿಲ್ಲ. ಭೂಮಿಯನ್ನು ಮಾತ್ರ ಹಾಗೆಯೇ ಬಿಟ್ಟರೆ ಚೆನ್ನಾಗಿರುತ್ತದೆ ಎನ್ನುವ ವಾದ ಸರಿಯಾಗಿಲ್ಲ. ಉದಾಹರಣೆಗೆ ಹಿರಿಯೂರು ತಾಲ್ಲೂಕಿನ ಹತ್ತಿರ ಬೋವಿ ಜನಾಂಗದವರಿಗೆ ಕೊಟ್ಟಿರುವ ಜಮೀನನ್ನು ಸರ್ಕಾರದವರು ವಾಪಸ್ಸು ತೆಗೆದುಕೊಂಡರು, ಎಂದರೆ, ಮಾರೀಕಣಿವೆ ಹತ್ತಿರ ಬೇಚ ರಾಕ್ ವಿಲೇಜ್ ಇರುವುದನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡಿದ್ದಾರೆ. ಅದನ್ನು ವಾಪಸ್ಸು ಕೊಡಿ. ಜನಗಳು ಜಮೀನು ಮಾಡಬೇಕು ಅಂದರೆ ಇವೊತ್ತಿನ ದಿವಸ ಎಲ್ಲಿಯೂ ಭೂಮಿ ಸಿಕ್ಕುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಪರವಾಗಿ, ಅಸೆಂಬ್ಲಿ ಪರವಾಗಿ, ನಮ್ಮಗಳ ಪರವಾಗಿ ನೀವು ಇಲ್ಲಿ ಕುಳಿತಿರುವಾಗ ಜನಗಳ ಹಿತವನ್ನು ಸರ್ಕಾರದ ಮಂತ್ರಿಗಳಾದ ನೀವು ಪ್ರಜೆಗಳ ಕಷ್ಟಸುಖಗಳೇ ನಮ್ಮ ಕಷ್ಟ ಸುಖಗಳೆಂದು ನೋಡಬೇಕಾದುದು ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ. ಅಲ್ಲಲ್ಲಿ ದೊಡ್ಡದಾಗಿ ಬೆಳೆಬರತಕ್ಕ ಗಿಡಗಳನ್ನು ಕಡಿಸಿ ಹಾಗೆಯೇ ಜನಗಳಿಗೆ ಕೊಡಿ ಎಂದು ಹೇಳುವುದಿಲ್ಲ. ಆದ್ದರಿಂದ ಕಾಡು ಇರುವುದು ಅಗತ್ಯ. ಅರಣ್ಯಸಂಪತ್ತು ಇದ್ದರೆ ಮಳೆ ಬೆಳೆ ಬಂದು ಅನುಕೂಲವಾಗುತ್ತದೆ. ಉದಾರ ಮನೋಭಾವನೆಯನ್ನು ಮಾನ್ಯಮಂತ್ರಿಗಳು ಅನುಸರಿಸಬೇಕು. ಪಾಶ್ಚಾತ್ಯದೇಶದಲ್ಲಿ ಸಂಚರಿಸಿ ಯಾವ ಯಾವ ದೇಶದಲ್ಲಿ ಏನಿದೆ ಎಂಬುದನ್ನು ನೋಡಿಕೊಂಡು ಮಂತ್ರಿಗಳು ಹೆಚ್ಚಿನ ಅನುಭವವುಳ್ಳವರಾಗಿದ್ದಾರೆ. ದೇಶದ ಹಿತ ದೃಷ್ಟಿ, ಜನಗಳ ಹಿತದೃಷ್ಟಿ ಇಟ್ಟುಕೊಂಡು ಉದಾರ ಮನೋಭಾವನೆಯನ್ನು ಬೆಳೆಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಸಾಧಾರಣವಾಗಿ ಪ್ರಜಾಪ್ರಭುತ್ವದಲ್ಲಿ ನಮ್ಮ ಸರ್ಕಾರ ಬಂದಮೇಲೂ ಕೂಡ, ಶ್ರೀಮಾನ್ ಪ್ರಭಾಕರ್‌ರವರು ಹೇಳಿದಹಾಗೆ, ಹಿಂದಿನ ಸರ್ಕಾರದಲ್ಲಿ ಯಾವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೋ ಅದೇ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು, ಸರ್ಕಾರದ ನೌಕರರು ಹೀಗಾಗಬೇಕು ಎಂದು ಹೇಳುತ್ತಾರೆ. ಹಾಗೆ ಮಾಡುವುದಕ್ಕೆ ಬಿಡಬಾರದು ಎಂದು ಹೇಳುತ್ತೇನೆ. ಉದಾಹರಣೆಗೆ ಮೈಸೂರು ದೇಶದಲ್ಲಿ ಇವೊತ್ತು ಹರಿಜನರಿಗೆ ಸಾಕಾದಷ್ಟು ಅನುಕೂಲತೆಗಳಿಲ್ಲ. ಹರಿಜನರಿಗೆ ಎಷ್ಟೋ ದುಡ್ಡನ್ನು ಕೊಡುತ್ತಾರೆ. ಆದರೂ ಅವರು ಬಡವರಾಗಿಯೇ ಇರುತ್ತಾರೆ. ಸರ್ಕಾರದವರು ಬಡವರ ಕೈಗಾರಿಕೆಗಳನ್ನು ದೊಡ್ಡದೊಡ್ಡ ಐಶ್ವರ್ಯವಂತರ ಕೈಗೆಕೊಟ್ಟು ಬಡವರು ಕೂಲಿಯ ಆಳುಗಳಾಗಿ ದುಡಿಯುತ್ತಾ ಇರಲಿ ಎಂದು ಹೇಳುವಂತಿದೆ. Socialist patternನಲ್ಲಿ ಬಡವರು ಐಶ್ವರ್ಯವಂತರ ಮಟ್ಟಕ್ಕೆ ಬರುವುದಕ್ಕೆ ಆ ಕೈಗಾರಿಕೆಯನ್ನು ಅವರ ವಶಕ್ಕೆ ಬಿಟ್ಟು, ಸರಕಾರಕ್ಕೆ ಬರುವ ಆದಾಯವನ್ನು ಅವರ ತೆಗೆದುಕೊಳ್ಳುವುದಕ್ಕೆ ಬದಲು ಐಶ್ವರ್ಯವಂತರ ವಶಕ್ಕೆ ಬಡವರನ್ನು ಸಿಕ್ಕಿಸಿ ಉದ್ಧಾರ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಹಿಂದಿನ ಕಾಲದಲ್ಲಿ ಬೇಜವಾಬ್ದಾರಿಯಾಗಿ ಯಾವ ತತ್ವವನ್ನು ಅನುಸರಿಸಿಕೊಂಡು ಬರುತ್ತಿದ್ದೆವೋ ಅದೇ ತತ್ವವನ್ನು ಅನುಸರಿಸುತ್ತಿದ್ದೇವೆಯೇ ಹೊರತು ಒಂದು ಇಂಚ ಕೂಡ ಮುಂದಕ್ಕೆ ಹೋಗಿಲ್ಲ. ನಾವೆಲ್ಲರೂ ಕಷ್ಟಪಟ್ಟು ಪ್ರಜಾಪ್ರಭುತ್ವ ಸರ್ಕಾರವನ್ನು ತಂದಿದ್ದರ, ಹಿಂದೆ ರಬ್ಬರ್ ಟಸ್ಸೆ ಹಾಕಿದಂತೆಯೇ ಇವತ್ತೂ ಹಾಕಿಕೊಂಡು ಬರುತ್ತಿದ್ದಾರೆ. ಯಾವ ಕೆಲಸ ಮಾಡಬೇಕಾದರೂ, ರೀತಿನೀತಿಗಳನ್ನೂ ಕ್ರಮವನ್ನೂ ಬದಲಾಯಿಸಿದರೆ, ದೇಶದಲ್ಲಿರತಕ್ಕ ಜನರು ಅಭಿವೃದ್ಧಿಯಾಗಬಹುದಾಗಿದೆ. ಮೈಸೂರಿನಲ್ಲಿ ತಂಗಡಿಚಕ್ಕೆ ಕೈಗಾರಿಕೆ ಮುಖ್ಯವಾಗಿ ಹರಿಜನರ ಕೈಗಾರಿಕೆಯಾಗಿರುತ್ತದೆ. ಸರ್ಕಾರದವರು ತಮಗೆ ಬರಬೇಕಾದ ಆದಾಯವನ್ನು ತೆಗೆದುಕೊಂಡು, ಅವರಿಗೆ ಈ ಕೈಗಾರಿಕೆಯನ್ನು ಕೊಟ್ಟರೆ ಖಂಡಿತವಾಗಿ ಅವರು ಆರ್ಥಿಕ ವಿಷಯದಲ್ಲಿ ಮುಂದುವರಿಯುವುದಕ್ಕೆ ಅನುಕೂಲವಾಗುತ್ತದೆ. ಹಾಗೆ ಮಾಡದೇ ಇದ್ದರೆ, ಹರಿಜನರಿಗೆ ಹೇಗೆ ಜಾಸ್ತಿ ದುಡ್ಡು ಬರುತ್ತದೆ ! ಆಳುಗಳಾಗಿ ದುಡಿಯಿರಿ ಎನ್ನುವ ಮನೋಭಾವನೆ ಬಿಡಬೇಕು. ಕೇಂದ್ರ ಸರ್ಕಾರದವರು ಹರಿಜನರಿಗೆ ಪ್ರಿಫರೆನ್ಸ್ ತೋರಿಸಿ ಎಂದು ಹೇಳುತ್ತಿದ್ದಾರೆ. ಆದರೆ ನಮಗೆ ಏನೂ ಮಾಡುತ್ತಾ ಇಲ್ಲ. ಮುಖ್ಯವಾಗಿ ಹರಿಜನರ ಕೈಯಲ್ಲಿರುವ ಚರ್ಮದ ಕೈಗಾರಿಕೆ, ಚಕ್ಕೆಯ ಕೈಗಾರಿಕೆಗಳನ್ನು ಅವರಿಗೇ ಕೊಟ್ಟು ಸರ್ಕಾರದವರು ತಮಗೆ ಬರುವ ಆದಾಯವನ್ನು ತೆಗೆದುಕೊಂಡು, ಸರ್ಕಾರದವರು ಈ ವಿಷಯಕ್ಕೆ ಹೆಚ್ಚು ಗಮನಕೊಟ್ಟು ಹರಿಜನರಿಗೆ ಸಹಾಯ ಮಾಡುತ್ತಾರೆಂದು ಹೇಳಿ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಡಿ. ದೇವರಾಜ್ ಅರಸ್.—ಅನೇಕ ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಅರಣ್ಯ ಶಾಖೆಯ ಆಡಳಿತದ ವಿಷಯವಾಗಿ ಬಹು ಭಾಗವನ್ನು ಟೀಕೆ ಮಾಡಿದ್ದಾರೆ. ಈಗ ಒಂದೆರಡು ವರ್ಷಗಳಿಂದೀಚೆಗೆ ಈ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಆಡಳಿತ ದಕ್ಷತೆ ಹೆಚ್ಚುತ್ತಾ ಇದೆ ಎಂದರೆ ಅದು ಅತಿಶಯೋಕ್ತಿಯಲ್ಲ ಆದರೆ ದಕ್ಷತೆ ಹೆಚ್ಚುತ್ತಾ ಇದೆ ಎಂದ ಮಾತ್ರಕ್ಕೆ ಎಲ್ಲವೂ ಸರಿಯಾಗಿದೆ, ದೇಶಕ್ಕೆ, ಜನರಿಗೆ, ಈ ಅರಣ್ಯ ಇಲಾಖೆಯಿಂದ ಒದಗಬೇಕಾದ ಸೌಕರ್ಯಗಳು ಎಲ್ಲ ರೀತಿಯಲ್ಲೂ ಒದಗುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇತ್ತೀಚೆಗೆ ಮರಮುಟ್ಟುಗಳ ಬೆಲೆ ಬಹಳವಾಗಿ ಏರುತ್ತಿದೆ. ನಾವು ತೇಗದ ಮರವನ್ನು ತೆಗೆದುಕೊಂಡರೆ, ಸರ್ಕಾರದವರು ಈಗ ಸಾಧಾರಣವಾಗಿ ಕೆಳಮಟ್ಟದ ತೇಗದ ಮರವನ್ನು 12-13 ರೂಪಾಯಿಗಳಿಗೆ ಹರಾಜು ಹಾಕುತ್ತಾರೆ. ಉತ್ತಮ ದರ್ಜೆಯ ಮರವನ್ನು 15-20 ರೂಪಾಯಿಗಳಿಗೆ ಹರಾಜು ಹಾಕುತ್ತಾರೆ. ಇದು ಸರ್ಕಾರದ ಡಿಪೋಗಳಲ್ಲಿ ಆಗತಕ್ಕ ಹರಾಜಿನ ವಿಚಾರ. ಅದು ವ್ಯಾಪಾರಗಾರರ ಕೈಗೆ ಸಿಕ್ಕಿ ಮನೆಕಟ್ಟುವುದಕ್ಕೆ ಮುಟ್ಟುಗಳನ್ನು ಮಾಡುವುದಕ್ಕೆ ಇತ್ಯಾದಿ ಕೆಲಸಗಳಿಗೆ ಉಪಯೋಗ ಮಾಡುವುದಕ್ಕೆ ಇನ್ನೂ ಹೆಚ್ಚಿನ ದುಡ್ಡು ಬೀಳುತ್ತದೆ. ನಮ್ಮ ಕಾಡು ಪ್ರದೇಶದಲ್ಲಿ ಅನೇಕ specifications ಮಾಡಿದೆ. Classified timbers ಎಂದು ಒಂದು ಜಾತಿಯ ಮರಗಳೆಂದು ಕ್ಲಾಸಿಫೈ ಮಾಡಿ ಇದರ ಜಾತಿ ಕಾಡು ಜಾತಿ ಎಂದು ತಿಳಿದುಕೊಂಡು ಬಂದಿದ್ದಾರೆ. ಅಂತಹ ಮರಗಳಲ್ಲಿ ಬಿಲ್ವಾರದಮರ, ಮಾವಿನಮರ, ಇಂತಹ

ಮರಗಳು ಒಂದು ಅಡಿಗೆ 2-3 ರೂಪಾಯಿ ಬೆಲೆಯಾಗುವಂಥ ಸನ್ನಿವೇಶ ಬಂದಿದೆ. ಹಿಂದೆ ಹತ್ತು ಗಾಡಿಗಳಿಗಿಂತಲೂ ಜಾಸ್ತಿ ಇರುವ 100 ಅಡಿ ಮಾವಿನ ಮರವನ್ನಾಗಲಿ, ಬಿಲ್ವಾರದ ಮರವನ್ನಾಗಲಿ ಪುಕಸಟ್ಟೆಯಾಗಿ ಕಡಿದುಕೊಂಡು ಹೋಗಿ ಎನ್ನುವ ಸನ್ನಿವೇಶವಿತ್ತು. ಈಗ ಅದೇ ಮರಕ್ಕೆ 2-3 ರೂಪಾಯಿ ಬೆಲೆ ಬಂದಿದೆ. ಈ ರೀತಿ ಮರದ ಬೆಲೆ ಬಹಳವಾಗಿ ಹೆಚ್ಚುತ್ತಾ ಇರುವಾಗ ನಮ್ಮ ಜನಗಳಿಗೆ ಮನೆ ಕಟ್ಟುವುದಕ್ಕೆ ಮರ ಸಿಕ್ಕುವುದು ಬಹಳ ತೊಂದರೆಯಾಗಿದೆ. ಕುಲುಬೆ, ಮತ್ತಿ ವಗೈರೆ ಮರಗಳು ಇವೆ. ಕುಲುಬೆಮರ ನೇರವಾಗಿ ಒಂದೇ ಸಮನಾಗಿ ಬೆಳೆಯುತ್ತದೆ. ಹಿಂದೆ ಇಂತಹ ಮರಗಳನ್ನು ಪುಕಸಟ್ಟೆಯಾಗಿ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿತ್ತು. ಈಗ ಇಂತಹ ಮರಗಳಿಗೆ ಅಡಿಗೆ 4,5,6 ರೂಪಾಯಿಗಳು ಕೊಡಬೇಕಾದ ಸನ್ನಿವೇಶವಿದೆ. ಹೀಗಿರುವಾಗ ಸರ್ಕಾರದವರು ಮತ್ತು ಇಲಾಖೆಯವರು ಫಾರೆಸ್ಟ್ ಇರುವ ಭಾಗದಲ್ಲಿ ಅದನ್ನು ಸರಿಯಾಗಿ ನೋಡಿಕೊಂಡು ಹೋಗಬೇಕು. ಫಾರೆಸ್ಟ್‌ನಲ್ಲಿ ಹೊಸದಾಗಿ ಪ್ಲಾಂಟೇಷನ್ ಹಾಕಬೇಕು. ತೇಗದ ಮರಗಳು ನಮ್ಮ ಮೈಸೂರು ಸೀಮೆಯ ಅರಣ್ಯ ಇಲಾಖೆಯಲ್ಲಿವೆ. ಹೆಚ್ಚಿನ ಪ್ಲಾಂಟೇಷನ್ ತೇಗದ ಮರ, ಇನ್ನೂ ಕೆಲವು ಕಡೆ ಸೌದೆಗೆ ಉಪಯೋಗವಾದ ಮರಗಳನ್ನೂ ಹಾಕಿದ್ದಾರೆ. ಇದು ವಿನಾ ಬಾಕಿ ಜಾತಿ ಮರಗಳನ್ನು ಬೆಳೆಸುವುದಕ್ಕೆ ಸಾಕಷ್ಟು ಪ್ರಯತ್ನ ನಡೆಯುತ್ತಾ ಇಲ್ಲ. ಜೊತೆಗೆ ಕಾಡು ಜಾತಿ ಮರಗಳನ್ನು ಇದುವರೆಗೆ ಬಿಟ್ಟುಕೊಂಡು ಬಂದಿದ್ದಾರೆ. ಈ ಇಲಾಖೆಯಲ್ಲಿ ಆ ಜಾತಿಯ ಮರಗಳಿಗೆ ಹೆಚ್ಚು ಪ್ರಾಮುಖ್ಯತೆ ಇರಲ್ಲಿಲ್ಲ. ಅಂತಹ ಎಲ್ಲ ಮರಗಳನ್ನೂ ಕೂಡ ಹಿಂದೆ ಸೌದೆಗಾಗಿ ಉಪಯೋಗಿಸುತ್ತಿದ್ದರು. ಉತ್ತಮ ದರ್ಜೆ ಮರಗಳಿಗೆ ಖರೀದಿ ಬಹಳ ಜಾಸ್ತಿಯಾಗಿರುವುದರಿಂದ ಜನಗಳು ಮರಗಳನ್ನು ಮನೆ ಕಟ್ಟಿಕೊಳ್ಳುವುದಕ್ಕೂ ಮತ್ತು ಮರ ಮುಟ್ಟುಗಳಿಗೂ ಕೂಡ ಉಪಯೋಗಿಸುತ್ತಿದ್ದಾರೆ. ಆದರೆ ಹೀಗೆ ಉಪಯೋಗಮಾಡುವುದರಲ್ಲಿ ಕೆಲವು ನ್ಯೂನತೆಗಳಿವೆ. ಈ ಮರಗಳಿಗೆ ಕ್ರಿಮಿಕೀಟಗಳ ಬಾಧೆ ಜಾಸ್ತಿ. ಈ ಮರಗಳಿಗೆ ವಿಶೇಷವಾಗಿ ಕುಟ್ಟೆ ಹಿಡಿಯುತ್ತದೆ, ಗೆದ್ದಲು ತಿನ್ನುತ್ತದೆ. ಅರಣ್ಯ ಇಲಾಖೆಯಿಂದ ಕಾಡು ಜಾತಿ ಮರಗಳಿಗೆ, ಯಾವುದನ್ನುಪಯೋಗಿಸುತ್ತೇವೋ ಆ ಮರಗಳಿಗೆ, ಕ್ರಿಮಿಕೀಟಗಳ ಬಾಧೆ ತಪ್ಪಿಸುವುದಕ್ಕೆ ವೈಜ್ಞಾನಿಕವಾದ ಯಾವುದೋ ಒಂದು wood preservation plant ಇಟ್ಟಿದ್ದೇವೆಂದು ಹೇಳುತ್ತಾರೆ; ಆದರೆ ಅದು ಸಾರ್ವಜನಿಕರ ಉಪಯೋಗಕ್ಕೆ ಒದಗುವುದಿಲ್ಲ. ಈ ಕಾಡುಮರಗಳು ಸಾರ್ವಜನಿಕರಿಗೆ ಸದುಪಯೋಗವಾಗುವ ರೀತಿಯಲ್ಲಿ, ಚೆನ್ನಾಗಿ ಬಾಳಿಕೆಬರುವ ರೀತಿಯಲ್ಲಿ, ಅರಣ್ಯ ಇಲಾಖೆಯವರು ಯಾವುದಾದರೂ ಸಂಶೋಧನೆ ನಡೆಸಿ, ಏನಾದರೂ ಮಾರ್ಗವನ್ನು ಕಂಡುಹಿಡಿದು, 'ಟ್ರೀಟ್' ಮಾಡಿ, ಅನುಕೂಲ ಮಾಡಿ ಕೊಡುವ ಅಗತ್ಯತೆ ಬಹಳವಾಗಿದೆಯೆಂದು ಸರ್ಕಾರಕ್ಕೆ ಒತ್ತಾಯವಾಗಿ ಹೇಳುತ್ತೇನೆ.

ಬೊಂಬುಗಳ ವಿಚಾರವನ್ನು ಶ್ರೀ ಗೋಪಾಲಗೌಡರು ಪ್ರಸ್ತಾಪ ಮಾಡಿದರು. ಬೆಂಗಳೂರಿನಲ್ಲಿ ಒಂದು ಸಿನಿಮಾ ಮಂದಿರದ ಹತ್ತಿರ ಒಂದು ಮನೆಯನ್ನು ಕಟ್ಟಿದ್ದಾರೆ. ಅದರಲ್ಲಿ ಬೊಂಬನ್ನೇ ಉಪಯೋಗಿಸಿದ್ದಾರೆ. ತೊಲೆಯನ್ನು ಹಾಕಿ ಕಟ್ಟಿದರೆ ಎಷ್ಟು ಶಕ್ತಿಯಿರುತ್ತದೆಯೋ ಬೊಂಬುಗಳನ್ನು ಜೋಡಿಸಿ, ಮರದಹಾಗೆ ಉಪಯೋಗ ಮಾಡಿದರೂ ಅಷ್ಟೇ ಗಟ್ಟಿಯಾಗಿರುತ್ತದೆ. ಬೊಂಬುಗಳನ್ನು treat ಮಾಡಿ ಮರಕ್ಕೆ ಬದಲು ಉಪಯೋಗಿಸಿರುವುದನ್ನು ನಾನು ನೋಡಿದೆ. ಬೊಂಬನ್ನು ತಿಂಗಳುಗಟ್ಟಲೆ ನೀರಿನಲ್ಲಿ ನೆನೆಹಾಕಿದರೆ ಅದರ ಶಕ್ತಿ ಹೆಚ್ಚುತ್ತದೆ. ಈಗ ಸರ್ಕಾರದವರು ಖಾಸಗಿ ಜನರಿಗೆ ಲೈಸೆನ್ಸ್ ಕೊಟ್ಟು ಅವರೇ ಬೊಂಬುಗಳನ್ನು ಕಡಿದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈಗ ಮರದ ಅಭಾವವಿರುವ ಕಾಲದಲ್ಲಿ, ಬೆಲೆ ಜಾಸ್ತಿಯಾಗಿರುವ ಕಾಲದಲ್ಲಿ ಅನೇಕ ಬಡವರಿಗೆ ಬೊಂಬು ಸಿಕ್ಕಿದರೂ ಸಾಕು. ಹೆಂಚನ್ನು ಕುಂಬಾರರು ಸ್ಥಳದಲ್ಲೇ ಮಾಡುವುದರಿಂದ ಅಲ್ಲೇ ತೆಗೆದುಕೊಳ್ಳುತ್ತಾರೆ. ಮನೆ ಕಟ್ಟಲು ಬೊಂಬಿದ್ದರೆ, ನನ್ನ ಅನುಭವಕ್ಕೆ ಬಂದಿರುವ ಹಾಗೆ, ಇನ್ನಾವ ಮರವೂ ಬೇಕಾಗಿಲ್ಲ. ಬೊಂಬನ್ನು ಉಪಯೋಗಿಸಿ ಕಟ್ಟಿದ ಮನೆಗಳು ಮೂವತ್ತು-ನಲವತ್ತು ವರ್ಷ ಬಾಳಿಕೆ ಬರುತ್ತವೆ. ಸರ್ಕಾರದವರು ಅಲ್ಪ ವರಮಾನದವರಿಗಾಗಿ ಗೃಹನಿರ್ಮಾಣ ಯೋಜನೆ ಮಾಡಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಅಂದಾಜು ತಯಾರುಮಾಡಬೇಕೆಂದು ಹೇಳಿದರೆ, ಒಬ್ಬರು ಕುಳಿತುಕೊಳ್ಳುವ ರೂಮನ್ನು ಕಟ್ಟಲು ಎರಡು ಸಾವಿರ ರೂಪಾಯಿನ ಅಂದಾಜು ಮಾಡಿಕೊಡುತ್ತಾರೆ. ಎಲ್ಲ ಕಟ್ಟಡಗಳ ವಿಷಯದಲ್ಲಿಯೂ ಹೀಗೆಯೇ ಮಾಡುತ್ತಾರೆ. ಸುಲಭವಾಗಿ ಪ್ರೈಮರಿ ಸ್ಕೂಲುಗಳನ್ನು ಕಟ್ಟುವುದಕ್ಕೆ ಹೊಸ ವಿಧಾನವೆಂದು ಹೇಳಿ ಒಂಭತ್ತಂಗುಲದ ಗೋಡೆ ಕಟ್ಟಿ ಚಾವಣಿಗೆ ಕಲ್ನಾರು ಷೀಟುಗಳನ್ನು ಹಾಕಿ ಎಂದು ಹೇಳಿದ್ದಾರೆ. ಗೋಡೆಯ ಭದ್ರತೆಯನ್ನು ಯೋಚನೆ ಮಾಡುವುದಿಲ್ಲ. ಇದು ಸ್ವಲ್ಪ ದಿವಸದಲ್ಲೇ ಬಿದ್ದುಹೋಗುತ್ತದೆ. ಹೊರಗಡೆಯ ಗೋಡೆ ಒಂಭತ್ತು ಅಂಗುಲ ದಪ್ಪ ಕಟ್ಟಿದರೆ ಅದು ಶಾಶ್ವತವಾಗಿರುತ್ತದೆಂದು ನಂಬುವುದಕ್ಕಾಗುವುದಿಲ್ಲ. ಕಾಡುಗಳಿರುವ ಪ್ರದೇಶದಲ್ಲೇ ಬೊಂಬುಗಳು ಸಿಕ್ಕುವುದು. ದೇಶಾದ್ಯಂತ ಕಾಡುಗಳಿಲ್ಲ. ಮೈದಾನದಲ್ಲಿ ಬೊಂಬುಗಳು ಸಿಕ್ಕುವುದೂ ಕಷ್ಟ. ಕೋಲಾರ, ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ಮಾಳಿಗೆ ಮನೆಗಳನ್ನು ಕಟ್ಟುತ್ತಾರೆ. ಅಲ್ಲಿ ಮರಮುಟ್ಟುಗಳೂ ಸಿಕ್ಕುವುದಿಲ್ಲ, ಬೊಂಬುಗಳೂ ಸಿಕ್ಕುವುದಿಲ್ಲ, ಇವುಗಳಿಗೆ ಅಭಾವ, ಆದುದರಿಂದ ಹಂಗರದ ಕಡ್ಡಿಯನ್ನು ಹಾಕಿ ಕಟ್ಟುತ್ತಾರೆ. ವರ್ಷವರ್ಷವೂ ತೂತಾಗಿ ನೀರು ಸೋರುತ್ತದೆ, ಪುನಃ ಮುಚ್ಚುತ್ತಾರೆ, ಹೀಗೆ ಮನೆಗಳನ್ನು ಕಟ್ಟಿಕೊಂಡು ಕಷ್ಟಪಡುತ್ತಿದ್ದಾರೆ. ಆದುದರಿಂದ ಅರಣ್ಯ ಇಲಾಖೆಯವರು ಬೊಂಬುಗಳು ಹೆಚ್ಚು ಶಕ್ತಿ ಮತ್ತು ಬಾಳಿಕೆ ಬರುವ ರೀತಿಯಲ್ಲಿ ಹೇಗೆ ಹದ ಮಾಡಬಹುದೆಂದು ಕಂಡುಹಿಡಿದರೆ, ದೇಶಾದ್ಯಂತ ಬಡವರಿಗೆ ಅನುಕೂಲವಾಗುತ್ತದೆ. ಅನುಕೂಲಸ್ಥರು ತಾರಸಿ ಮನೆಗಳನ್ನು ಕಟ್ಟಿಕೊಳ್ಳುವವರಿಗೆ ಬೊಂಬುಗಳು ಬೇಕಾಗುವುದಿಲ್ಲ. ಆದರೆ ಹಳ್ಳಿಗಳಲ್ಲಿ ಲಕ್ಷಾಂತರ ಬಡಜನರು ಮನೆಗಳನ್ನು ಕಟ್ಟಲು ಹಣವಿಲ್ಲದೆ ಶಕ್ತಿಯಿಲ್ಲದೇಯಿರುವವರಿಗೆ ಸರ್ಕಾರದವರು ನೇರವಾಗಿ ಈ ಬೊಂಬುಗಳನ್ನು ಕಡಿಸಿ, 'ಟ್ರೀಟ್' ಮಾಡಿಕೊಟ್ಟರೆ ಎಷ್ಟೋ ಅನುಕೂಲ. ಇದನ್ನು ವೈಜ್ಞಾನಿಕ ರೀತಿಯಲ್ಲಿ ಹೇಗೆ ಮಾಡಬಹುದೆಂಬುದನ್ನು ಇಲಾಖೆಯವರು ಯೋಚನೆ ಮಾಡಬೇಕು. ಹೀಗೆ ಎಲ್ಲ ಜಿಲ್ಲೆಗಳಲ್ಲಿಯೂ ಎಲ್ಲ ತಾಲ್ಲೂಕುಗಳಲ್ಲಿಯೂ ಯಾವ ಜನರು ಬೊಂಬುಗಳನ್ನುಪಯೋಗಿಸಿ ಮನೆಗಳನ್ನು ಕಟ್ಟಲು ಇಷ್ಟಪಡುತ್ತಾರೋ ಅವರಿಗೆ ಒದಗಿಸುವುದಕ್ಕೆ ಈ ಇಲಾಖೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ನಮ್ಮ ಕಾಕನಕೋಟೆ, ಹೆಗ್ಗಡದೇವನಕೋಟೆ, ಬಂಡೀಪುರ, ಇಂಥ ಸ್ಥಳ

(ಶ್ರೀ ಡಿ. ದೇವರಾಜ್ ಅರಸ್.)

ಗಳಲ್ಲಿ ಕಾಡಿನಲ್ಲಿ ಬೇಕಾದಷ್ಟು ಹುಲ್ಲು (fodder) ಬೆಳೆದು ಬೇಸಿಗೆಯಲ್ಲಿ ಅದು ಒಣಗಿಹೋಗಿ ಬೆಂಕಿ ಬೀಳುತ್ತದೆ. ಹಳ್ಳಿಗಳಲ್ಲಿ ರೈತರಿಗೆ ಹುಲ್ಲಿನ ಅಭಾವವಿದೆಯಾದುದರಿಂದ ಈ ಹುಲ್ಲನ್ನು ಕತ್ತರಿಸಿ ರೈತರಿಗೊದಗಿಸುವ ಏರ್ಪಾಡು ಮಾಡುವುದು ಸೂಕ್ತವೆಂಬುದನ್ನು ಯೋಚನೆ ಮಾಡಬೇಕು. ಇದು ಕಷ್ಟವೆಂದು ಸರ್ಕಾರದವರು ಹೇಳುವುದಾದರೆ, ಬೊಂಬಾಯಿನಲ್ಲಿ ವಿಕ್ಟೋರಿಯಾ ಗಾಡಿಗಳು ಹೆಚ್ಚು, ಆ ಕುದುರೆಗಳಿಗೂ ದನ ಎಮ್ಮೆಗಳಿಗೂ ಪಶ್ಚಿಮಘಟ್ಟಗಳಿಂದ ಹುಲ್ಲನ್ನು ಕುಯ್ದು ನೂರು ಇನ್ನೂರು ಮೈಲಿ ದೂರ ತಂದು ಸರಬರಾಯಿ ಮಾಡುತ್ತಾರೆ, ಅವರಿಗೆ ಹೇಗೆ ಸಾಧ್ಯವೆಂದು ಕೇಳುತ್ತೇನೆ. ನಮ್ಮಲ್ಲಿ ಹುಲ್ಲು ಬೇಕಾದಷ್ಟು ಬೆಳೆದರೂ ಪ್ರಯೋಜನವಿಲ್ಲದೆ, ಬೇಸಿಗೆಯಲ್ಲಿ ಬೆಂಕಿ ಬಿದ್ದು ಹಾಳಾಗುತ್ತಿರುವುದರಿಂದ, ಬೇಸಿಗೆಯಲ್ಲಿ ಅನೇಕ ದನಗಳು ಮೇಯಲು ಹುಲ್ಲಿಲ್ಲದೆ ಸಾಯುತ್ತವೆ. ಹಣ ಕೊಟ್ಟರೂ ಹುಲ್ಲು ಸಿಕ್ಕುವುದಿಲ್ಲ. ಹೀಗಿರುವಾಗ ಈ ಹುಲ್ಲನ್ನು ಅಭಾವವಿರುವ ಕಡೆಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ವಿಚಾರವನ್ನು ಅರಣ್ಯ ಇಲಾಖೆ ತೀವ್ರವಾಗಿ ಯೋಚನೆ ಮಾಡಬೇಕು.

ಇನ್ನು ಸೌದೆಗೆ ರಹದಾರಿ ಕೊಡುವ ವಿಚಾರ. ಯುದ್ಧಕಾಲದಲ್ಲಿ ಮೈಸೂರು, ಬೆಂಗಳೂರು ಇಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸೌದೆಯ ಅಭಾವ ಉಂಟಾದ ಕಾರಣ ಲಾರಿಗಳಿಂದ ಸೌದೆಯನ್ನು ಕಾಡುಗಳಿಂದ ಸಾಗಿಸುವುದಕ್ಕೆ ಅನುಕೂಲ ಮಾಡಿದರು. ಕಾಡುಗಳಲ್ಲಿ 'ಕೂಪ್ಸ್' ಎಂದು ಮಾಡಿದರು. ಯಾವುದಾದರೂ ಗೊತ್ತಾದ ಪ್ರದೇಶದಲ್ಲಿ, ಇಷ್ಟು ಪ್ರದೇಶದಲ್ಲಿ ಇಷ್ಟು ಮರಗಳನ್ನು ಕಡಿದು ಸಾಗಿಸಬಹುದೆಂದು ಗೊತ್ತು ಮಾಡಿದರು. ಇದಕ್ಕೆ 'ಕೂಪ್ಸ್' ಎಂದು ಹೆಸರು. ಹೊಸದಾಗಿ ಮರಗಳನ್ನು ಕಡಿದು ಲಾರಿಗಳಲ್ಲಿ ಸಾಗಿಸುವುದಕ್ಕೆ ಏರ್ಪಾಡು ಮಾಡಿದರು. ಈ ಪದ್ಧತಿ ಈಗಲೂ ನಡೆದುಕೊಂಡು ಬರುತ್ತಿದೆ. ಕೆಲವು ಪಟ್ಟಣಗಳಿಗೆ ಸೌದೆಯನ್ನು ಕಡಿದು ಕಳುಹಿಸಬೇಕಾದುದು ನ್ಯಾಯ. ಕಾಡಿನ ಹತ್ತಿರವಿರುವ ಅಥವಾ ದೂರದಲ್ಲಿರುವ ರೈತರು ಆ ಕಾಡಿನಿಂದ ಸೌದೆಯನ್ನು ತೆಗೆದುಕೊಂಡು ಹೋಗಬೇಕಾದರೆ ಒಣಸೌದೆಯನ್ನು ಮಾತ್ರ ತರಬಹುದೆಂದು ಕಾನೂನು ಮಾಡಿದ್ದಾರೆ. ಮೊದಲು ಗಾಡಿಗೆ ರಹದಾರಿಗೆ ಆರಾಣೆ ಕೊಡಬೇಕಾಗಿತ್ತು, ಈಗ ಹನ್ನೆರಡಾಣೆ ಮಾಡಿದ್ದಾರೆ. ಒಣಸೌದೆಯನ್ನು ಮಾತ್ರ ತರಬಹುದು, ಹಸಿಸೌದೆಯನ್ನು ತರುವಹಾಗಿಲ್ಲ. ಒಂದು ಸಣ್ಣ ಹಸಿಯ ರೆಂಬೆಯನ್ನು ಸೌದೆಯ ಜೊತೆಗೆ ಹಾಕಿಕೊಂಡು ಬಂದರೆ ಅವರಿಗೆ ಜುಲ್ಮಾನೆ ಹಾಕುತ್ತಾರೆ.

4 P.M.

ಇದನ್ನು ಸರ್ಕಾರದವರಲ್ಲಿ ನಾನು ಈಗಾಗಲೇ ಮನವಿಮಾಡಿಕೊಂಡೆ. ಯಾವ ಒಂದು ಕಾನೂನಿದ್ದರೂ, ಲಾರಿಗಳಲ್ಲಿ ಬೇಕಾದಷ್ಟು ಹಸಿ ಸೌದೆಯನ್ನು ಹಾಕಿ ತರುವುದಕ್ಕೆ ಮಾತ್ರ ಬಿಟ್ಟು, ಒಬ್ಬ ರೈತ ತನ್ನ ಮನೆಗೆ ಒಂದು ಗಾಡಿಯಲ್ಲಿ ಹಸಿ ಸೌದೆ ತರಬೇಕು ಎಂದರೆ ಬಿಡುವುದಿಲ್ಲ. ಹೀಗೆ ಹೇಳಿದರೆ ಇದು ಬಹಳ ವಿಚಿತ್ರವಾಗಿ ಕಾಣುತ್ತದೆ. ಆದುದರಿಂದ ಈ ಕಾನೂನನ್ನು ದಯವಿಟ್ಟು ಬದಲಾಯಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಆಗಲೇ ಮನವಿ ಮಾಡಿಕೊಂಡಿದ್ದರೂ ಕೂಡ ಆ ರೀತಿ ಮಾಡದೆ ಇರುವುದಕ್ಕೆ ಅವರಿಗೆ ಏನು ಕಷ್ಟವಿದೆಯೋ, ಏನು ಅಡಚಣೆ ಬಂತೋ ಗೊತ್ತಾಗಲಿಲ್ಲ. ಇದಕ್ಕೆ ಈಗ ನಾವು ಒಂದು ಬುದ್ಧಿವಂತಿಕೆ ಕೆಲಸ ಮಾಡುತ್ತಿದ್ದೇವೆ. ಈ ಕಾಡುಗಳಲ್ಲಿ ಕಾಡುಕುರುಬರಿರುತ್ತಾರೆ. ನಮಗೆ ಬೇಕಾದ ಒಣ ಸೌದೆಯನ್ನು ತರಬೇಕಾದರೆ ಈ ಕಾಡುಕುರುಬರು ಸೌದೆಯನ್ನು ಒಡೆದು ಕೊಡುತ್ತಾರೆ. ಆ ಸೌದೆ ಯಾವಾಗಲೂ ಸಿಕ್ಕುವುದಿಲ್ಲ. ಆದುದರಿಂದ ಇವರ ಹತ್ತಿರ ಒಂದು ಒಪ್ಪಂದವನ್ನು ಮಾಡಿಕೊಂಡು ನಾಲ್ಕೈದು ಮರಗಳನ್ನು ಕಡಿದು ಇಟ್ಟಿರಿ ಎಂದು ಹೇಳಿದರೆ ಅವರು ಹಸಿ ಮರಗಳನ್ನು ಕಡಿದಿರುತ್ತಾರೆ. 15 ದಿವಸ, ಒಂದು ತಿಂಗಳು ಆದಮೇಲೆ ಆ ಮರಗಳನ್ನು ಒಣಸೌದೆ ಎಂದು ತರುವುದು ಈ ರೀತಿಯಾಗಿ ಕೆಲಸಗಳು ನಡೆಯುತ್ತಿವೆ. ಈಗ ಇರುವ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿದರೆ ಈ ರೀತಿ ನಡೆಯುವುದನ್ನು ತಪ್ಪಿಸುವುದಕ್ಕೆ ಸಾಧ್ಯ. ನಾನು ಹೇಳತಕ್ಕದ್ದು ಇನ್ನೊಂದು ವಿಚಾರವಿದೆ. ಹಸಿ ಮರವನ್ನು ಕಡಿದು ತರುವುದಕ್ಕೆ ಲಾರಿಗಳವರಿಗೆ ಲೈಸೆನ್ಸ್ ಕೊಡುತ್ತಾರೆ. ನಮ್ಮ ಕಡೆಗಳಲ್ಲಿ ಇನ್ನೊಂದು ವಿಧವಾದ ಲೈಸೆನ್ಸ್ ಕೊಡುತ್ತಿದ್ದಾರೆ. ಹೊಗೆಸೊಪ್ಪನ್ನು ಒಣಗಿಸುವುದಕ್ಕೆ ಮರ ಗಿಡಗಳು ಬೇಕಾಗುತ್ತವೆ. ಅದಕ್ಕೆ ಐದು ರೂಪಾಯಿ ಕೊಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಇಟ್ಟಿದ್ದಾರೆ. ಆದುದರಿಂದ ಒಣ ಸೌದೆಯನ್ನು ತರುವುದಕ್ಕೆ ಒಂದು ಗಾಡಿಗೆ ಎಂಟು ಆಣೆ ಕೊಡಬೇಕಾಗಿದೆ. ಇದಕ್ಕೆ ಬದಲು ಹನ್ನೆರಡಾಣೆ ಮಾಡಿ, ಒಂದು ರೂಪಾಯಿ ಬೇಕಾದರೂ ಮಾಡಿ, ಹಸಿ ಸೌದೆಯನ್ನು ತರುವುದಕ್ಕೆ ಅವಕಾಶವನ್ನುಂಟುಮಾಡಿಕೊಡಬೇಕಾದದ್ದು ಅತ್ಯಾವಶ್ಯಕ.

ಮತ್ತೊಂದು ವಿಚಾರ. ನಮ್ಮ ಕಡೆ ಕಾಡುಗಳಿಂದ ಮುಳ್ಳು ತರಬೇಕಾದರೆ ಅದಕ್ಕೂ ಕೂಡ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಒಂದು ಅಡ್ಡಿಯನ್ನು ಅರಣ್ಯ ಇಲಾಖೆಯವರು ತಂದೊಡ್ಡಿದ್ದಾರೆ. ಇದನ್ನು ಸರ್ಕಾರದವರು ಆಕ್ಟ್‌ನಲ್ಲಿ ನಮೂದು ಮಾಡಿದ್ದಾರೆಯೋ ಅಥವ ರೂಲ್ಸ್‌ನಲ್ಲಿ ಸೇರಿಸಿದ್ದಾರೆಯೋ ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ. ಕಾಡಿನಲ್ಲಿ ಇಲಾಖೆಯವರೇ ದುಡ್ಡು ಕೊಟ್ಟು ಮುಳ್ಳು ತೆಗೆಸಬೇಕಾದದ್ದು ಸೂಕ್ತ. ಅಂಥದರಲ್ಲಿ ಮುಳ್ಳು ತಂದು ಬೇಲಿ ಹಾಕಿಕೊಳ್ಳುವುದಕ್ಕೆ ಲೈಸೆನ್ಸ್ ತೆಗೆದುಕೊಂಡು ಬರಬೇಕು ಎಂದರೆ ಇದು ಆಶ್ಚರ್ಯವಾಗಿ ಕಾಣುತ್ತದೆ. ಹುಣಸೂರಿನಲ್ಲಿ ಕೆಲವರು ಬೇಲಿಹಾಕಲು ಮುಳ್ಳನ್ನು ಲೈಸೆನ್ಸ್ ಪಡೆಯದೆ ತಂದರು ಎಂಬ ಕಾರಣದ ಮೇಲೆ ಅವರಿಗೆ 25 ರೂಪಾಯಿಗಳ ದಂಡ ಹಾಕಿದ್ದಾರೆ. ಈ ರೀತಿಯಾಗಿ ಅನೇಕ ಕಡೆಗಳಲ್ಲಿದೆ ಎಂದು ಹೇಳುತ್ತೇನೆ. ಸರ್ಕಾರದವರು ತಾವಾಗಿಯೇ ಮುಳ್ಳನ್ನು ದುಡ್ಡು ಕೊಟ್ಟು ತೆಗೆಸಬೇಕು. ಅಂಥದನ್ನು ರೈತರು ಹೋಗಿ ತಾವಾಗಿಯೇ ತೆಗೆದರೆ ಅದನ್ನು ಅಪರಾಧವೆಂದು ಪರಿಗಣಿಸಬಾರದು. ಕಾಡಿನಲ್ಲಿ ಮುಳ್ಳು ಹೋಗುವುದರಿಂದ ಇತರ ಜಾತಿಯ ಮರಗಳು ಚೆನ್ನಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಕಾಡಿನಲ್ಲಿರುವ ಮರಗಳಿಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಇನ್ನೊಂದು ವಿಚಾರ. ಆನೆಗಳ ಹಾವಳಿಯ ವಿಚಾರವಾಗಿ, ಕಾಡುಗಳ ಸರಹದ್ದಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ಇವುಗಳ ಹಾವಳಿಯನ್ನು ತಪ್ಪಿಸಬೇಕೆಂದು ಬಹು ವರ್ಷಗಳಿಂದ ಸರ್ಕಾರದವರಲ್ಲಿ ಕೇಳುತ್ತಿದ್ದೇವೆ. Khedda operations, ಆನೆಗಳನ್ನು ಹಿಡಿಯುವ ಕಾರ್ಯಕ್ರಮವನ್ನು ಆಗಾಗ ನಡೆಸುತ್ತಾರೆ. ಇದು ಒಂದು ವಿಧವಾದ preventive measure. ಇದನ್ನು ನಡೆಸಿಕೊಂಡು ಬರುತ್ತಿ

ದ್ದಾರೆ. ಇದರ ಜೊತೆಗೆ ಈಗ ನಾಲ್ಕಾರು ವರ್ಷಗಳಿಂದ ಅರಣ್ಯ ಇಲಾಖೆಯವರು ಒಂದು ಏರ್ಪಾಡನ್ನು ಮಾಡಿದ್ದರು. ಅದೇನೆಂದರೆ ಇಲಾಖೆಯಲ್ಲಿರತಕ್ಕ ಕೆಲವು ಗಾರ್ಡುಗಳಿಗೆ ಬಂದೂಕುಗಳನ್ನು ಕೊಟ್ಟು, ಭತ್ತದ ಬೆಳೆ ಬಂದ ಕಾಲದಲ್ಲಿ, ಭತ್ತ, ರಾಗಿಮುಂತಾದ ಫಸಲುಗಳು ನಾಶವಾಗದಂತೆ ರಕ್ಷಣೆಕೊಡುವುದಕ್ಕಾಗಿ, ಬಂದೂಕುಗಳನ್ನು ಹೊಂದಿರುವ ಗಾರ್ಡುಗಳನ್ನು ಈ ಕೆಲಸಕ್ಕೆ ನೇಮಿಸುತ್ತಿದ್ದರು. ಅವರು ಹತ್ತು ಮೈಲಿ ಬೌಂಡರಿಯಲ್ಲಿ ನೋಡಿಕೊಂಡು ಕಾಡಿನಿಂದ ಆನೆಗಳು ಬರುವ ಸಂಭವವಿದ್ದರೆ ಬಂದೂಕುಗಳಿಂದ ಗುಂಡು ಹಾರಿಸಿ, ಶಬ್ದಮಾಡಿ, ಅವುಗಳನ್ನು ಹೆದರಿಸಿ ಫಸಲನ್ನು ನಾಶಮಾಡುವುದಕ್ಕೆ ಬಾರದಹಾಗೆ ತಡೆಯುತ್ತಿದ್ದರು. ಈ ವರ್ಷ ನಮ್ಮ ಕಡೆ ಏನಾಯಿತೆಂದರೆ ಆ ರೀತಿಯ protection ಕೊಡಲಿಲ್ಲ. ಯಾಕೆ ಕೊಡಲಿಲ್ಲವೋ ಗೊತ್ತಾಗಲಿಲ್ಲ. ಈ ವರ್ಷ ಅನೇಕ ಕಡೆ ಆನೆಗಳು ಬಂದು ಗದ್ದೆಗಳಲ್ಲಿನ ಭತ್ತದ ಫಸಲನ್ನು ನಾಶಮಾಡಿಹೋಗಿವೆ. ನಾನು ಅರಣ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದಾಗ ಅವರು ನಮ್ಮ ಹತ್ತಿರ ಬಂದೂಕುಗಳಿದ್ದರೂ ಕೂಡ ಅವಕ್ಕೆ ತೋಟಾಗಳನ್ನು ಸರಬರಾಜು ಮಾಡುತ್ತಿಲ್ಲವಾದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಸುಲಭವಾಗಿ ಒಂದೇ ಮಾತಿನಲ್ಲಿ ಹೇಳಿದರು. ತೋಟಾಗಳನ್ನು ಯಾಕೆ ಅವರಿಗೆಲ್ಲ ಕಳುಹಿಸಿಲ್ಲವೋ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ಕೊರವಂಜಿ ಮಾಸಪತ್ರಿಕೆಯಲ್ಲಿ ಬಂದಿದ್ದ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ—ಒಂದು ಮರವನ್ನು ಹರಾಜು ಹಾಕಬೇಕಾದಾಗ ಒಬ್ಬ ಶೇಕದಾರನನ್ನು ಆ ಕಾರ್ಯಕ್ಕೆ ನೇಮಿಸಿದರಂತೆ. ಆತನು ಸ್ಥಳಕ್ಕೆ ಹೋಗಿ ನೋಡಿ ಅದನ್ನು ಅಳತೆ ಮಾಡುವುದಕ್ಕೆ ತನ್ನಲ್ಲಿ 'ಟೇಪ್' ಇಲ್ಲವೆಂದು ಅಮಲ್ದಾರರಿಗೆ ರಿಪೋರ್ಟ್ ಮಾಡಿದನಂತೆ. ಅಮಲ್ದಾರರು ತಮಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದರಂತೆ. ಅನಂತರ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಲ್ಪಟ್ಟು ಮುಂದಿನ ವರ್ಷಕ್ಕೆ 'ಟೇಪನ್ನು' ಶೇಕದಾರನಿಗೆ ಕಳುಹಿಸಿಕೊಟ್ಟರಂತೆ. ಒಂದು ವರ್ಷವಾದಮೇಲೆ ಶೇಕದಾರನು ಅಳೆಯುವುದಕ್ಕೆ ಹೋಗಿ ನೋಡಿದರೆ ಅಲ್ಲಿ ಮರವೇ ಇರಲಿಲ್ಲವಂತೆ—ಹೀಗಾಗಬಾರದು ಎಂದೂ, ಇದಕ್ಕೆ ಕೂಡಲೇ ಸರಿಯಾದ ಏರ್ಪಾಡನ್ನು ಇಲಾಖೆಯವರು ಮಾಡಬೇಕೆಂದೂ ನಾನು ಸಲಹೆಮಾಡುತ್ತೇನೆ.

Mr. SPEAKER.—The House will now rise and meet at 4-35 P.M.

The House adjourned for Lunch at Ten Minutes past Four of the Clock and reassembled at Thirty-Five Minutes past Four of the Clock.

[MR. SPEAKER in the Chair]

Sri J. MOHAMED IMAM (Jagalur).—With the kind permission of the Chair, I have a representation on behalf of the House, Sir. Tomorrow being a holiday, Shab-e-barat, it is the desire of many Members that we should hold the Session in the morning so that they may be free in the afternoon.

Mr. SPEAKER.—They have already come to an arrangement to hold the Session in the morning at 8-30.

Sri K. PATTABHIRAMAN (Kolar).—Very well, Sir.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಹತ್ತಾರುವರ್ಷಗಳಿಂದೀಚೆಗೆ ಮೈಸೂರು ದೇಶದಲ್ಲಿ ಎಲ್ಲ ಕಡೆಗಳಲ್ಲಿಯೂ ಕಾಡುಗಳಲ್ಲಿ ಮರಗಳನ್ನು ಕತ್ತರಿಸಿ ಪುನಃ ಮರಗಳನ್ನು ನೆಡುತ್ತಿದ್ದಾರೆ. ಆದರೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮರಗಳನ್ನು ಕಡಿಯುತ್ತಿದ್ದಾರೆಯೇ ಹೊರತು ಗಿಡಗಳನ್ನು ಹಾಕುತ್ತಿರುವುದು ಮಾತ್ರ ಎಲ್ಲಿಯೂ ಕಾಣುತ್ತಿಲ್ಲ. ಹತ್ತಾರು ಮರಗಳನ್ನು ಕಡಿದರೆ ಒಂದು ಗಿಡವನ್ನೂ ಹಾಕುತ್ತಿಲ್ಲ. ಅರಣ್ಯ ಇಲಾಖೆ ವಿಷಯ ಹೀಗಿದೆ. ಮಳೆ ಬರಬೇಕಾದರೆ ಅರಣ್ಯವಿರಬೇಕು ಎಂದು ತಜ್ಞರು ಹೇಳುತ್ತಾರೆ. ಆದರೆ ಹಳ್ಳಿಗಳಲ್ಲಿರುವ ರೈತರು ಮಳೆ ಬರಬೇಕಾದರೆ ಅರಣ್ಯಗಳು ಇರಬೇಕೆಂಬುದನ್ನು ತಿಳಿದುಕೊಂಡಿಲ್ಲ. ಅದಕ್ಕೋಸ್ಕರವಾಗಿ ಈ ಹೆಚ್ಚಿಗೆ ಪ್ರಚಾರ ಕಾರ್ಯ ನಡೆಯಬೇಕು. ಕಾಡುಗಳನ್ನೂ, ಮರಗಳನ್ನೂ ಕತ್ತರಿಸದೆ ಇರುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅವನ್ನೆಲ್ಲ ತೆಗೆದುಕೊಳ್ಳುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ. ಗ್ರಾಮಸ್ಥರು ತಮ್ಮ ಸ್ವಂತ ಮರಗಳನ್ನು ಕತ್ತರಿಸಿದರೂ ಪುನಃ ನೆಡುತ್ತಿಲ್ಲ. ಅದಕ್ಕೋಸ್ಕರವಾಗಿ ನೀಲಗಿರಿ ಎಣ್ಣೆ ಸಸಿಗಳನ್ನೂ ಮತ್ತು ಇತರ ಸಸಿಗಳನ್ನೂ ಅವರಿಗೆ ಉಚಿತವಾಗಿ ಕೊಟ್ಟು, ಇವುಗಳನ್ನು ಹೆಚ್ಚಾಗಿ ರೈತರು ತಮ್ಮ ಸ್ವಂತ ಭೂಮಿಯಲ್ಲಿಯೂ ಮತ್ತು ಗೋಮಾಳಗಳಲ್ಲಿಯೂ ಬೆಳೆಯುವಂತೆ ಏರ್ಪಾಡು ಮಾಡಬೇಕು. ಇದಕ್ಕೆ ರೆವಿನ್ಯೂ ಇಲಾಖೆಯವರೂ ಮತ್ತು ಇತರ ಇಲಾಖೆಗಳವರೂ ಸ್ವಲ್ಪ ಒತ್ತಡವನ್ನು ಹಾಕಿ ಆಯಾ ಪ್ರದೇಶದ ಜನರಿಂದ ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ.

ಬಿತ್ತನೆ ಬೀಜಗಳಿಗೆ ಈಗ 85 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇದು ಸಾಲುವುದಿಲ್ಲ. ಇನ್ನೂ ಹೆಚ್ಚು ಹಣವನ್ನು ಒದಗಿಸಿ, ಹೆಚ್ಚು ಹೆಚ್ಚಾಗಿ ಮರಗಳು ಜಾಗ್ರತೆ ಬೆಳೆಯುವುದಕ್ಕೂ, ದೊಡ್ಡದೊಡ್ಡ ಕಾಡುಗಳು ಜಾಗ್ರತೆ ಬರುವಹಾಗೆಯೂ ಏರ್ಪಾಡು ಮಾಡಬೇಕು. ಬೆಂಗಳೂರು ಉತ್ತರ ತಾಲ್ಲೂಕು ಕಾಡು ಗಿಡಗಳನ್ನು ಸರಿಯಾಗಿ ನೋಡಿಕೊಳ್ಳುವವರೇ ಇಲ್ಲ. ಫಾರೆಸ್ಟ್ ಗಾರ್ಡುಗಳು ಸೌದೆಗಾಡಿ ಹಿಡಿದರೂ ಒಂದಾಣೆ, ಎರಡಾಣೆ ವಸೂಲುಮಾಡಿಕೊಂಡು ಬಿಟ್ಟುಬಿಡುತ್ತಾರೆ. ಅರಣ್ಯಗಳ ಕಡೆ ಹೋಗಿ ಏನಾಗುತ್ತಿದೆಯೆಂಬುದನ್ನು ಸರಿಯಾಗಿ ನೋಡುವವರೇ ಇಲ್ಲ. ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು ಅರಣ್ಯಗಳಲ್ಲಿ ಹೆಚ್ಚಾಗಿ ಗಿಡಗಳನ್ನು ಹಾಕಬೇಕು. ಕಳ್ಳತನದಲ್ಲಿ ಸೌದೆ, ನಾಟಾ ವಗೈರೆ ಸಾಗಿ ಹೋಗದಿರುವ ಹಾಗೆ ಏರ್ಪಾಡು ಮಾಡಬೇಕು.

ಅಲ್ಲದೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ ಎಷ್ಟೋ ಕಡೆ ಅರಣ್ಯಗಳಲ್ಲಿ ಜಮೀನನ್ನು ವ್ಯವಸಾಯಕ್ಕಾಗಿ ಕೊಟ್ಟಿದ್ದಾರೆ. ಹರಿಜನರು ಕೇಳಿದಾಗ ಫಾರೆಸ್ಟ್ ಜಮೀನನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಬೇರೆಯವರು ಕೇಳಿದಾಗ ಧಾರಾಳ

(ಶ್ರೀ ಆರ್. ಮುನಿಸ್ವಾಮಯ್ಯ.)

ವಾಗಿ ಕೊಡುತ್ತಿದ್ದಾರೆ: ಹೀಗೆ ರಾಮನಗರ, ಮಾಗಡಿ ತಾಲ್ಲೂಕುಗಳಲ್ಲಿ ನೂರಾರು ಎಕರೆಗಳನ್ನು ಕೊಟ್ಟಿದ್ದಾರೆ, ಹರಿಜನರು ಅರ್ಜಿ ಹಾಕಿದಾಗ ನಾವು ಉಳಿದಿರಬೇಕು, ಆ ಭೂಮಿಯನ್ನು ಕೊಡಲು ಆಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟು ಅದಾದಮೇಲೆ ಒಂದೆರಡು ತಿಂಗಳಾದನಂತರ ಬೇರೆಯವರಿಗೆ ಕೊಟ್ಟಿದ್ದಾರೆ. ರಾಮನಗರ, ಮಾಗಡಿ ಮತ್ತು ಬೆಂಗಳೂರು ತಾಲ್ಲೂಕುಗಳಲ್ಲಿ ನೂರಾರು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಹರಿಜನರು ಜಮೀನು ಕೇಳಿದಾಗ ಮಾತ್ರ ಕಾಡನ್ನು ಕೊಟ್ಟರೆ ನಷ್ಟವಾಗುತ್ತದೆಂದು ಹೇಳಿ ಅದಾದಮೇಲೆ ಬೇರೆಯವರಿಗೆ ಕೊಟ್ಟರೆ ನಷ್ಟವಿಲ್ಲವೆ ? ಇದು ಸರಿಯೆ ಎಂಬುದನ್ನು ಯೋಚನೆ ಮಾಡಬೇಕು. ಜಕ್ಕೂರು ಫಾರೆಸ್ಟ್, ಮಾಕಳಿ ಫಾರೆಸ್ಟ್ ಮುಂತಾದ ಕಡೆ ಜಮೀನನ್ನು ಕೆಲವರಿಗೆ ಕೊಟ್ಟಿದ್ದಾರೆ, ಹರಿಜನರಿಗೆ ಮಾತ್ರ ಅಲ್ಲಿ ಕೊಡುವುದಕ್ಕಾಗುವುದಿಲ್ಲ. ಮಂತ್ರಿಗಳು ಕೂಡ ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಹರಿಜನರೂ ಕೂಡ ಬೇರೆಯವರಂತೆ ಪ್ರಜೆಗಳಲ್ಲವೆ. ಈ ವ್ಯತ್ಯಾಸ ಏಕೆ ಮಾಡುವುದು ? 20 ವರ್ಷಗಳಿಂದ ಹರಿಜನರು ಅರ್ಜಿ ಹಾಕಿದರೂ ಕೊಡದೆ ಎರಡು ವರ್ಷಗಳಿಂದ ಅರ್ಜಿ ಹಾಕಿದಂತಹ ಬೇರೆಯವರಿಗೆ ಕೊಡುತ್ತಿದ್ದಾರೆ. ಇದನ್ನು ಪರಿಶೀಲಿಸಿ ಹರಿಜನರಿಗೂ ಈ ಜಮೀನನ್ನು ಕೊಡಲು ಏರ್ಪಾಡು ಮಾಡಬೇಕು.

ಮುಳಿಗಲ್‌ವ್ಯಾಲಿ ಕಾಡುಗಳಲ್ಲಿ ಗಂಧದ ಮರಗಳು ಬೇಕಾದಷ್ಟಿದ್ದುವು. ಯಾವಾಗ ಅವನ್ನು ಕತ್ತರಿಸಿದರೋ ಗೊತ್ತಿಲ್ಲ. ಸರ್ಕಾರದವರೇ ಕತ್ತರಿಸಿಕೊಂಡು ಹೋಗಿದ್ದಾರೆಂದು ಗಾರ್ಡುಗಳು ಹೇಳುತ್ತಾರೆ. ಖಾಸಗಿ ಜನರೂ ಕತ್ತರಿಸಿದ್ದನ್ನು ನಾನು ನೋಡಿದ್ದೇನೆ. ಈಗ ಅಲ್ಲಿ ಸಣ್ಣದು 117 ಗಿಡಗಳು ಮಾತ್ರ ಇವೆ. ಸಾವಿರಾರು ಗಿಡ ಇದ್ದ ಕಡೆ 117 ಗಂಧದ ಸಸಿಗಳು ಮಾತ್ರ ಇವೆ. ಗಂಧದ ಮರಗಳನ್ನು ಸರ್ಕಾರದವರಾದರೂ ಬೆಳೆಸಬೇಕು, ಇಲ್ಲದಿದ್ದರೆ ವ್ಯವಸಾಯಗಾರರಿಗಾದರೂ ಅವಕಾಶ ಕೊಟ್ಟು ಅವರು ಸ್ವಂತವಾಗಿ ಬೆಳೆಸುವುದಕ್ಕೆ ಅವಕಾಶ ಕೊಡಬೇಕು. ಮುಳಿಗಲ್‌ವ್ಯಾಲಿ ಫಾರೆಸ್ಟಿನಲ್ಲಿ ಈ ಪರಿಸ್ಥಿತಿಯಿದೆ. ಅರಣ್ಯ ಇಲಾಖೆ ಮಂತ್ರಿಗಳು ಅದನ್ನು ನೋಡಿಕೊಂಡು ಬಂದು ಒಂದು ವರ್ಷವಾಗಿದೆ. ಇಲ್ಲಿಯವರೆಗೂ ಹೊಸದಾಗಿ ಗಿಡ ಹಾಕುವುದಕ್ಕೆ ಅವಕಾಶ ಮಾಡಿಲ್ಲ. ಗಿಡಗಳನ್ನು ಕಡಿದುಹಾಕಿದ ಕೂಡಲೆ ಬೇರೆ ಮರ ಹಾಕುವುದು ಫಾರೆಸ್ಟ್ ಇಲಾಖೆಯ ಕೆಲಸ, ಅದಕ್ಕೆ ಶ್ರದ್ಧೆ ವಹಿಸಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ಗ್ರಾಮಾಂತರದ ಜನರು ಫಾರೆಸ್ಟ್ ಪಕ್ಕದಲ್ಲಿರುವ ಜನರು ಸೌದೆ ಸಾಗಿಸುತ್ತಿದ್ದರೆ ತಡೆಮಾಡಬೇಕು, ಪಟೇಲಶ್ಯಾನುಭೋಗರು ತಡೆಮಾಡಬೇಕು, ಕಡಿದು ಸಾಗಿಸದಂತೆ ಅವರೆಲ್ಲರೂ ಸೇರಿ ಮರಗಳನ್ನು ನೋಡಿಕೊಳ್ಳಬೇಕು ಎಂದು ಅವರ ತಲೆಯಮೇಲೆ ಜವಾಬ್ದಾರಿ ಹೊರಿಸಬೇಕು. ಈಗ ಯಾರೂ ತಡೆಗಟ್ಟುತ್ತಿಲ್ಲ.

ಈಗ ವಿದ್ಯಾಭ್ಯಾಸದ ಸುಧಾರಣೆ ಜಾರಿಗೆ ತರುತ್ತಿದ್ದಾರೆ, ಹಳ್ಳಿಗಳ ಪಕ್ಕದಲ್ಲಿ ಪ್ಲಾಂಟೇಷನ್ ಇದ್ದರೆ ಸ್ಕೂಲಿನವರು ಹೋಗಿ ಗಿಡ ಹಾಕುವುದಕ್ಕೆ ಬಡ್ಜೆಟ್ಟಿನಲ್ಲಿ ಹಣ ಸಾಕಾದಷ್ಟು ಒದಗಿಸಬೇಕೆಂದು ಸಲಹೆಮಾಡುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಫಾರೆಸ್ಟ್ ವಿಚಾರ ಒಂದೆರಡು ಕೇಳಿದ್ದರಿಂದ ನಾಲ್ಕು ಮಾತನಾಡಬೇಕೆಂದು ಆಸೆ ಪಡುತ್ತೇನೆ. ವಿಷಯವೇನೆಂಬುದನ್ನು ಹೇಳುತ್ತೇನೆ. ಏಕೆಂದರೆ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ದೊಡ್ಡದು ಮತ್ತು ಸರ್ಕಾರಕ್ಕೆ ಮುಖ್ಯವಾದುದು ಎಂದು ತಿಳಿದುಕೊಂಡಿದ್ದೇನೆ. ಇಂಥ ಜವಾಬ್ದಾರಿಯಿರುವ ಅರಣ್ಯದ ವಿಚಾರವಾಗಿ ಏಕೆ ಇಷ್ಟು ಉದಾಸೀನತೆಯಿದೆಯೋ ಗೊತ್ತಿಲ್ಲ. ಹಸೀ ಸೌದೆ ಕಡಿಯಕೂಡದೆಂದು ರೂಲ್ಸ್ ಇದ್ದರೂ ನಾನು ನೋಡಿರುವಹಾಗೆ ಬೇಕಾದಷ್ಟು ಹಸೀ ಸೌದೆ ತುಂಬಿದ ಗಾಡಿಗಳು ಲೈನಾಗಿ ಹೋಗುತ್ತಿವೆ. ಸಂಡೂರು ಗುಡ್ಡದಕಡೆ ಏಕೆ ಹೀಗಾಗುತ್ತಿದೆಯೆಂದು ಯೋಚನೆಯಾಗಿದೆ. ಅದು ಬಹಳ ದೊಡ್ಡ ಗುಡ್ಡ. ಅಲ್ಲಿದ್ದ ಉತ್ತಮವಾದ ಬೆಲೆಬಾಳುವ ಮರಗಳು ನಷ್ಟವಾಗಿವೆ. ಅಂಥ ಉತ್ಕೃಷ್ಟವಾದ ಫಾರೆಸ್ಟಿನಲ್ಲಿ ಧನಿಕರು ಅವಕಾಶಪಡೆದು ಸಾವಿರಾರು ಗಿಡಗಳನ್ನು ಕಡಿದು ಸಾಗಿಸಿದುದರಿಂದ ಈ ದಿವಸ ಅಲ್ಲಿರುವ ಸಾವಿರಾರು ಎಕರೆಯಲ್ಲಿ ಒಂದು ಗಿಡವೂ ಇಲ್ಲದಂತಾಗಿದೆ. ಇದು ನಿಜ. ದಿವಸ ಬೆಳಗಾದರೆ 30 ಗಾಡಿ ಸೌದೆ ಹೇರುತ್ತಾರೆ. ಇದಕ್ಕೆ ಕಾರಣವೇನು ? ಇದನ್ನು ಕೇಳಿ ಬಹಳ ಚಿಂತೆಯಾಯಿತು. ಇಂಥ ಅಂದವಾಗಿದ್ದ ಗುಡ್ಡ ಪ್ರದೇಶ, ಹೊರಗಿನಿಂದ ಅನೇಕರು ಬಂದು ನೋಡಿ ಆನಂದಪಡುತ್ತಿದ್ದ ಕಾಡು, ಬೈಲು ಪ್ರದೇಶವಾಗಿದೆ. ಹೀಗಾದರೆ ಯಾವ ಸಂಪತ್ತು ತಾನೆ ಉಳಿಯುತ್ತದೆ ? ಅಲ್ಲೇನಾದರೂ ಹೊಸದಾಗಿ ಮರ ಹಾಕುವುದಕ್ಕೂ ಮುಂದೆ ಈ ರೀತಿ ಹಸೀ ಸೌದೆ ಸಾಗದಿರುವುದಕ್ಕೂ ಏರ್ಪಾಡು ಮಾಡಿದ್ದಾರೆಯೆ ಎಂಬುದನ್ನು ತಿಳಿಸಬೇಕು. ಆ ಗುಡ್ಡದಮೇಲೆ ಉತ್ಕೃಷ್ಟವಾದ ಹುಲ್ಲು ಬೆಳೆಯುತ್ತದೆ. ಅದನ್ನು ಹೇಳಬೇಕಾದ ಅಗತ್ಯವಿರಲಿಲ್ಲ, ಶ್ರೀ ದೇವರಾಜ ಅರಸ್‌ರವರು ಹೇಳಿದ್ದರಿಂದ ಅದನ್ನು ಹೇಳಬೇಕಾದ ಸಂದರ್ಭ ಬಂತು. ಈ ಗುಡ್ಡದಮೇಲಿರುವ ಇಡೀ ಹುಲ್ಲು ನಮ್ಮ ದೇಶಕ್ಕೆಲ್ಲಾ ಸರಬರಾಯಾಗಬೇಕೆಂಬ ಉದ್ದೇಶವಿದೆ. ಹಸೀ ಹುಲ್ಲು ಕೆಡದಂತೆ ಒಂದು ವಿಧಾನ ಕಂಡುಹಿಡಿದು ಅದನ್ನು ಕಾಪಾಡಬೇಕು. ಅದಕ್ಕೆ ವಿಧಾನವಿದೆ. ಹಾಗೆ ಮಾಡಿ ವ್ಯವಸಾಯಗಾರರಿಗೆ ಈ ಹುಲ್ಲನ್ನು ಬೇಸಿಗೆ ಕಾಲದಲ್ಲಿ ಉಪಯೋಗಿಸಲು ಸರಬರಾಯಿಮಾಡಿದರೆ ಬಹಳ ಸಹಾಯವಾಗುತ್ತದೆ, ಅದರಿಂದ ಹಾಲು ಮೊಸರಿನ ಅಭಾವವೂ ತಪ್ಪಬಹುದು. ಆದ್ದರಿಂದ ಏನಾದರೂ ವ್ಯವಸ್ಥೆಮಾಡಿ ಹುಲ್ಲನ್ನು ಶೇಖರಿಸಿ ಕೆಡದಂತೆ ಕಾಪಾಡಬೇಕು. ಇದು ಬೊಂಬಾಯಿಗೆ ಬೇರೆ ಹೋಗುತ್ತದೆಂದು ಕೇಳಿದ್ದೇನೆ. ಬೇಕಾದಷ್ಟು ಹುಲ್ಲು ಬೆಳೆಯುವಾಗ ನಮ್ಮ ದೇಶಕ್ಕೇ ಅದರ ಉಪಯೋಗ ದೊರೆಯುವಂತೆ ಅದನ್ನೇಕೆ ಶೇಖರಿಸಬಾರದು ? ಜನರಿಗೂ ಕೆಲಸವಿಲ್ಲದವರಿಗೂ ಕೆಲಸ ಸಿಕ್ಕಿದಂತಾಗುತ್ತದೆ. ಸೌದೆ ಹೆಚ್ಚಾಗಿ ಹೋಗಲು ಕಾರಣ ತಿಳಿಸಬೇಕು, ಮುಂದಾದರೂ ಕ್ರಮ ತೆಗೆದುಕೊಂಡು ಈ ಸಾಗಾಣಿಕೆಯನ್ನು ತಡೆಗಟ್ಟಬೇಕು ಎಂದು ಅರಿಕೆ ಮಾಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಇಲಾಖೆ ವಿಚಾರದಲ್ಲಿ ನಾವು ವರ್ಷೇ ವರ್ಷೇ ಇದರ ಆದಾಯ ವೆಚ್ಚ ತಿಳಿಸುತ್ತಿದ್ದೇವೆ. ಕಳೆದ ವರ್ಷ ಕೂಡ ಇದರಲ್ಲಿ ನಿವ್ವಳ ಉತ್ಪತ್ತಿಯೆಷ್ಟು ಎಂದು ಕೇಳಿದೆ. ಒದಗಿಸುತ್ತೇವೆಂದು ಮಂತ್ರಿಗಳು ಹೇಳಿದರು, ಹೇಳಿದರೂ ಒದಗಿಸಿಲ್ಲ. ಇದರಲ್ಲಿ ಆದಾಯವಿರುವುದು 102 ಲಕ್ಷ ರೂಪಾಯಿಗಳು, ಖರ್ಚು 54 ಲಕ್ಷ ರೂಪಾಯಿಗಳು, ಉಳಿಯುವುದು 53 ಲಕ್ಷ ರೂಪಾಯಿಗಳ ಆದಾಯ. 'ಇದರಲ್ಲಿ 47 ಲಕ್ಷ ರೂಪಾಯಿಗಳು ಗಂಧದ ಮರದಿಂದ ಬರುತ್ತದೆ. ಇದು ಸರ್ಕಾರದ ಮನಾಪಲಿ. ಈ 47 ಲಕ್ಷ ಹೋದರೆ ಆರು ಲಕ್ಷ 78 ಸಾವಿರ ರೂಪಾಯಿ ಉತ್ಪತ್ತಿ. ಈ ಇಲಾಖೆ ಇಷ್ಟು ದೊಡ್ಡದಾಗಿ ಕೆಲಸ ಮಾಡಿ ಕೊನೆಗೆ ನೆಟ್ ರಿಸಲ್ಟ್ ಆರು ಲಕ್ಷ 78 ಸಾವಿರ

ರೂಪಾಯಿ ಬರುತ್ತದೆಂದರೆ ಬಹಳ ಮಟ್ಟಿಗೆ ಅದು ಶೋಚನೀಯವಾದುದು. ಗಂಧದ ಮರ ಹೆಚ್ಚಿಸುವುದಕ್ಕೆ ಬಹಳ ಮಟ್ಟಿಗೆ ಅವಕಾಶವಿದೆ. ಆದರೆ ಈ ಸರ್ಕಾರದ ಒಂದು ನೀತಿಯಿಂದ ಗಂಧದ ಮರ ಬೆಳೆಯುವುದು ಮೊಟಕಾಗುತ್ತಿವೆ. ರೈತರು ಬೆಳೆದರೆ ಹಿಂದೆ ಸೇಕಡ 50ರಷ್ಟು ಬೆಲೆ ಅವರಿಗೆ ಕೊಡುತ್ತಿದ್ದರು. ಈಗ ಅದಕ್ಕೆ ಬದಲಾಗಿ ಬೆಳೆದವರಿಗೆ ಅನೇಕವೇಳೆ ಶಿಕ್ಷೆ ಮಾಡುತ್ತಿದ್ದಾರೆ. ಇದರಿಂದ ರೈತರು ಗಂಧದ ಮರ ಬೆಳೆಸಲು ಅವರಿಗೆ ಪ್ರೋತ್ಸಾಹವಿಲ್ಲದಂತಾಗಿದೆ. ಹಿಂದಿನ ಹಾಗೆ ಪ್ರೋತ್ಸಾಹ ಕೊಟ್ಟು ಸೇಕಡ 50ರಷ್ಟು ಹಣ ಕೊಡುವುದಾದರೆ ಸರ್ಕಾರಕ್ಕೂ ಸಹಾಯವಾಗುತ್ತದೆ, ಗಂಧದ ಮರ ಬೆಳೆಸುವುದಕ್ಕೂ ಅವಕಾಶವಾಗಿ ಆದಾಯ ಹೆಚ್ಚುತ್ತದೆ. ಬೆಳೆದವನಿಗೆ ಪ್ರೋತ್ಸಾಹವಿಲ್ಲದಿದ್ದರೆ ಸಸಿಯಾಗಿದ್ದಾಗಲೇ ಗಿಡವನ್ನು ಕಿತ್ತು ಹಾಕುತ್ತಾನೆ. ಗಂಧದ ಮರವನ್ನು ಯಾರಾದರೂ ಮುರಿದರೆ ಕೇಸು ಹಾಕುತ್ತಾರೆ, ರೈತ ಅದಕ್ಕೆ ನಿಗಾ ಇಡಬೇಕಾಗುತ್ತದೆ. ಆದ್ದರಿಂದ ರೈತನಿಗೆ ಪ್ರತಿಫಲಕ್ಕಿಂತ ತೊಂದರೆ ಜಾಸ್ತಿಯೆಂದು ಅವನು ಗಂಧದ ಮರ ತನ್ನ ಜಮೀನಿನಲ್ಲೇ ಬೆಳೆಯಲು ಅವಕಾಶ ಕೊಡುತ್ತಿಲ್ಲ. ಈ ಒಂದೊಂದು ಬಾಬಿನಲ್ಲೂ ಏತಕ್ಕಾಗಿ ಲುಕ್ಸಾನಾಗುತ್ತಿದೆಯೆಂದರೆ ಈ ಮರಗಳ ಸಂಖ್ಯೆ ದಿನದಿನಕ್ಕೂ ಕಡಮೆಯಾಗುತ್ತಿದೆ. ಸೌದೆಗಾಗಿ ಮರಗಳನ್ನು ಕತ್ತರಿಸಲು ಲೈಸೆನ್ಸ್ ಕೊಡುತ್ತಿದ್ದಾರೆ. ಆ ಭದ್ರಾವತಿ ಕಾರ್ಖಾನೆಗೆ ಇದ್ದಿಲು ಸರಬರಾಯಿಗಾಗಿ ಮರಗಳನ್ನು ಕತ್ತರಿಸುತ್ತಿದ್ದಾರೆ. ಕಾಗದದ ಫ್ಯಾಕ್ಟರಿಗಾಗಿ ಬಿದುರು ಬೊಂಬುಗಳನ್ನು ಕತ್ತರಿಸುತ್ತಿದ್ದಾರೆ. ಈ ಕಾಗದದ ಕಾರ್ಖಾನೆಗೆ ಬಿದಿರು ಬೊಂಬುಗಳನ್ನು ಸರಬರಾಯಿ ಮಾಡತಕ್ಕ ಬಗ್ಗೆ ಎರಡು ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಅದರಿಂದ ಬರತಕ್ಕ ಉತ್ಪತ್ತಿ ಎರಡು ಲಕ್ಷ 45 ಸಾವಿರ ರೂಪಾಯಿಗಳು ಮಾತ್ರ. ಈ 45 ಸಾವಿರಕ್ಕೆ ಏಕೆ ಅಷ್ಟೊಂದು ಕಾಡನ್ನು ಹಾಳು ಮಾಡಬೇಕು ? ಇದೇ ರೀತಿ 1954-55 ಸಾಲಿನ ಆದಾಯ ವೆಚ್ಚಗಳನ್ನು ಪರಿಶೀಲನೆ ಮಾಡಿದರೆ ಈ ಪೇಪರ್ ಮಿಲ್ಲಿಗೆ ಬೊಂಬುಗಳನ್ನು ಸರಬರಾಯಿ ಮಾಡಿದ್ದರಿಂದ ಒಂದು ಲಕ್ಷ 65 ಸಾವಿರ ರೂಪಾಯಿಗಳು ಜಮಾ, ಒಂದು ಲಕ್ಷ 45 ಸಾವಿರ ರೂಪಾಯಿಗಳ ಖರ್ಚು. ಆದರೆ ಈಗಾಗಲೇ ಆ ಶ್ರೀ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ನಾವು ಇಲ್ಲಿ ಎಷ್ಟು ಹೇಳಿದರೂ ಅದು ಒಂದು ಅರಣ್ಯರೋದನವೇ ಆಗಿದೆ. ಈ ಅರಣ್ಯ ಬಾಬಿನ ಆಡಳಿತವನ್ನು ಸರ್ಕಾರದವರು ಯಾವರೀತಿ ಉತ್ತಮಪಡಿಸಬೇಕೆಂಬ ವಿಚಾರವನ್ನು ಅವರು ಈವರೆಗೂ ವಿಮರ್ಶೆ ಮಾಡಿಲ್ಲ. ಭದ್ರಾವತಿಗೆ ಈ ದಿವಸ ಸೌದೆ ಸರಬರಾಯಿ ಮಾಡುತ್ತಿದ್ದಾರೆ. ಅದರಿಂದ ಬರತಕ್ಕ ಆದಾಯ ಎಂಟು ಲಕ್ಷ 60 ಸಾವಿರ; ಅದಕ್ಕೆ ಆಗುವ ಖರ್ಚು ಎಂಟು ಲಕ್ಷ ಚಿಲ್ಲರೆ. ಇಂಥ ವ್ಯವಹಾರವನ್ನು ನಡೆಸಬೇಡಿ ಎಂದು ನಾನು ಹೇಳುತ್ತಿದ್ದೇನೆ. 1954-55 ಸಾಲಿನಲ್ಲಿ ಈ ಬಾಬಿನಿಂದ 7,69,100 ರೂಪಾಯಿಗಳ ವೆಚ್ಚಕ್ಕೆ ಎಂಟು ಲಕ್ಷದ ಏಳು ಸಾವಿರ ಚಿಲ್ಲರೆ ಆದಾಯ ಬಂದಿದೆ. ಹೀಗೆ ಇಂಥ 38 ಸಾವಿರಕ್ಕೆ ಏಕೆ ಇಷ್ಟೊಂದು ವ್ಯಥೆಪಡಬೇಕು ? ಇಷ್ಟೇ ಅಲ್ಲದೆ ಈ ಸೌದೆ ಸರಬರಾಯಿ ಮಾಡತಕ್ಕ ಕಂಟ್ರಾಕ್ಟರುಗಳಿಗೆ ಎಂಭತ್ತು ಲಕ್ಷದವರೆಗೂ ಸಾಲ ಬೇರೆ ಕೊಟ್ಟಿದ್ದಾರೆ. ಈ ಸಾಲವೆಲ್ಲಾ ಹಾಗೆಯೇ ನಿಂತಿದೆ. ಈ 38 ಸಾವಿರ ರೂಪಾಯಿಗಳ ವರಮಾನ ತರಲು ಹೋಗಿ ಲಕ್ಷಾಂತರ ರೂಪಾಯಿಗಳನ್ನು ಹಾಳು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

Mr. SPEAKER.—What about the forest wealth, apart from this? Even that is not an income?

Sri B. HUTCHE GOWDA.—They are getting Rs. 30 to 35 thousands. Why not they get more? ಅದಕ್ಕಾಗಿ ನಾನು ಹೇಳುತ್ತಿರುವುದು ನೀವು ಆ ಮರಗಳನ್ನು ಮಾತ್ರ ಕೊಡಿ, ಅವರೇ ಸಾಗಿಸಿಕೊಂಡು ಹೋಗಲಿ. ಈ ಸಾಗಾಣಿಕೆಯಿಂದಲೇ ವಿಶೇಷ ಹಣ ಖರ್ಚಾಗುತ್ತಿದೆ. ಕೇವಲ 38 ಸಾವಿರ ರೂಪಾಯಿಗಳ ಸಂಪಾದನೆಗಾಗಿ ಒಂದು ಲಕ್ಷ 69 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ಖಂಡಿತ ವಿವೇಕಯುತವಾದ ಮಾರ್ಗವಲ್ಲವೆಂದು ಹೇಳುತ್ತೇನೆ. ತಾವು ಬಡ್ಜೆಟ್ ಪುಸ್ತಕದ 9ನೆಯ ಪುಟ ನೋಡಿ.

Mr. SPEAKER.—They are supplying at a nominal rate.

ಶ್ರೀ ಬಿ. ಹುಚ್ಚೇಗೌಡ.—ಅವರೇ ಗಾಡಿಗಳನ್ನು ತಂದು ಬಿದಿರು ಮತ್ತು ಸೌದೆಗಳನ್ನು ತೆಗೆದುಕೊಂಡು ಹೋಗಲಿ ಎಂದು ನಾನು ಹೇಳುತ್ತಿದ್ದೇನೆ. ಅವರೇ ಏಕೆ ಈ ಕೆಲಸ ಕೈಗೊಳ್ಳಬಾರದು ? ಇನ್ನು ಅವರಿಗೆ ಕೆಲವುಕಡೆ ಈ ಸೀನಿಯೋರೇಜ್ ಪ್ರಕಾರ ಮರಗಳನ್ನು ಕೊಟ್ಟಿದ್ದಾರೆ. ಅಡಿಗೆ ಒಂದಾಣೆ, ಒಂದೂವರಾಣೆ ಪ್ರಕಾರ ಇವರು ಕೊಟ್ಟಿದ್ದಾರೆ. ಆದರೆ ಮಲಬಾರಿನಲ್ಲಿ ಈ ಸೀನಿಯೋರೇಜ್ ರೇಟ್ $6\frac{1}{2}$ ಆಣೆ ಇದೆ. ಈ ದಿವಸ ಈ ಫಾರೆಸ್ಟ್ ಇಲಾಖೆಯಲ್ಲಿ ರಿಟೈರಾದವರೇ ಈ ಕಂಪನಿಯಲ್ಲಿ ಡೈರೆಕ್ಟರು, ಮ್ಯಾನೇಜರುಗಳೂ ಆಗಿದ್ದಾರೆ. ಹೀಗೆ ರಿಟೈರಾದವರನ್ನು ಅಲ್ಲಿ ಪುನಃ ಏಕೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು ! ಇವರ ಪ್ರಭಾವ ಅಲ್ಲಿನ ನೌಕರರಮೇಲೆ ಬಹಳ ಹೆಚ್ಚಾಗಿರುತ್ತದೆ. ಇನ್ನು ಹಾಸನ, ಸಕಲೇಶಪುರ ಇತ್ತಕಡೆಗಳಿಂದ ಸಾಫ್ಟ್ ಉಡ್ಡನ್ನು ಕಡಮೆ ಕಿಮ್ಮತ್ತಿನಲ್ಲಿ ತಂದು ಈ ಯಶವಂತಪುರ ಇತ್ಯಾದಿ ಸ್ಥಳಗಳಲ್ಲಿ ಹೆಚ್ಚಿನ ಬೆಲೆಗೆ ಮಾರಾಟಮಾಡುತ್ತಿದ್ದಾರೆ. ಆದಕಾರಣ ಇದರಲ್ಲಿ ಲೀಕೇಜ್ ಜಾಸ್ತಿ ಇದೆ. ಸರ್ಕಾರದವರು ಖಾಸಗೀ ಜನರಿಗೆ 50 ಟನ್ ಗಂಧದ ಮರಕ್ಕೆ ಲೈಸನ್ಸ್ ಕೊಟ್ಟರೆ ಯಾರೋ ಬಂದು ಕಡಿಯುತ್ತಾರೆ, ಯಾರೋ ಬಂದು ಹೇರಿಕೊಂಡು ಹೋಗುತ್ತಾರೆ. ಯಾರು, ಎಷ್ಟು ಸಾಗಿಸಿದರು ಎಂಬುದನ್ನು ಯಾರೂ ಚೆಕ್ ಮಾಡುವುದಿಲ್ಲ. ಇದರಲ್ಲಿ ಹೀಗೆ ಲೀಕೇಜ್ ಬಹಳ ಜಾಸ್ತಿ ಆಗುತ್ತಿದೆ. ಈ ವಿಚಾರಗಳಿಗೆಲ್ಲಾ ನಮ್ಮ ಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ನಂಬಿದ್ದೇನೆ. ಈ ಗಂಧದ ಮರದ ವ್ಯವಹಾರದಲ್ಲಿ ಸರ್ಕಾರದವರ ರೇಟ್ ಜಾಸ್ತಿ, ಲೀಕೇಜ್ ಜಾಸ್ತಿ, ಕಳ್ಳತನದಲ್ಲಿ ವಿಶೇಷವಾಗಿ ಮರಗಳು ಸಾಗಿಹೋಗುತ್ತಿವೆ.

ಇನ್ನು ಜಮೀನು ವಿಚಾರ. ಅನೇಕ ಬಡವರಿಗೆ ವ್ಯವಸಾಯಕ್ಕೆ ಜಮೀನಿಲ್ಲ. ಕಾಡಿನಲ್ಲಿ ಒಂದೂ ಗಿಡ ಮರಗಳಿಲ್ಲ. ಹಾಗಿದ್ದರೂ ಅದನ್ನು ಫಾರೆಸ್ಟ್ ಎಂದು ಕರೆಯುತ್ತಿದ್ದಾರೆ. ಇಂಥ ಪಾಳು ಜಮೀನನ್ನು ಆ ರೈತನಿಗಾದರೂ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಅವನಾದರೂ ನಾಲ್ಕಾರು ನಾನಾ ಜಾತಿಯ ಮರಗಳನ್ನು ಬೆಳಸಿರುತ್ತಿದ್ದನು. ರೈತನು ತನ್ನ ಕಂದಾಯದ ಉತ್ಪನ್ನಕ್ಕೂ ಮತ್ತು ನೆರಳು ಇತ್ಯಾದಿ ಆಶೆಗಳಿಂದ ಬೇಗ ಮರಗಳನ್ನು ಬೆಳೆಸುತ್ತಾನೆ. ಇಷ್ಟು ಕೆಲಸವನ್ನೂ ಕೂಡ ಆ ಫಾರೆಸ್ಟ್ ಇಲಾಖೆಯವರು ಈ ದಿವಸ ಮಾಡುತ್ತಿಲ್ಲ. ಅವರೂ ಮಾಡುವುದಿಲ್ಲ. ಬೇರೆ ಮಾಡತಕ್ಕ ಜನರಿಗೂ ಆ ಜಮೀನನ್ನು ಕೊಡುವುದಿಲ್ಲ. ಬರೀ ಫಾರೆಸ್ಟ್ ಎಂಬ

(ಶ್ರೀ ಬಿ. ಹುಚ್ಚೇಗೌಡ.)

ಒಂದು ಹೆಸರು ವಿನಾ ಅಲ್ಲಿ ಈ ಲಾಂಟಾನ ಗಿಡಗಳ ಹೊರತು ಮತ್ತೆ ಯಾವ ಮರಗಳೂ ಇರುವುದಿಲ್ಲ. ಇಂಥ ಜಮೀನನ್ನು ಕೂಡಲೇ ಸರ್ಕಾರದವರು ವ್ಯವಸಾಯಕ್ಕಾದರೂ ಬಿಡಿಸಿ ಕೊಡುವುದು ಉತ್ತಮ.

ಇನ್ನು "ವನಮಹೋತ್ಸವ" ಎಂಬ ಒಂದು ಯೋಜನೆಯನ್ನು ಬೇರೆ ಪ್ರಾರಂಭ ಮಾಡಿದ್ದರು. ಈ ಕಾರ್ಯವನ್ನು ಮೊದಲು ಪ್ರಾರಂಭಿಸಿದ್ದುದು ನಮ್ಮ ತುಮಕೂರು ಜಿಲ್ಲೆಯಲ್ಲೇ. ಅಲ್ಲಿ ಆ ದಿವಸ ಒಂದೇ ಸಾರಿಗೆ 15 ಸಾವಿರ ಗಿಡಗಳನ್ನು ನೆಡಲಾಯಿತು. ಆದರೆ ಈ ಹೊತ್ತು ನೂರಕ್ಕೆ ಒಂದರಂತೆ ಕೂಡ ಉಳಿದಿಲ್ಲ. ಹಾಗಾದರೂ ಉಳಿದಿದ್ದರೆ ನಾನು ಬಹಳ ಸಂತೋಷಪಡುತ್ತಿದ್ದೆ. ಆ ವನಮಹೋತ್ಸವ ಮಾಡಿದ ದಿವಸ ಅಲ್ಲಿಯ ಕೇಟರಿಂಗ್ ನಡೆಸಿದ್ದು ಈ ಬೆಂಗಳೂರಿನ ಹೋಟೆಲ್‌ಗಳವರಿಂದ. ಇದರಿಂದ ಆದ ಪುರುಷಾರ್ಥ ಏನೆಂದರೆ ಆ ಶೇಕ್‌ದಾರನಿಗೆ 600 ರೂಪಾಯಿಗಳ ಹಜಾಮತ್ (ನಗು !) ಆ ವನಮಹೋತ್ಸವ ಅಷ್ಟಕ್ಕೇ ಮುಕ್ತಾಯವಾಯಿತು. ಹೀಗೆ ಈ ಸರ್ಕಾರದವರು ಯಾವ ಕೆಲಸ ಮಾಡಿದರೂ ಅದು ಮುಂದುವರಿಯುವುದು ಮಾತ್ರ ಇಲ್ಲ. ಇವರು ಕೆಳದರ್ಜೆ ನೌಕರರಿಗೆ ಸರಿಯಾದ ತಿಳಿವಳಿಕೆಗಳನ್ನು ಕೊಡುವುದಿಲ್ಲ.

ಇನ್ನು ಬಂಡೀಪುರದ ವಿಚಾರ ನಮ್ಮ ಮಂತ್ರಿಗಳಿಗೇ ಚೆನ್ನಾಗಿ ಗೊತ್ತಿದೆ. ಅಲ್ಲಿ ಇಲ್ಲಿಯವರೆಗೂ ಪಿಕ್‌ನಿಕ್ ಪಾರ್ಟಿಗಳೇ ಆಗುತ್ತಿದ್ದುವು. ಇನ್ನು ಮುಂದಕ್ಕೆ ಕಾಕ್‌ಟೈಲ್ ಪಾರ್ಟಿಗಳೂ ಅಲ್ಲಿ ನಡೆಯುತ್ತವೆ. ಇವರು ಪದೇಪದೇ ಅಲ್ಲಿಗೆ ಹೋಗುತ್ತಿರುವುದರಿಂದ ಆ ಫಾರೆಸ್ಟ್ ಸಿಬ್ಬಂದಿಗೆ ಕಷ್ಟನಷ್ಟಗಳು ಹೆಚ್ಚಾಗುತ್ತಿವೆ. ಅವರಿಗೆ ವಿಶೇಷವಾಗಿ ದುಡ್ಡು ನಷ್ಟವಾಗುತ್ತಿದೆ. ಹಿಂದೆ ಹಾಗೆ ಹೋಗಿದ್ದಕ್ಕೆ ಆ ಫಾರೆಸ್ಟ್ ರೇಂಜರಿಗೆ 600 ರೂಪಾಯಿಗಳು ಖರ್ಚಾಯಿತೆಂದು ಅವರು ಹೇಳಿಕೊಂಡು ಯಾರ ಮುಂದೆಯೋ ಅತ್ತರಂತೆ ! ಇವರ ಖುಷಿಗಳಿಗೆ ಅವರೀದಿವಸ ಹಣವನ್ನು ಖರ್ಚುಮಾಡಬೇಕಾಗಿ ಬಂದಿದೆ. ಇದು ಸರ್ವಥಾ ಸರಿಯಲ್ಲ; ಧರ್ಮವೂ ಅಲ್ಲ. ಈ ವಿಚಾರದಲ್ಲಿ ಅವರು ಮೇಲ್ಪಟ್ಟ ಅಧಿಕಾರಿಗಳಿಗೆ ದೂರನ್ನು ಹೇಳಿಕೊಳ್ಳಲೂ ಸಾಧ್ಯವಿಲ್ಲ. ಹೀಗಿರುವಾಗ ಸರ್ಕಾರದವರು ಏಕೆ ಅಲ್ಲಿ ಮತ್ತೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮತ್ತೊಂದು ಹೋಟಲನ್ನು ಕಟ್ಟಿಸಬೇಕೋ ನನಗದು ಅರ್ಥವಾಗುತ್ತಿಲ್ಲ.

5 P.M.

ಮುಖ್ಯವಾಗಿ ಈ ಇಲಾಖೆಯಲ್ಲಿ ಅನೇಕ ಆದಾಯಗಳು ಸೋರಿ ಹೋಗುತ್ತಾ ಇವೆ. ಅವುಗಳನ್ನೆಲ್ಲಾ ದಕ್ಷತೆಯಿಂದ ಕಮ್ಮಿ ಮಾಡಬೇಕು. ಕೆಲವು ಕಡೆ ಸಿಬ್ಬಂದಿ ಅವಶ್ಯಕತೆ ಬಹಳವಾಗಿರುತ್ತದೆ. ಅಂಥ ಕಡೆಗೆ ಸಿಬ್ಬಂದಿ ಇರುವುದಿಲ್ಲ. ಇನ್ನು ಕೆಲವು ಕಡೆ ಸಿಬ್ಬಂದಿ ಅವಶ್ಯಕತೆ ಇರುವುದಿಲ್ಲ. ಅಲ್ಲಿಗೆ ಸುಮ್ಮನೆ ಸಿಬ್ಬಂದಿ ಹಾಕುತ್ತೀರಿ. ಉತ್ಪನ್ನ ನೋಡಿಕೊಂಡು ಆಯಾ ಪರಿಸ್ಥಿತಿಗನುಗುಣವಾಗಿ ನಡೆಯಬೇಕು. ಈ ಇಲಾಖೆಯಲ್ಲಿ ಸಾಲಗಳನ್ನು ಕೊಟ್ಟಿದ್ದೀರಿ, ಅವು ಎಷ್ಟುಮಟ್ಟಿಗೆ ವಾಪಸು ಬಂದಿವೆ ಎಂಬುದನ್ನು ತಿಳಿಸುತ್ತೀರಿ ಎಂದು ನಂಬಿದ್ದೇನೆ. ಮುಖ್ಯವಾಗಿ ಗಂಧದ ಮರದ ವ್ಯಾಪಾರದಲ್ಲಿ ಬಹುಮಟ್ಟಿಗೆ ಉತ್ಪನ್ನ ಹೆಚ್ಚು ಮಾಡಲಿಕ್ಕೆ ಅವಕಾಶವಿದೆ. ಮತ್ತು ಆ ಗಿಡಗಳನ್ನು ಬೆಳಸಲಿಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).— ಈ ಡಿಮ್ಯಾಂಡಿನ ವಿಚಾರದಲ್ಲಿ ಮಾತನಾಡುತ್ತ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಬೆಂಗಳೂರು ನಗರದ ಸುತ್ತಮುತ್ತಲೂ ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಭಾರತ್ ಎಲೆಕ್ಟ್ರಾನಿಕ್ಸ್, ಟೆಲಿಫೋನ್ ಇಂಡಸ್ಟ್ರೀಸ್ ವಗೈರೆ ಫ್ಯಾಕ್ಟರಿಗಳು ಪ್ರಾರಂಭವಾದಮೇಲೆ ಅಲ್ಲಿರತಕ್ಕ ಬಹುಭಾಗದ ಜಮೀನನ್ನೆಲ್ಲಾ ಫ್ಯಾಕ್ಟರಿಗಳಿಗೆ ಅಕ್ವೈರ್ ಮಾಡಿಕೊಂಡಿದ್ದಾರೆ. ಅದರಿಂದಾಗಿ ಅಲ್ಲಿ ವಾಸ ಮಾಡುತ್ತ ಇದ್ದ ರೈತಾಪಿ ಜನರು ಈಗ ಜಮೀನಿಲ್ಲದೇ ಬಹಳವಾಗಿ ತೊಂದರೆ ಪಡುತ್ತಾ ಇದ್ದಾರೆ. ಅವರುಗಳಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ದೇವನಹಳ್ಳಿ ಮೈನರ್ ಫಾರೆಸ್ಟ್‌ನಲ್ಲಿ ಜಮೀನು ಕೊಡಬೇಕೆಂದು ಹೇಳುತ್ತಾ ಇದ್ದರೂ ಕೂಡ ಅದಕ್ಕೆ ಗಮನ ಕೊಟ್ಟಿಲ್ಲ. ಫಾರೆಸ್ಟ್ ಜಮೀನು ಬೇಕಾದಷ್ಟಿದೆ. ಇಲಾಖೆಯವರು ಅಫಾರೆಸ್ಟೇಷನ್ ಮಾಡಿದ್ದರೆ ಚೆನ್ನಾಗಿತ್ತು. ಮಾಡದೇ ಇರುವಾಗ ಅದನ್ನು ಬೇರೆ ಮಾರ್ಗವಿಲ್ಲದೇ ಇರುವ ಆ ರೈತಾಪಿ ಜನರಿಗೆ ಕೊಟ್ಟಿದ್ದರೆ ಅವರು ತಮ್ಮ ಕಸಬಿನಲ್ಲಿ ನಿರತರಾಗುತ್ತಿದ್ದರು. ವ್ಯವಸಾಯ ವೃತ್ತಿಯನ್ನೇ ಬಿಟ್ಟು ಬಂದಂಥ ಆ ಜನಗಳಿಗೆ ತಾವು ಪರಿಹಾರದ ಮೊಬಲಗನ್ನೇನೋ ಕೊಡುತ್ತೀರಿ. ಆದರೆ ಅವರು ಅದನ್ನು ತೆಗೆದುಕೊಂಡು ವ್ಯಾಪಾರದಲ್ಲೋ ಅಥವಾ ಬೇರೆ ವಿಧವಾಗಿಯೋ ಖರ್ಚುಮಾಡಿ ಲಾಭ ಹೊಂದಿದರೂ ಹೊಂದಬಹುದು, ನಷ್ಟವಾದರೂ ಆಗಬಹುದು. ಆದ್ದರಿಂದ ಅವರಿಗೆ ಜಮೀನನ್ನು ಒದಗಿಸುವುದೇ ನ್ಯಾಯವಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಜಕ್ಕೂರು ಪ್ಲಾಂಟೇಷನ್‌ನಲ್ಲಿ 40 ಎಕರೆ ಜಮೀನಿದೆ. ಈಗ 10 ವರ್ಷದಿಂದ ಅಲ್ಲಿ ಯಾವ ರೀತಿಯಾದ ಅಫಾರೆಸ್ಟೇಷನ್ ಕಾರ್ಯವೂ ನಡೆಯದೇ ಸುಮ್ಮನೆ ಜಮೀನು ಮಾತ್ರ ಹಾಗೆಯೇ ಇದೆ. ಅದರ ಸುತ್ತಮುತ್ತ ಇರತಕ್ಕ ಜಮೀನಿಲ್ಲದ ಜನಗಳು ನಮ್ಮನ್ನು ಬಂದು ಕೇಳುತ್ತಾರೆ. ಅದನ್ನು ಅವರಿಗೆ ಕೊಡಿಸಿ ಕೊಡಿ ಎಂದರೆ ಇಲಾಖೆಯವರು ನರ್ಸರಿಮಾಡುವುದಕ್ಕೆ ಅದನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ಜಮೀನು ಮಾತ್ರ ಬಹಳ ಫಲವತ್ತಾದ ಜಮೀನು. ಅದೇ ರೀತಿಯಾಗಿ ಏರೋಡ್ರೋಂ ಪಕ್ಕದಲ್ಲೂ ಬೇಕಾದಷ್ಟು ಜಮೀನು ಇದೆ. 10 ವರ್ಷದಿಂದ ಆ ಜಮೀನೆಲ್ಲಾ ಖಾಲಿ ಬಿದ್ದಿದೆ. ಅದನ್ನು ಜಮೀನಿಲ್ಲದೇಯಿರತಕ್ಕ ಆ ಸುತ್ತುಮುತ್ತಲಿನ ಜನಗಳಿಗೆ ಕೊಡಿಸ ಕೊಡಬೇಕೆಂದು ಹೇಳುತ್ತೇನೆ.

ಅರಣ್ಯದಲ್ಲಿರತಕ್ಕ ಹೊಂಗೆ, ಹುಣಸೆ ಮುಂತಾದ ಮರಗಳನ್ನು ಕಡಿಯದಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಹುಣಸೇಮರ ದೇಶದಲ್ಲಿ ಅತಿ ಹೆಚ್ಚಾಗಿ ಬೆಳೆದಿರುವುದು ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ. ಅದನ್ನು ಕೂಡ ಸೌದೆಯ ಅಭಾವದಿಂದ ಕಡಿಯುತ್ತಾ ಇದ್ದಾರೆ. ಆ ರೀತಿ ಕಡಿಯುತ್ತಾ ಇರುವುದನ್ನೂ ನಿಲ್ಲಿಸಬೇಕೆಂದು ಸರ್ಕಾರದವರು ಪೂರ್ಣ ಮನಸ್ಸು ಮಾಡಬೇಕು. ಕ್ಯಾಸುರಿನ ಪ್ಲಾಂಟೇಷನ್ ಇಲಾಖೆಯವರು ಬೆಳೆಸುತ್ತಾ ಇದ್ದಾರೆ. ಅದನ್ನು ಯಾವ ಮೈನರ್ ಫಾರೆಸ್ಟ್ ಜಮೀನಿದೆಯೋ ಆ ಗ್ರಾಮದವರಿಗೇ ಕೊಟ್ಟು ಲೀಸ್‌ಸಿಸ್ಟಂ ಪ್ರಕಾರ ಬೆಳೆಸುವುದಕ್ಕೆ ಏರ್ಪಾಡು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ಅದಕ್ಕೆ ಆಗತಕ್ಕ ಖರ್ಚಿಗಿಂತ ಮಿಗಿಲಾಗಿ ಫಾರೆಸ್ಟ್ ಆದರೂ ಆಗುತ್ತದೆ. ಅದನ್ನು ಪರಿಶೀಲನೆಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬೆಂಗಳೂರಿನ ಸುತ್ತುಮುತ್ತಲೂ ಇರತಕ್ಕ ರೈತರಿಗೆ ಗಾಡಿಗಳ ಅವಶ್ಯಕತೆ ಬಹಳವಾಗಿದೆ. ಗಾಡಿಗಳಿಲ್ಲದೆ ರೈತ ಯಾವ ಕೆಲಸವನ್ನು ಮಾಡುವುದಕ್ಕೂ ಸಾಧ್ಯವಿಲ್ಲ. ಯುದ್ಧ ಕಾಲದಲ್ಲಿ ಇದರ ಬೆಲೆ ವಿಪರೀತವಾಗಿ ಹೆಚ್ಚು ಹೋಯಿತು. ಇದಕ್ಕೆ ಕಾರಣ ಇಷ್ಟೆ. ಗಾಡಿಗೆ ಹಾಕತಕ್ಕ ತೇಗದಮರ ಬಹಳ ಬೆಲೆಯಾಗಿದೆ. ಸಣ್ಣ ಲಾಗ್ಸ್ ಹಾಕುವುದಕ್ಕಾಗುವುದಿಲ್ಲ. ದೊಡ್ಡ ಲಾಗ್ಸ್ ಹಾಕಬೇಕಾಗುತ್ತದೆ. ಲಾಗ್ ತೆಗೆದುಕೊಳ್ಳಬೇಕೆಂದರೆ ಒಂದು ಸಲ ಅಡಿಗೆ 20-22 ರೂಪಾಯಿ ಆಗುತ್ತದೆ. ಆದ್ದರಿಂದ ಗಾಡಿ ತಯಾರು ಮಾಡತಕ್ಕವರಿಗೆ ಒಂದು ರಿಯಾಯಿತಿ ದರದಲ್ಲಿ ಲಾಗ್ಸ್ ಸಪ್ಲೈ ಮಾಡಿಕೊಡಬೇಕೆಂದು ಹೇಳುತ್ತೇನೆ. ರೈತನ ಹಿತದೃಷ್ಟಿಯಿಂದ ಈ ರೀತಿ ಒಂದು ವ್ಯವಸ್ಥೆ ಮಾಡಿದರೆ ಬಡ ರೈತನಿಗೆ ಅನುಕೂಲವಾಗುತ್ತದೆ. ಇದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಅರಣ್ಯದ ವಿಚಾರದಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಂಶೋಧನೆ ಏನೇನೂ ನಡೆದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕಾರಣವೇನೆಂದರೆ ಜಪಾನ್ ಮುಂತಾದ ದೇಶಗಳಿಗೂ ನಮ್ಮ ದೇಶಕ್ಕೂ ಹೋಲಿಸಿ ನೋಡಿದರೆ ನಮ್ಮ ಸರ್ಕಾರ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಜಪಾನ್ ದೇಶದಲ್ಲಿ ನಮ್ಮ ಹಿಂದೂಸ್ಥಾನದಿಂದ ಬಿದಿರಿನ ಸಸಿಗಳನ್ನು ತೆಗೆದುಕೊಂಡು ಹೋಗಿ ನಟ್ಟು ಪರಿಶೋಧನೆಮಾಡಿ 40-50 ಜಾತಿಯ ಬೊಂಬುಗಳ ಮಾದರಿ ಬೆಳೆಯನ್ನು ಬೆಳೆಸಿದ್ದಾರೆ ಮತ್ತು ಬೊಂಬಿನಿಂದ ಅನೇಕ ಸಾಮಾನುಗಳನ್ನು ತಯಾರುಮಾಡುತ್ತಿದ್ದಾರೆ. ಇಲ್ಲಿ ಗಳ ಮತ್ತು ಬೊಂಬಿನ ವ್ಯವಸಾಯ ಮತ್ತು ಪರಿಶೋಧನೆ ನಡೆದಿಲ್ಲ ಮತ್ತು ಯಾವ ಯಾವ ಕೆಲಸಕ್ಕೆ ಬರುತ್ತದೆ ಎಂಬುದನ್ನು ಕಂಡುಹಿಡಿಯುವ ಚಿನ್ಹೆಯೇ ನಮ್ಮ ದೇಶದಲ್ಲಿ ಇಲ್ಲ. ಯಾವ ಪ್ರದೇಶದಲ್ಲಿ ಬೆಳೆದರೆ ಗಟ್ಟಿಯಾಗಿರುತ್ತದೆ, ಯಾವ ರೀತಿಯಾಗಿ ಟ್ರೀಟ್‌ಮೆಂಟ್ ಕೊಟ್ಟರೆ ನೂರು ವರ್ಷ ಆದರೂ ಇರುತ್ತದೆ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಲು ಕಾರ್ಯಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶಿವಮೊಗ್ಗದಲ್ಲಿ ಒಂದು ಸಾ ಮಿಲ್ ಇದೆ. ತಡಸ್ನಾದಲ್ಲಿ ಒಂದು ಸಾ ಮಿಲ್ ಇದೆ, ತುಮಕೂರಿನಲ್ಲಿ Central Wood Working and Furniture Workshop ಇದೆ, ಭದ್ರಾವತಿಯಲ್ಲಿ Wood Heating Plant ಇದೆ. ಈ ರೀತಿ ನಾಲ್ಕು ಸ್ಥಳದಲ್ಲಿ ಬೇರೆ ಬೇರೆಯಾಗಿ ವಿಭಜನೆಯಾಗಿರುವುದನ್ನು ಒಂದುಗೂಡಿಸಿ ಒಬ್ಬರ ಮ್ಯಾನೇಜ್‌ಮೆಂಟಿಗೆ ವಹಿಸಿದ್ದೇ ಆದರೆ ಹೆಚ್ಚು ಹಣ ಸಂಪಾದನೆ ಮಾಡಬಹುದು. ಶಿವಮೊಗ್ಗದಿಂದ ತುಮಕೂರಿಗೆ ಮರ ತರಿಸಿ ತುಮಕೂರಲ್ಲಿ ಕೆಲಸ ಮಾಡುತ್ತಿರುವರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಮಾನುಗಳನ್ನು ಸಾಗಿಸಬೇಕೆಂದರೆ ಆರು ತಿಂಗಳಾದರೂ ಅದು ಅಲ್ಲಿಗೆ ಬರುವುದಿಲ್ಲ. ಆದ್ದರಿಂದ furniture workshopನ್ನು ಶಿವಮೊಗ್ಗಕ್ಕೆ ಬದಲಾವಣೆ ಮಾಡಿದರೆ ಕಚ್ಚಾ ಸಾಮಾನುಗಳು ದೊರೆಯುವ ಸ್ಥಳದಲ್ಲಿಯೇ furniture ಸಾಮಾನುಗಳನ್ನು ತಯಾರಿಸಬಹುದು.

ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಕಾಡಿನಲ್ಲಿ ಹಲಸಿನ ಮರ, ಮಾವಿನ ಮರ ಮತ್ತು ಹುಣಸೇ ಮರಗಳು ಬೇಕಾದಷ್ಟಿವೆ. ಈ ಮರಗಳನ್ನು ಕಡಿಯಲಿಕ್ಕೆ ಅವಕಾಶ ಮಾಡಿ ಕೊಟ್ಟು ಅಲ್ಲಿ ವಾಸವಾಗಿದ್ದ ಕೋತಿಗಳು ಪಟ್ಟಣಗಳಿಗೆ ಬರುತ್ತಾ ಇವೆ. ಇದರಿಂದಾಗಿ ಪಟ್ಟಣಗಳಲ್ಲಿ ಅವುಗಳ ಹಾವಳಿ ತಡೆಯುವುದಕ್ಕಾಗದಷ್ಟು ವಿಪರೀತವಾಗಿ ಹೋಗಿದೆ. ಹಿಂದಿನ ಕಾಲದಲ್ಲಿ ಈ ಹಣ್ಣಿನ ಮರಗಳನ್ನು ಪ್ರಾಣಿಗಳಿಗಾಗಿಯೇ ನೆಡುತ್ತ ಇದ್ದರು. ಈಗ ಅವುಗಳನ್ನೆಲ್ಲಾ ಕಡಿಯುತ್ತಾ ಇರುವುದರಿಂದ ಆ ಪ್ರಾಣಿಗಳಿಗೆ ಹಣ್ಣು ಆಹಾರ ಸಿಕ್ಕದೇ ಪಟ್ಟಣಗಳಿಗೆ ಬರುತ್ತಾ ಇವೆ. ಈ ದೃಷ್ಟಿಯಿಂದಲೂ ಕೂಡ ಹಣ್ಣಿನ ಮರಗಳನ್ನು ಕತ್ತರಿಸದಂತೆ ನೋಡಿಕೊಳ್ಳಬೇಕಾದದ್ದು ಬಹಳ ಅಗತ್ಯ ಎಂದು ಕಂಡು ಬರುತ್ತಾ ಇದೆ.

ಆಮೇಲೆ ಹಾಸ್ಟೆಲ್ ಕಟ್ಟಡಗಳಿಗೆ, ಶಾಲಾ ಕಟ್ಟಡಗಳಿಗೆ ಮತ್ತು ಡಿಪ್ರೆಸ್ಡ್ ಕ್ಲಾಸ್‌ನವರ ಮನೆಗಳನ್ನು ಕಟ್ಟಲಿಕ್ಕೆ ನಾಟಾ ಖರೀದಿ ಮಾಡಬೇಕೆಂದು ಫಾರೆಸ್ಟ್ ಇಲಾಖೆಯವರನ್ನು ಕೇಳಿದರೆ ಷೆಡ್ಯೂಲ್ಡ್ ರೇಟ್ ಶೇಕಡ 33 selection charges ಎಂದು ಕೇಳುತ್ತಾರೆ. ಧಾರ್ಮಿಕ ಸಂಸ್ಥೆಗಳವರು ಸಾರ್ವಜನಿಕರ ಪ್ರಯೋಜನಕ್ಕೆ ಹಾಸ್ಟೆಲ್, ಆಸ್ಪತ್ರೆ, ಶಾಲಾ ಕಟ್ಟಡಗಳನ್ನು ಕಟ್ಟಬೇಕಾದರೆ ಫಾರೆಸ್ಟ್ ಡಿಪಾರ್ಟಮೆಂಟಿನವರು ಕಮ್ಮಿ charges ಸೇರಿಸುವುದನ್ನು ಬಿಟ್ಟು ಷೆಡ್ಯೂಲ್ಡ್ ರೇಟಿಗೆ ಒದಗಿಸಿದರೆ ಒಳ್ಳೆಯದು ಮತ್ತು ಹರಾಜಿನಲ್ಲಿ ಗೊತ್ತಾಗುತ್ತದೆ. ಅದೇ ಬೆಲೆಗೆ ಕೊಡಬಹುದು.

ಧಾರವಾಡದಲ್ಲಿ ಬೊಂಬಾಯಿ ಸರ್ಕಾರದ ದಂಡೇರಿ ಫಾರೆಸ್ಟ್ ಸಾಮಿಲ್ಲಿನಲ್ಲಿ ಮರಗಳನ್ನು ಕತ್ತರಿಸಿ ಮಾರಾಟ ಮಾಡುವ ಬೆಲೆಗೂ ಮೈಸೂರು ಬೆಲೆಗೂ ಸಂಬಂಧವೇ ಇಲ್ಲ. ಆದ್ದರಿಂದ ಹೀಗೆ charitable institutionಗಳಿಗೆ ಶೇಕಡ 33⅓ನ್ನು auction charge ಸೇರಿಸಿ ಮಾರಾಟ ಮಾಡುವುದು ಸರಿಯಲ್ಲ. ಅದನ್ನು ವಿನಾಯಿತಿ ಮಾಡಬೇಕೆಂದು ಹೇಳುತ್ತೇನೆ. ಮರಗಳನ್ನು ಹೊರಗಡೆ ಮ್ಯಾಚ್ ಕಂಪನಿಗಾಗಲೀ ಮತ್ತು ಪ್ಲೈವುಡ್ ಕಂಪನಿಗಳಿಗಾಗಲಿ, ಕಮ್ಮಿ ದರದಲ್ಲಿ ಒದಗಿಸುತ್ತಿರುವರು. ಅದೇ ನಮ್ಮವರೇ ನಡೆಸುವ Match factoryಗೆ ಕಮ್ಮಿ ದರಗಳಲ್ಲಿ ಕೊಡುತ್ತಿಲ್ಲ. ಪ್ಲೈವುಡ್ ಫ್ಯಾಕ್ಟರಿಗೆ ಕೇಳಿದರೆ ಒಂದಾಣೆಯಂತೆ ಸಪ್ಲೈ ಮಾಡುತ್ತಾರೆ. ಈ ರೀತಿ ನಮ್ಮ ಅರಣ್ಯ ಇಲಾಖೆಯಲ್ಲಿ ಒಂದು ರೀತಿ ನೀತಿಯಿಲ್ಲ, ಒಂದು ಯೋಜನೆಯಿಲ್ಲ. ಮರಗಳನ್ನು ಕಡಿಸುವುದರಲ್ಲೂ ಒಂದು ಯೋಜನೆ ಬೇಕು. ಸಂಸ್ಥಾನದ ಅರಣ್ಯವನ್ನೆಲ್ಲಾ 60 ಭಾಗಗಳನ್ನಾಗಿ ಮಾಡಿ ಪ್ರತಿ ವರ್ಷ ಒಂದು ಭಾಗವನ್ನು ಕಡಿಸಿ ಮತ್ತೆ ಪೂರ್ತ ಗಿಡಗಳನ್ನು ನೆಡಿಸಿ ಮುಂದಿನ ವರ್ಷ ಇನ್ನೊಂದು ಭಾಗ ಅರಣ್ಯಕ್ಕೆ ಹೋಗುವಂತೆ ಒಂದು ಯೋಜನೆ ಹಾಕಿಕೊಂಡರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಇನ್ನು smuggling ವಿಚಾರ. ನಾವೀಗ ಗಂಧದ ಮರಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ. ಅದೇ ರೀತಿ ಉತ್ತಮ ದರ್ಜೆಯ ಮರ ನಾಟಾಗಳ ವಿಷಯವನ್ನೂ ಸರ್ಕಾರದವರೇ ಪೂರ್ತಿಯಾಗಿ ತಮ್ಮ ಕೈಯಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಖಾಸಗಿಯವರ ಕೈಗೆ ಬಿಡುವುದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ.

ನಿಮ್ಮ Sandal trees preservation ರೀತಿಯನ್ನು ನೋಡುವುದಾದರೆ, ಬಹುಶಃ ಮುಂದೆ ನಾಲ್ಕಾರು ವರ್ಷಗಳಲ್ಲಿ ನಿಮಗೆ ಸಾಕಾದಷ್ಟು ಗಂಧ ಸಿಕ್ಕುವುದಿಲ್ಲವೋ ಏನೋ ಎನಿಸುತ್ತದೆ. ಈಗಿನಿಂದಲೇ ಇದನ್ನು ಗಮನಿಸಿ ಗಂಧದ ಪ್ಲಾಂಟೇಷನ್‌ಗಳನ್ನು

(ಶ್ರೀ ಎಸ್. ಅರ್. ನಾಗಪ್ಪಶೆಟ್ಟಿ).

ಜಾಸ್ತಿ ಮಾಡಬೇಕು. ಈಗ ತಾವು ಸಾಮಾನ್ಯವಾಗಿ ಒಂದು ಎಕರೆಗೆ ಪ್ಲಾಂಟೇಷನ್ ಮಾಡುವುದಕ್ಕೆ ಕೊಡುವಹಣ ಸಾಕಾಗುವುದಿಲ್ಲ. ಈ ದರವನ್ನು ಜಾಸ್ತಿಮಾಡಿ plantation ಕೆಲಸ ಚೆನ್ನಾಗಿ ನಡೆಯುವ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ಅನೇಕ ಫಾರೆಸ್ಟ್ ಪ್ರದೇಶಗಳಿವೆ. ಆದರೆ ಅವು ಯಾವುದೂ ಅಭಿವೃದ್ಧಿಯಾಗುವಂತೆ ಕಾಣುವುದಿಲ್ಲ. ಕಾರಣವೇನೆಂದರೆ, ಅಲ್ಲಿ ಮಳೆ ಕಡಮೆ. ಜಮೀನು ಒರತೆಯ ಜಮೀನಲ್ಲ. ಕೋಲಾರ ತಾಲ್ಲೂಕಿಗೆ ಸೇರಿದಂತೆ ಕದಿರೀಪುರ ಕಾಡಿದೆ. ಇದು ಹಿಂದೆ 27ನೆಯ ನಂಬರು ಮತ್ತು ಒಂದನೆಯ ನಂಬರು ಎಂದು ಹೇಳಿ 460 ಎಕರೆಯ ಒಂದು ಗೋಮಾಳವಾಗಿತ್ತು. ಅಲ್ಲಿ ಚಿಗರೆ ಮುಂತಾದ ಮರಗಳನ್ನು ಬೆಳೆಸಬೇಕೆಂದು ಮಾಡಿಕೊಂಡಿದ್ದೆವು. ಆದರೆ ಇತ್ತೀಚೆಗೆ ಅದನ್ನು ಅರಣ್ಯ ಇಲಾಖೆಗೆ ಸೇರಿಸಿಕೊಂಡು ಬಿಟ್ಟರು. ಆ ಕಾಡಿಗೆ ಒಬ್ಬರು forest guard ಎಂದು ಬೇರೆ ಇಟ್ಟಿದ್ದಾರೆ. ಆ ಗಾರ್ಡಿನ ಕೆಲಸವಾದರೂ ಏನು? ಪಕ್ಕದ ಪ್ರಾಂತ್ಯದವರ ಹತ್ತಿರ ಹೋಗಿ ಮೆಣಸಿನ ಕಾಯಿ ಕೇಳಿ ತೆಗೆದುಕೊಳ್ಳುವುದೇ ಹೊರತು ಮತ್ತೇನೂ ಇಲ್ಲ. ಹೋದ ವರುಷ ನಾನೇ ಈ ಅರಣ್ಯದ ಆದಾಯವೇನು ಎಂದು ಕೇಳಿದ್ದೆ. ಸರ್ಕಾರದವರು ಆ ಕಾಡಿಗೆ ಮಾಡುತ್ತಿರುವ ಖರ್ಚು, ಆ ಗಾರ್ಡಿನ ಸಂಬಳ, ತಿರುಗಾಡುವ ಭತ್ಯ ಎಲ್ಲವನ್ನೂ ನೋಡಿಕೊಂಡರೆ ಆದಾಯವೇನೂ ಇಲ್ಲ. ಹೀಗೆ ಮೊದಲು ನಾವು ಮರಗಳನ್ನು ಬೆಳೆಸಿದ ಪ್ರದೇಶ ಮತ್ಯಾವ ರೀತಿಯಲ್ಲೂ ಉತ್ತಮವಾಗದೆ ನಿಂತಿದೆ. ಸರ್ಕಾರಕ್ಕೂ ಆದಾಯವಿಲ್ಲ. ಇಂಥಾದ್ದನ್ನು ನಾವು ನಮ್ಮ ಗ್ರಾಮಗಳ ವಿಲೇಜ್ ಪಂಚಾಯಿತಿ ಫಾರೆಸ್ಟ್‌ಗೆ ಮತ್ತೆ ಕೊಡಿಯೆಂದರೆ ಕೊಡುವುದಿಲ್ಲ. ಖಂಡಿತವಾಗಿ ಅದನ್ನು ಗ್ರಾಮದ forestಗೇ ಕೊಟ್ಟರೆ ಅವರು ಈಗ ಕಡಿದು ಹಾಕಿರುವ ಮರಗಳನ್ನು ತಿರುಗಿ ಬೆಳೆಸುತ್ತಾರೆಂದು ನಾನು ಹೇಳಬಲ್ಲೆ.

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಮಲ್ಲಂಪಳ್ಳಿ ಗ್ರಾಮದಲ್ಲೂ ಹೀಗೆಯೇ ಇದೆ. ಅಲ್ಲಿನ ಗೋಮಾಳವನ್ನೂ forestಗೆ ತೆಗೆದುಕೊಂಡರು. ಅಲ್ಲಿ ಯಾವ ಮರಗಳೂ ಇಲ್ಲ. ಹರಿಜನರು ಅಲ್ಲಿ ಮನೆಗಳನ್ನು ಕಟ್ಟಿಸಿಕೊಂಡು ಒಂದು ಕಾಲೊನಿ ಮಾಡಿಕೊಳ್ಳಬೇಕೆಂದಿದ್ದರು. ಅಂಥಾದ್ದನ್ನು ಅರಣ್ಯ ಇಲಾಖೆಯವರು ಅವರನ್ನು ಹೊಡೆದು ಬಡಿದು ಕಿತ್ತುಕೊಂಡರು. ಹಾಗೆಯೇ ಕೋಲಾರ ತಾಲ್ಲೂಕು ನರಸಾಪುರ ಹೋಬಳಿ ವಾಸಹಳ್ಳಿಯೆಂಬುದು ಇನ್ನೊಂದು ಹಳ್ಳಿ, ಒಂದು ಗುಡಿಸಲು ಮಾತ್ರ ಅಲ್ಲಿದೆ. ಕೋಲಾರ ತಾಲ್ಲೂಕು ಸಬಾ ಮೂರಂಡ ಹಳ್ಳಿ ಫಾರೆಸ್ಟ್‌ನಲ್ಲಿ ಹರಿಜನರು ಆ ಜಮೀನುಗಳನ್ನು ಕೊಡಿ ಎಂದು ದರಖಾಸ್ತು ಹಾಕಿಕೊಂಡರೆ ಆ ಪ್ರದೇಶ ಫಾರೆಸ್ಟ್ ಇಲಾಖೆಗೆ ಸೇರಿದೆಯೆಂದು endorsement ಕೊಟ್ಟಿದ್ದಾರೆ. ನಿಜವಾಗಿಯೂ ಅಲ್ಲಿ ಒಂದು ಗಿಡವಿಲ್ಲ. ಇಂಥ ಪ್ರದೇಶಗಳನ್ನೆಲ್ಲಾ ಸರ್ವೆಮಾಡಿಸಿ ಈ ಕಾಡು ಬೀಡುಗಳನ್ನು ಮತ್ತೆ ಗ್ರಾಮ ಫಾರೆಸ್ಟ್‌ಗೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ತಂಗಡಿಚಕ್ಕೆ ಹರಾಜಿನ ವಿಷಯದಲ್ಲಿ ಒಂದು ಮಾತು ಹೇಳ ಬಯಸುತ್ತೇನೆ. ಇದನ್ನು ನಮ್ಮ ಜಿಲ್ಲೆಯಲ್ಲಿ ಮುಸ್ಲಿಮರಿಗೆ ಬಿಟ್ಟು ಮತ್ತೆ ಯಾರಿಗೂ ಕೊಡುವಂತೆ ಕಾಣುವುದಿಲ್ಲ. ಅವರಿಗೆ ಕೊಡುವುದರಿಂದೇನು ಪ್ರಯೋಜನ? ತಂಗಡಿಚಕ್ಕೆ ಬಾಬುತು ರೇಷೆ ಮುಂತಾಗಿ ಎಲ್ಲವನ್ನೂ ಮಾಡುವವರೇ ಹರಿಜನರು. ಇಷ್ಟೆಲ್ಲಾ ಮಾಡುತ್ತಿದ್ದರೂ ಆ ಹರಿಜನರಿಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಆದರೂ ಅಂಥವರ ಮೇಲೆ ಆ ಮುಸ್ಲಿಮರು, ಪುಂಡ ಪೋಕರಿಗಳು ಸೇರಿಕೊಂಡು ಅವರಿಗೆ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಹಿಂಸೆ ಮಾಡುತ್ತಾರೆ. ಸರ್ಕಾರದವರು ಹರಿಜನರಿಗೆ ಆಗುತ್ತಿರುವ ಈ ಅನ್ಯಾಯವನ್ನು ಗಮನಿಸಿ ಹರಿಜನರಿಗೇ ಪಂಚಸಾಲು ಪ್ರಕಾರವೋ ಅಥವಾ ಇನ್ನಾವುದಾದರೂ ರೀತಿಯಲ್ಲೋ ಈ ಕೆಲಸ ಕೈಸೇರುವಂತೆ ಮಾಡಬೇಕು. ಹರಾಜಿಗಿಟ್ಟರೆ ಹರಿಜನರಿಗೆ ಸಿಕ್ಕುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ಸೂಕ್ತ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಅನೇಕ ವಿಷಯಗಳನ್ನಾಗಲೇ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದರಲ್ಲಿ ಬಹಳ ಮಟ್ಟಿಗೆ ಒತ್ತಾಯಪಡಿಸಿರತಕ್ಕದ್ದು ಎಂದರೆ ಉಪಯೋಗವಿಲ್ಲದ ಅರಣ್ಯವನ್ನಿಟ್ಟುಕೊಂಡು, ಅರಣ್ಯ ಬಹಳವಿದೆಯೆಂದು ಈ ಇಲಾಖೆಯವರು ಲೆಕ್ಕತೋರಿಸುತ್ತಿರುವುದು ಸರಿಯಲ್ಲವೆಂಬುದು. ಯಾವುವು ಉಪಯೋಗಕ್ಕೆ ಬರುತ್ತವೆಂಬುದನ್ನು ನಿರ್ಧಾರ ಮಾಡಿ ಉಪಯೋಗಕ್ಕೆ ಬಾರದಿರುವ ಜಮೀನುಗಳನ್ನು ವ್ಯವಸಾಯಕ್ಕೆ ಬಿಟ್ಟುಕೊಡುವ ಏರ್ಪಾಡು ಮಾಡಬೇಕೆಂದು ಅನೇಕ ವರ್ಷಗಳಿಂದ ಮಾನ್ಯ ಸದಸ್ಯರು ಹೇಳುತ್ತಲೇ ಇದ್ದಾರೆ. ಅನೇಕ ಸಲ ಈ ಸಭೆಯಲ್ಲಿಯೂ ಮತ್ತು ಹಿಂದಿನ ಸಭೆಗಳಲ್ಲಿಯೂ ಇದನ್ನೇ ಒತ್ತಾಯಪಡಿಸಲಾಗಿದೆ. ಆದರೆ ಸರ್ಕಾರದವರಲ್ಲಿ ನಿರ್ದಿಷ್ಟವಾಗಿ ಅರಣ್ಯ ಬೆಳೆಸುವ ಯೋಜನೆ ಯಾವುದೂ ಇಲ್ಲದಿರುವ ಕಾರಣದಿಂದ ಇಂಥ ಉಪಯೋಗವಿಲ್ಲದ ಅರಣ್ಯವನ್ನು ಇಟ್ಟು ಕೊಳ್ಳುತ್ತಾ ಬಂದು ಜನಗಳು ವ್ಯವಸಾಯಕ್ಕೆಬೇಕೆಂದು ಕೇಳಿದರೂ ಕೂಡ ಅವರ ಮಾತನ್ನು ಗಮನಿಸದಿರುವುದು ತುಂಬಾ ವಿಷಾದಕರವಾದ ವಿಷಯ. ಹಿಂದೆ ಅರಣ್ಯ ಇಲಾಖೆಗೆ ಹೇಗೆ ನಾನಾ ಜಮೀನುಗಳನ್ನು ಸೇರಿಸಿಕೊಂಡರು ಎಂಬ ವಿಚಾರವನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅನೇಕ ಕಡೆ ಗೋಮಾಳಗಳನ್ನು ಅರಣ್ಯಕ್ಕೆ ಸೇರಿಸಿಕೊಂಡು ಅವುಗಳನ್ನು forest lands ಎಂದು ಹೇಳುತ್ತಾ ಅದನ್ನೀಗ ಜನರು ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂದು ಕೇಳಿದರೂ ಅದನ್ನು ಕೊಡದೆಯೂ, ಅತ್ತ ಅದನ್ನು ಉಪಯೋಗ ಮಾಡಿಕೊಳ್ಳದೆಯೂ ಬಿಟ್ಟಿದ್ದಾರೆ. ಇದೆಲ್ಲಾ ಇಲಾಖೆಯವರು ಕೇವಲ ತಮ್ಮ prestige ದೃಷ್ಟಿಯಿಂದ ಹೇಳುತ್ತಿರುವ ಮಾತುಗಳೇ ಹೊರತು ವಾಸ್ತವವಾಗಿ ಅವರ ವಾದದಲ್ಲಿ ಏನೂ ಹುರುಳಿಲ್ಲವೆಂದು ಹೇಳಬೇಕಾಗಿದೆ. ಕೂಡಲೆ ಸರ್ವೆ ಮಾಡಿಸಬೇಕು. ಯಾವ ಅರಣ್ಯದಲ್ಲಿ ಮರಗಳನ್ನು ಬೆಳೆಸುವುದಕ್ಕೆ ತಯಾರಾಗಿದ್ದಾರೆಂಬುದನ್ನು ನಿರ್ದಿಷ್ಟಗೊಳಿಸಬೇಕು. ಯಾವ ಅರಣ್ಯದಲ್ಲಿ ಇವರು ಬೆಳೆಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ನಿರ್ದಿಷ್ಟ ಮಾಡಿಕೊಂಡು ಅಂಥಾದ್ದನ್ನು ಉಳುಮೆಗೆ ಬಿಟ್ಟುಕೊಡಬೇಕು. ಅರಣ್ಯ ಇಲಾಖೆಯವರಿಗೆ ತಮ್ಮ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಬೇಕಾದಷ್ಟು ಜಮೀನು ಇದೆ. ಅರಣ್ಯಕ್ಕೆ ಸೇರಿದ ಜಮೀನು ಅಲ್ಲದೆ ಗೋಮಾಳಗಳ ಲ್ಯಾಂಡ್ಸ್ ಇವೆ. Village forestನ್ನು ಗೋಮಾಳ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಏತಕ್ಕೆ ಬೆಳೆಸಬಾರದು, ಏತಕ್ಕೋಸ್ಕರ ವಿಲೇಜ್ ಪಂಚಾಯಿತಿಯವರ ಸಹಾಯವನ್ನು ತೆಗೆದುಕೊಂಡು ಗ್ರಾಮದ ಗೋಮಾಳದಲ್ಲಿ ವಿಲೇಜ್ ಫಾರೆಸ್ಟ್‌ಗಳನ್ನು ಬೆಳೆಸುವ ಏರ್ಪಾಡನ್ನು ಸರ್ಕಾರ ಏರ್ಪಾಡು ಮಾಡಬಾರದು? ವಿಲೇಜ್

ಫಾರೆಸ್ಟ್‌ಗಳನ್ನು ಮಾಡುವುದರಿಂದ ದೇಶದ ವನ ಸಂಪತ್ತು ಇಮ್ಮಡಿಯಾಗಿ ಬೆಳೆಯುವುದು. ಸುಮಾರು ಲಕ್ಷಾಂತರ ಎಕರೆ ಗೋಮಾಳ ಲ್ಯಾಂಡ್ಸ್ ಇವೆ. ಗೋಮಾಳ ಲ್ಯಾಂಡ್ಸ್ ಹೇಗಿದೆ ಎಂದರೆ ಬೇಸಾಯ ಕಾಲದಲ್ಲಿ ದನಗಳಿಗೆ ನಿಲ್ಲಲು ಆಶ್ರಯ ಭೂಮಿಯಾಗಿದೆ. ಇದಕ್ಕಿಂತ ಹೆಚ್ಚಿಗೆ ಉಪಯೋಗವಿಲ್ಲ. ಆದ್ದರಿಂದ ಫಾರೆಸ್ಟ್ ಇಲಾಖೆಯವರು ವಿಲೇಜ್ ಫಾರೆಸ್ಟ್‌ನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಗೋಮಾಳ ಲ್ಯಾಂಡ್ಸ್ improve ಆಗುತ್ತದೆ. ಪ್ರತಿಯೊಂದು ವಿಲೇಜಿಗೂ ಫಾರೆಸ್ಟ್ ಇದ್ದು ಗ್ರಾಮಗಳು ಬೆಳೆಯುವುವು. ಅಂತಹ ಯೋಜನೆಯನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾ ಇಲ್ಲ. ಯೋಚನೆಯನ್ನೂ ಕೂಡ ಮಾಡಿಲ್ಲ. ಇದರಿಂದ ಎಷ್ಟು ಉತ್ಪತ್ತಿಯನ್ನು ತೋರಿಸುತ್ತಾರೋ ಅಷ್ಟೇ ಖರ್ಚಾಗಿದೆ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ teak ಮತ್ತು ಇತರ ಅರಣ್ಯ ಸಂಪತ್ತು ಕಡಿಮೆ ಯಾಗಿ ಹೋಗಿದೆ. ಈ ಡಿಮ್ಯಾಂಡ್ ಜಾಸ್ತಿಯಾಗಿ supply ಖೋತಾ ಬದ್ದು ಧಾರಣೆ ವಾಸಿಗಳು ಹೆಚ್ಚಾಗಿ, ಹೆಚ್ಚಿನ ಉತ್ಪತ್ತಿಯನ್ನು ತೋರಿಸುವುದಕ್ಕೆ ಅವಕಾಶವಾಗಿದೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ಕಾಣುವುದಿಲ್ಲ. ಶ್ರೀ ದೇವ ರಾಜ್ ಅರಸಿನವರು, ಇದರ ಬೆಲೆ 5-6 ರೂಪಾಯಿಗಳಿಂದ 15-20 ರೂಪಾಯಿಗಳವರೆಗೂ ಏರಿದೆ ಎಂದು ಹೇಳಿದರು. ಮೈಸೂರು ಫಾರೆಸ್ಟಿನಿಂದ ಲಕ್ಷಾಂತರ ರೂಪಾಯಿಗಳ ಮರಗಳನ್ನು ಹೊರಗಡೆಗೆ ನಾವು ಕಳುಹಿಸಿ ಕೊಡುತ್ತಿದ್ದೇವೆ. ನಮಗೆ ಹೆಚ್ಚಿನ ದುಡ್ಡು ಬರುತ್ತದೆ ಎನ್ನುವ ದೃಷ್ಟಿಯಿಂದ ಕಳುಹಿಸಿಕೊಡುತ್ತಿದ್ದೇವೆ. ನಮ್ಮಲ್ಲಿ ಫಾರೆಸ್ಟ್ ಇದೆ. ನಮ್ಮ ದೇಶದ ಜನಗಳಿಗೆ ಪ್ರಯೋಜನವಾಗುತ್ತದೆಯೇ ಎಂಬುದನ್ನು ಅರಣ್ಯ ಇಲಾಖೆಯವರು ನೋಡುತ್ತಾ ಇಲ್ಲ. ಯಾರು ಚೆನ್ನಾಗಿ ಕೆಲಸ ಮಾಡುತ್ತಾರೋ ಅವರಿಗೆ encouragement ಇಲ್ಲ, ಯಾರು ಕೆಲಸ ಮಾಡುವುದಿಲ್ಲವೋ ಅವರಿಗೆ encouragement ಇದೆ ಎಂಬುದಾಗಿ ಅರಣ್ಯ ಇಲಾಖೆಯಲ್ಲಿ ಒಂದು ಪ್ರತೀತಿ ಇದೆ. ಒಂದು ಸಂದರ್ಭದಲ್ಲಿ ನಾನು ಶಿವಮೊಗ್ಗಾ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಅರಣ್ಯ ಬೆಳೆಸುವ ಪ್ರೋಗ್ರಾಂನ್ನು ಹಾಕಿಕೊಂಡಿದ್ದಾರೆ! ಅದು ಬಹಳ ಚೆನ್ನಾಗಿದೆ. ಮೈಲಿಗಟ್ಟಲೆ ಬೆಳೆಸುತ್ತಾರೆ. ಬಹಳ ಚೆನ್ನಾಗಿದೆ. ಆದರೆ ಹಾಗೆ ಬೇರೆ ಜಿಲ್ಲೆಗಳಲ್ಲಿ, ಅದೇ ಇಲಾಖೆಯವರು ಏತಕ್ಕೆ ಬೆಳೆಸುತ್ತಾ ಇಲ್ಲ ಎಂಬುದನ್ನು ನಾವು ಕೇಳಬೇಕಾಗಿದೆ. ತುಮಕೂರು ತೆಗೆದುಕೊಂಡರೆ, ತುಮಕೂರಿನ ಜಿಲ್ಲೆಯಲ್ಲಿ ಮತ್ತು ದೇವರಾಯನದುರ್ಗ ಫಾರೆಸ್ಟಿನಲ್ಲಿ ಶ್ರೀಗಂಧ ವಿಶೇಷವಾಗಿ ಇದೆ. ಈಗ ಗಂಧದ ಫ್ಯಾಕ್ಟರಿಗೂ ಮತ್ತು ದೇಶಕ್ಕೂ ಕೊಡುವುದಕ್ಕೆ ಬರುವ ಪರಿಸ್ಥಿತಿ ಒದಗಿದೆ. ಅರಣ್ಯದಲ್ಲಿರುವ ಶ್ರೀಗಂಧದ ಮರಕ್ಕೆ ರೋಗ ತಗಲಿ ಮರಗಳು ನಾಶವಾಗಿ ಹೋಗುತ್ತಿವೆ. ಎಲ್ಲೆಲ್ಲಿ ಉತ್ತಮವಾಗಿ ಬೆಳೆಸುವುದಕ್ಕೆ ಅವಕಾಶವಿದೆಯೋ ಅಲ್ಲಲ್ಲಿ ಶ್ರೀಗಂಧವನ್ನು ಬೆಳೆಸಬೇಕು. ಹಾಗೆಯೇ preserve ಮಾಡಬೇಕು. ಲಕ್ಷಾಂತರ ರೂಪಾಯಿ ಆದಾಯ ಬರತಕ್ಕ ಮರ ಸಂಪತ್ತನ್ನು ಬೆಳೆಸಬೇಕೆಂದು ತೀವ್ರವಾಗಿ ಯೋಚನೆ ಮಾಡುತ್ತಾ ಇಲ್ಲ. ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಶ್ರೀಗಂಧ ಮರ ಹಾಕಿದರೆ ಬೆಳೆಯುವುದಿಲ್ಲ ಎಂಬ ಅಭಿಪ್ರಾಯವಿತ್ತು. ತಾನಾಗಿಯೇ ಬೆಳೆಯಬೇಕು, ಬೀಜ ಹಾಕಿ, ನರ್ಸರೀಸ್‌ನಲ್ಲಿ ಬೆಳೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಈಗ ನರ್ಸರಿ ಮಾಡಿ ಬೆಳೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ತುಮಕೂರು ಫಾರೆಸ್ಟ್‌ನಲ್ಲಿ ಒಂದು ಮರವೂ ಕೂಡ ಇಲ್ಲ. ತುಮಕೂರು ಜಿಲ್ಲೆ ಶ್ರೀಗಂಧ ಮರಕ್ಕೆ ಉತ್ತಮವಾದ ಮತ್ತು ಶ್ರೇಷ್ಠವಾದ ಪ್ರದೇಶ. ಅಲ್ಲಿ ಸಾಮಾನ್ಯವಾಗಿ ಎಲ್ಲ ಹೊಲಗಳಲ್ಲೂ ಕೂಡ ಶ್ರೀಗಂಧದ ಮರವಿದೆ. ಶ್ರೀ ಹುಚ್ಚೇಗೌಡರು ತಿಳಿಸಿದಹಾಗೆ ಇಲಾಖೆಯವರು ಶ್ರೀಗಂಧದ ಮರವನ್ನು ಬೆಳೆಸುವುದನ್ನು discourage ಮಾಡಿದ್ದಾರೆ. ಸಾರ್ವಜನಿಕರು ಬೆಳೆಸತಕ್ಕ ಮತ್ತು ಉಳಿಸತಕ್ಕ ಮನೋಭಾವ ಕಡಿಮೆ ಮಾಡಿಕೊಂಡಿದ್ದಾರೆ. ಕೇಸು ಹಾಕಿ, ಕಿರುಕುಳ ಕೊಡುವುದನ್ನು ಹೆಚ್ಚು ಮಾಡಿದ್ದರಿಂದ ಜಮೀನಿನಲ್ಲಿರುವ ಗಿಡವನ್ನು ಬೆಳಸಬಾರದು ಅದನ್ನು ಕಿತ್ತು ಹಾಕಬೇಕು, ಇಲ್ಲದಿದ್ದರೆ ಮುಂದೆ ಅದರಿಂದ ತೊಂದರೆ ಬರುತ್ತದೆ ಎಂಬ ಭಾವನೆಯನ್ನುಂಟುಮಾಡಿದ್ದಾರೆ. ಅದು ಸರಿಯಾದುದಲ್ಲ. ಜನರು ಹೊರಗಡೆಗೆ ತೆಗೆದುಕೊಂಡು ಹೋಗಿ ಹಡಗಿನಲ್ಲಿ ರವಾನೆ ಮಾಡುವುದಕ್ಕೆ ಆಗುವುದಿಲ್ಲ. ಧೂಪ ಹಾಕುವುದಕ್ಕೋ, ಇನ್ನೊಂದಕ್ಕೋ ಆ ಮರವನ್ನು ಕಡಿದುಕೊಂಡು ಹೋಗುತ್ತಾರೆ. ಇದಕ್ಕಿಂತ ಹೆಚ್ಚಿಗೆ ಉಪಯೋಗಿಸುತ್ತಾ ಇಲ್ಲ. ವಿಶೇಷ ಕಾನೂನನ್ನು ಉಪಯೋಗಿಸಿ, ಒಂದು ತಿಂಗಳು, ಎರಡು ತಿಂಗಳು ಸಜಾ ವಿಧಿಸಿ, ಜನರನ್ನು ಕೋರ್ಟಿಗೆ ಎಳೆದು, ಈ ರೀತಿ ಪರಿಸ್ಥಿತಿಯನ್ನುಂಟುಮಾಡಿ, ಇಂತಹ ಮರಗಳನ್ನು ಬೆಳೆಸುವುದಕ್ಕೆ discourage ಮಾಡಿದ್ದಾರೆ. ಇದು ಸರಿಯಲ್ಲ. ಹೀಗೆ ಯಾವುದೋ spike disease ಬಂದು, ಫಾರೆಸ್ಟ್‌ನಲ್ಲಿರುವ ಮರ ಪೂರ್ತಿಯಾಗಿ ಹೋಗುವ ಸಂದರ್ಭ ಬಂದಿದೆ. ಆದ್ದರಿಂದ ವಿಶೇಷವಾಗಿ ಹಣವನ್ನು, ಆದಾಯವನ್ನು ಕೊಡುವ ಇಂತಹ ಮರಗಳನ್ನು ಎಲ್ಲೆಲ್ಲಿ ಬೆಳೆಸುವುದಕ್ಕೆ ಸಾಧ್ಯವೋ ಅಲ್ಲಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಇಲಾಖೆಯಲ್ಲಿರುವ staff ನಿಂದ afforestation ಮಾಡಬೇಕು. ಆದರೆ ಇಲಾಖೆಯು ವಿಶೇಷ ಆಸಕ್ತಿಯನ್ನು ತೋರಿಸದೆ, ಫಾರೆಸ್ಟ್‌ನಲ್ಲಿರತಕ್ಕ ಲಾಂಟಾನಾ ಬೆಳೆದುಕೊಂಡು ಬಿದ್ದಿರುವಾಗ, ಕುರುಚಲುಗಿಡಗಳು ಇಲ್ಲದೇ ಇರುವುದನ್ನು ಫಾರೆಸ್ಟ್ ಎಂದು ಕರೆದುಕೊಂಡು ಅದು ತಮಗೆ ಬೇಕು ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ ಮತ್ತು ಸರಿಯೂ ಅಲ್ಲ. ಇದರ ಜೊತೆಗೆ ವಿಲೇಜ್ ಫಾರೆಸ್ಟನ್ನು ಬೆಳೆಸಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳಿ ಈ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೆ, ದೇಶಕ್ಕೆ ಅರಣ್ಯ ಸಂಪತ್ತು ಬಹಳ ಮುಖ್ಯವಾದುದು, ಅರಣ್ಯದ ಅಭಿವೃದ್ಧಿಗೆ ಹೆಚ್ಚಿನ ನಿಗಾ ಕೊಟ್ಟರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವ ನಿರೀಕ್ಷೆಯೂ ಇದೆ. ಹೀಗಿದ್ದಾಗ್ಯೂ ಅನೇಕ ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿಯೂ ಬೇರೆ ಕಡೆಗಳಲ್ಲಿಯೂ ಅನೇಕ ವೇಳೆ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕೆಂದು ಹೇಳುತ್ತಿದ್ದರೂ ಪ್ರತಿವರ್ಷವೂ ಅರಣ್ಯ ಸಂಪತ್ತು ನಾಶವಾಗುತ್ತಿದೆ ಎಂದು ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಮಾಧವಾಚಾರ್ಯರು ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡದಿದ್ದರೆ ದೇಶಕ್ಕೆ ಎಷ್ಟು ಅನ್ಯಾಯವಾಗುತ್ತದೆಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅರಣ್ಯಗಳನ್ನು ಅಭಿವೃದ್ಧಿ ಮಾಡುವುದೇ ನಮ್ಮ ಕರ್ತವ್ಯವೆಂದು ಸರ್ಕಾರದವರು ಬಾಯಿನಲ್ಲಿ ಮಾತ್ರ ಹೇಳುತ್ತಿದ್ದರೆ ಸಾಲದು. ಕೆಲವುಕಡೆ ಸಾವಿರಾರು

(ಶ್ರೀ ಜಿ. ಪುಟ್ಟಸ್ವಾಮಿ.)

ಎಕರೆ ಜಮೀನಿನಲ್ಲಿ ಒಂದು ಮರ ಕೂಡ ಇಲ್ಲ, ಇದನ್ನು ಅರಣ್ಯವಾಗಿ ಅಭಿವೃದ್ಧಿಯನ್ನೂ ಮಾಡುವುದಿಲ್ಲ, ಆ ಜಮೀನನ್ನು ಸಾಗುವಳಿಗೂ ಕೊಡುವುದಿಲ್ಲ. ಹತ್ತು, ಇಪ್ಪತ್ತು, ವರ್ಷಗಳಿಂದ ಈ ಅರಣ್ಯದ ಜಮೀನುಗಳನ್ನು ಹಾಗೆಯೇ ಇಟ್ಟುಕೊಂಡು ಬಂದಿರುವುದರಿಂದ ತುಂಬಾ ನಷ್ಟ ಮಾಡಿದ್ದಾರೆಂದು ಹೇಳದೆ ವಿಧಿಯಿಲ್ಲ. ದೊಡ್ಡ ಅರಣ್ಯವಿದ್ದು ಅದು ಕಾಡು ಬೆಳಸುವುದಕ್ಕೆ ಸರಿಯಿಲ್ಲದೆ ಫಲವತ್ತಾದ ಜಮೀನಾಗಿದ್ದು ಅದರಲ್ಲಿ ಕೇವಲ ಹತ್ತು ಎಕರೆ ಜಮೀನನ್ನು ಕೂಡ ಜಮೀನಿಲ್ಲದ ಜನರಿಗೂ ನಿರ್ಗತಿಕರಿಗೂ ಕೊಡದೇ ಹೋದರೆ, ಸುಮ್ಮನೆ ತತ್ವ ಹೇಳುವುದರಿಂದ ಪ್ರಯೋಜನವೇನು ? ಸರ್ಕಾರದವರು ಅರಣ್ಯಗಳನ್ನು ಹೆಚ್ಚು ಮಾಡುವ ಅಥವಾ ಕಡಮೆ ಮಾಡುವ ವಿಷಯದಲ್ಲಿ ನಾನು ಅಡ್ಡಿಬರುವುದಿಲ್ಲ. ಆದರೆ ಈ ತತ್ವಕ್ಕೆ ವಿರುದ್ಧವಾಗಿ ಅಥವಾ ಪ್ರತಿಯಾಗಿ ನಡೆಯುತ್ತಿರುವುದು ಸರಿಯಲ್ಲ. ಅರಣ್ಯ ಮಧ್ಯದಲ್ಲಿ ಅರಣ್ಯ ಬೆಳೆಯುವುದಕ್ಕೆ ಅವಕಾಶವಿಲ್ಲದಿರುವಾಗ, ಇದಕ್ಕೆ ಆ ಜಮೀನು ಲಾಯಕ್ಕಾಗಿಲ್ಲದೇಯಿರುವಾಗ, ಈ ಜಮೀನನ್ನು ಹತ್ತಾರು ವರ್ಷಗಳಿಂದ ಸಾಗುವಳಿಗೂ ಕೊಡದೆ ಏಕೆ ಹಾಗೆಯೇ ಬಿಟ್ಟುಕೊಂಡಿರಬೇಕು ? ಇದನ್ನು ಮಂತ್ರಿಗಳು ಪರಿಶೀಲನೆ ಮಾಡಬೇಕು. ಅಲ್ಲದೆ ಈ ಮಂತ್ರಿಗಳು ಡಾ॥ ನಾಗನಗೌಡರು ಬಂದಮೇಲೆ ಈ ಇಲಾಖೆಯ ದಕ್ಷತೆ ಹೆಚ್ಚುತ್ತದೆಂದು ಬಹುಜನರು ನಿರೀಕ್ಷೆ ಮಾಡಿದ್ದರು. ಈಗಂತೂ ಅರಣ್ಯ ಶಾಖೆಯ ಯಂತ್ರದ ದಕ್ಷತೆ ಕಡಮೆಯಾಗುತ್ತಿದೆ ಎಂದು ಅನೇಕ ಜನರು ಹೇಳಿದ್ದಾರೆ. ಉದಾಹರಣೆಗೆ, ಇಲಾಖೆಗೆ ಸೇರಿದ ಜಮೀನು ದರಖಾಸ್ತುಗಳ ಸಂಬಂಧದಲ್ಲಿ valuation ಮಾಡುವುದಕ್ಕೆ ಅರಣ್ಯ ಶಾಖೆಗೆ ಕಳುಹಿಸುತ್ತಾರೆ. ಮೂಡಿಗೆರೆ ತಾಲ್ಲೂಕಿನಲ್ಲಿ ಇಂಥಾ ರಿಕಾರ್ಡು ಅರಣ್ಯ ಶಾಖೆಯ ಅಧಿಕಾರಿಗಳಿಗೆ ಹೋಗಿ ಒಂದು ವರ್ಷಕ್ಕೆ ಮೇಲ್ಪಟ್ಟಾಗಿದ್ದರೂ ಅದು ವಾಪಸ್ಸು ಅವರಿಂದ ಬರಲಿಲ್ಲವೆಂದರೆ, ಇದಕ್ಕೇನು ಹೇಳುವುದು ? ಜನರು ಅನೇಕ ಅರ್ಜಿಗಳನ್ನು ಕೊಟ್ಟು ಪ್ರತಿದಿನವೂ ಅವರಲ್ಲಿಗೆ ಹೋಗುತ್ತಿದ್ದರೂ ಕೂಡ ದರಖಾಸ್ತು ರಿಕಾರ್ಡುಗಳಿಗೆ ಗಮನ ಕೊಡುವುದಿಲ್ಲ. ನಾನೇ ಈ ವಿಷಯದಲ್ಲಿ ಒಂದು ಖೋತಾ ನಿರ್ಣಯವನ್ನು ಮಂಡಿಸಿರುತ್ತೇನೆ. ನಾವು ಮಾತನಾಡತಕ್ಕ ವಿಷಯಗಳನ್ನೂ, ಕೊಡತಕ್ಕ ಸಲಹೆಗಳನ್ನೂ ಕಾರ್ಯಗತ ಮಾಡುವುದಾಗಲೀ, ವಿಚಾರ ಮಾಡುವುದಾಗಲೀ ಇಲಾಖೆಗೆ ಬರೆದು ತನಿಖೆ ಮಾಡುವುದಾಗಲೀ ಮಾಡಿದರೆ ಒಳ್ಳೆಯದು. ಈ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲವಾದಲ್ಲಿ ಅರಣ್ಯರೋದನವಾಗುತ್ತದೆ. ವ್ಯವಸಾಯದ ಮುಟ್ಟುಗಳನ್ನು ಪಡೆಯುವುದಕ್ಕೆ ರೈತರಿಗೆ ಬಹಳ ಅನಾನುಕೂಲವಾಗಿದೆ. ನೇಗಿಲು, ಕುಂಟೆ, ಮುಂತಾದ ವ್ಯವಸಾಯದ ಮುಟ್ಟುಗಳನ್ನು ಹಸಿ ಮರದಿಂದ ಮಾಡುವುದು, ಆದುದರಿಂದ ರೈತರು ಇವುಗಳಿಗೆ ಬೇಕಾದ ಹಸಿ ಮರವನ್ನು ತರುವುದಕ್ಕೆ ವಿನಾಯ್ತಿ ಕೊಡಬೇಕು; ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆ. ಕಾಡಿನಿಂದ ಮುಳ್ಳುಗಳನ್ನು ತರುವುದಕ್ಕೂ ಅಡ್ಡಿಯಿದೆ ಎಂದು ಹೇಳಿದ್ದಾರೆ. ಲೈಸೆನ್ಸ್ ಇಲ್ಲದೆ ಇದನ್ನು ತಂದುಕೊಳ್ಳುವುದಕ್ಕೆ ಅವಕಾಶ ಕೊಡಬೇಕು.

ಮೂಡಿಗೆರೆ ತಾಲ್ಲೂಕು ಬೈರಾಪು-ದಲ್ಲಿ ಕಾಡಾನೆಗಳ ಕಾಟ ಜಾಸ್ತಿಯಾಗಿದೆ; ಅದನ್ನು ತಪ್ಪಿಸದೇಯಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಆನೆಗಳನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ, ಮಂತ್ರಿಗಳು ಆಯಾ ಪ್ರದೇಶಗಳಿಗೆ ಹೋದಾಗ ತನಿಖೆ ಮಾಡಿ ಜನರಿಗೆ ಎಷ್ಟು ಸಹಾಯ ಕೊಡಬಹುದು, ಅರಣ್ಯಗಳನ್ನು ಎಷ್ಟು ಅಭಿವೃದ್ಧಿ ಮಾಡಬಹುದುಎಂಬ ವಿಚಾರದಲ್ಲಿ ಸರ್ಕಾರ ನಿಗಾ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಅರಣ್ಯ ಸಂಪತ್ತಿನ ವಿಚಾರದಲ್ಲಿ ಇದುವರೆಗೆ ವಾದವಿವಾದಗಳು ನಡೆದಿವೆ. ಶಾಸನ ಸಭೆಗೆ ಪ್ರಜೆಗಳಿಂದ ಚುನಾಯಿತರಾಗಿ ಬಂದ ಮೇಲೆ, ದೇಶದ ಹಿತದೃಷ್ಟಿಯಿಂದಲೂ ಪ್ರಜೆಗಳ ಹಿತದೃಷ್ಟಿಯಿಂದಲೂ ದೇಶ ಅಭಿವೃದ್ಧಿಯಾಗಬೇಕಾದರೆ ಯಾವ ಯಾವುದು ಅಗತ್ಯವೆಂಬುದನ್ನು ನೋಡಿ ಅರಿಯಬೇಕು. ಈ ಫಾರೆಸ್ಟ್ ಬೇಡಿಕೆಯ ಮೇಲೆ ಮಾತನಾಡುತ್ತಾ ಅನೇಕ ಸದಸ್ಯರು ಅನೇಕ ಅರ್ಜಿಗಳು ಬಂದರೂ ಗಮನಿಸುವುದಿಲ್ಲ, ಫಾರೆಸ್ಟ್ ಇಲಾಖೆಯಲ್ಲಿ ಜಾಗ್ರತೆ ಜಮೀನು ವಿಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ನನಗೆ ಗೊತ್ತಿರುವಹಾಗೆ ಮೈಸೂರು ಸಂಸ್ಥಾನದಲ್ಲಿ ಇದುವರೆಗೆ ಇದ್ದ ಅರಣ್ಯ ಪ್ರದೇಶ ಈಚೆಗೆ ಕಡಮೆಯಾಗಿದೆ. 1920ರಿಂದೀಚೆಗೆ ಸುಮಾರು ಹದಿನೈದುಸಾವಿರ ಎಕರೆಯಷ್ಟು ಕಡಮೆಯಾಗಿದೆ ಎಂಬುದನ್ನು ಸರ್ಕಾರ ಅರಿಯಬೇಕು. ಯಾವ ಸಂಸ್ಥಾನದಲ್ಲೇ ಆಗಲಿ ಅರಣ್ಯ ಕಡಮೆಯಾದಮೇಲೆ ದೇಶದ ಭದ್ರತೆ ಮತ್ತು ಸಂಪತ್ತು ಕಡಮೆಯಾಗುತ್ತದೆಂಬುದನ್ನರಿಯಬೇಕು. ಇದಕ್ಕೆ ಕಾರಣ, ದೇಶದಲ್ಲಿ ಮಳೆ ಬೆಳೆ ಸರಿಯಾಗಿ ನಡೆಯಬೇಕಾದರೆ, ವನಸಂಪತ್ತು ಮುಖ್ಯ. ಎಲ್ಲಿ ವನ ಸಂಪತ್ತಿಲ್ಲವೋ ಅಲ್ಲಿ ಮಳೆ ಬರುವುದಿಲ್ಲ. ಇದನ್ನು ಸರ್ಕಾರದವರು ಚೆನ್ನಾಗಿ ಅರಿತಿದ್ದಾರೆ. ನಾಲ್ಕೈದು ವರ್ಷಗಳಿಂದಲೂ ನಾನು ಅರಣ್ಯಗಳನ್ನು ಅಭಿವೃದ್ಧಿ ಮಾಡಬೇಕು, ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು, ಸಾಗವಾನಿ ಮರ ಹೆಚ್ಚು ಮಾಡಬೇಕು. ಇದರಿಂದ ವರಮಾನ ಹೆಚ್ಚುತ್ತದೆಂದು ಹೇಳುತ್ತಿದ್ದೇನೆ. ಇನ್ನೂ ಗಿಡಮೂಲಿಕೆಗಳನ್ನು ಜಾಸ್ತಿಯಾಗಿ ಮಾಡಬೇಕು. ಅರಣ್ಯದ ಜಮೀನನ್ನು ಜನರಿಗೆ ಕೊಟ್ಟು ಬಿಡಬೇಕೆಂದು ಕೆಲವರು ಹೇಳಿದರು. ಇದು ಹೇಗಿದೆಯೆಂದರೆ, ಮಾಂಗಲ್ಯವನ್ನು ಹೆಂಡತಿಗೆ ಕಟ್ಟಿರುತ್ತೇವೆ, ನಮಗೆ ಹೊಟ್ಟೆಗಿಲ್ಲವೆಂದು ಅದನ್ನು ಕಿತ್ತು ಮಾರಿದರೆ ಎಷ್ಟು ಅನ್ಯಾಯವೋ ಅಷ್ಟೇ ಅನ್ಯಾಯವಾಗುತ್ತದೆ; ಅವರು ಹೇಳಿದ ಹಾಗೆ ಮಾಡಿದರೆ, ಫಾರೆಸ್ಟ್ ಇಲಾಖೆಯಲ್ಲಿ ದಕ್ಷತೆ ಕಡಮೆಯಾಗಿದೆ. ಸಾಧಾರಣವಾಗಿ ಫಾರೆಸ್ಟ್ ರೇಂಜರುಗಳು, ಗಾರ್ಡುಗಳು ಮುಂತಾದ ನೌಕರರು ಅನೇಕ ಕಡೆ ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಕಾಡಿನಲ್ಲಿ ಕುರಿ ದನಗಳನ್ನು ಮೇಯಿಸುವವರಿಗೆ ಸೌದೆಗೂ ಮನೆಕಟ್ಟಿಕೊಳ್ಳುವುದಕ್ಕೂ ಮರ ತೆಗೆದುಕೊಂಡು ಹೋಗಲು ಅವಕಾಶ ಕೊಡುತ್ತಿದ್ದಾರೆ. ಇದರಿಂದ ಅರಣ್ಯಸಂಪತ್ತು ಕಡಮೆಯಾಗಿ ಮಳೆ ಬೆಳೆ ಕಡಮೆಯಾಗುವುದಕ್ಕವಕಾಶವಾಗಿದೆ. ದೇಶದ ಹಿತದೃಷ್ಟಿಯಿಂದ ಅರಣ್ಯಗಳನ್ನು ಸುಭದ್ರವಾಗಿಡಬೇಕು. ಈ ಜಮೀನಿನಲ್ಲಿ ಒಂದು ಎಕರೆಯನ್ನು ಕೂಡ ಯಾರಿಗೂ ಕೊಡದೆ ಭದ್ರಪಡಿಸಬೇಕು. ಶ್ರೀ ಮೊಡಲಗಿರಿಗೌಡರು ತೀರಾ ರೈತರು, ಅನುಭವಸ್ಥರು. ಇಂಥವರು ಫಾರೆಸ್ಟ್ ಜಮೀನನ್ನು ದಾನ ಕೊಡಿ ಎಂದು ಅಪ್ಪಣೆ ಕೊಟ್ಟಿರುವುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರಂಥವರು ಬೇಕಾದರೆ ಜಮೀನನ್ನು ಬಿಟ್ಟುಕೊಡಲಿ, ಬೇಡ ಎನ್ನುವುದಿಲ್ಲ. ಆದರೆ ಅರಣ್ಯಸಂಪತ್ತನ್ನು ಕೊಟ್ಟು ಕಡಮೆ ಮಾಡಬಾರದು. ನಮ್ಮ ದೇಶದಲ್ಲಿ ಹಿಂದೆ ಹಿರಿಯರು ಒಂದು ಮರವನ್ನಾದರೂ ಹಾಕಿ

ಸಾಯಬೇಕೆಂದು ಪ್ರತಿಜ್ಞೆ ಮಾಡುತ್ತಿದ್ದರು. ಆದರೆ ಈಗ ಐವತ್ತು ಮರಗಳನ್ನಾದರೂ ಕಡಿದು ಸಾಯಬೇಕೆಂದು ಪ್ರತಿಜ್ಞೆ ಮಾಡುತ್ತಾರೆ. ಶಾಸನ ಸಭೆಗೆ ಜನರಿಂದ ಚುನಾಯಿತರಾಗಿ ಬಂದಿರುವ ನಾವು ದೇಶದ ಹಿತವನ್ನು ರಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ತಮ್ಮಲ್ಲಿ ಹೇಳುತ್ತಿದ್ದೇನೆ. ಕೊನೆಯದಾಗಿ, ಯಾವ ಯಾವ ಡಿಮ್ಯಾಂಡಿನ ಮೇಲೆ ನಾವು ಏನೇನು ಸಲಹೆ ಮಾಡುತ್ತೇವೋ ಅದನ್ನು ಮುಂದಿನ ಸಾಲಿನಲ್ಲಿ ಕಾರ್ಯಗತ ಮಾಡಿ, ವಿವಿಧ ಇಲಾಖೆಗಳ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಅವಕಾಶ ಮಾಡಬೇಕೆಂದು ಈ ಸಭೆಯ ಮೂಲಕ ಪ್ರಾರ್ಥಿಸಿ, ಇಷ್ಟು ಕಾಲಾವಕಾಶವನ್ನು ನನಗೆ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಕೊಟ್ರಬಸವನಗೌಡ (ಕೂಡ್ಲಿಗಿ).—ಅಧ್ಯಕ್ಷರೇ, ಅರಣ್ಯಗಳ ವಿಚಾರದಲ್ಲಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಜಿಲ್ಲೆ ಇಲ್ಲಿಗೆ ಸೇರಿ ಎರಡೂವರೆ ವರ್ಷಗಳಾದರೂ ಕೂಡ ಇನ್ನೂ ಕೆಲವು ಕಾನೂನುಗಳು ಪಾಸ್‌ಆಗಿಲ್ಲ. ಅದರಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕಾನೂನು ಒಂದು. ಬಳ್ಳಾರಿ ಜಿಲ್ಲೆಯಲ್ಲಿ ಈಗ ಮದರಾಸು ಕಾನೂನು ಜಾರಿಯಲ್ಲಿದೆ. ಇದರಿಂದ ಫಾರೆಸ್ಟ್ ಇಲಾಖೆಗೆ ಎಷ್ಟೋ ಮಟ್ಟಿಗೆ ತೊಂದರೆಯಾಗಿದೆ. ಮೊದಲನೆಯದಾಗಿ ಈ ಅರಣ್ಯಗಳಲ್ಲಿ ಯಾರಾದರೂ ಮರಗಳನ್ನು ಕಡಿದರೆ ಅರಣ್ಯದ ಬೌಂಡರಿಯಲ್ಲಿರುವಾಗಲೇ ಹಿಡಿಯಬೇಕು. ಬೌಂಡರಿಯನ್ನು ಬಿಟ್ಟು ಹೊರಗೆ ಬಂದ ಮೇಲೆ ಅರಣ್ಯ ಇಲಾಖೆಯವರು ಅವರನ್ನು ಹಿಡಿಯುವುದಕ್ಕೆ ಅಧಿಕಾರವಿಲ್ಲ. ಮದರಾಸ್ ಫಾರೆಸ್ಟ್ ಆಕ್ಟ್‌ನಲ್ಲಿ ಇದು ಒಂದು ಲೋಪ, drawback ಇದೆ. ಎರಡನೆಯದು ಏನೆಂದರೆ ಮದರಾಸ್ ಆಕ್ಟ್ ಪ್ರಕಾರ ಶ್ರೀಗಂಧದ ಮರ ಸರ್ಕಾರದ ಸ್ವತ್ತಲ್ಲ. ಅಲ್ಲದೆ ಸರ್ಕಾರಕ್ಕೆ ಸೇರಿದ ಗಂಧದ ಮರಗಳನ್ನು ಕಡಿದರೂ, ಇತರ ಮರಗಳನ್ನು ಕಡಿದರೆ ಎಷ್ಟು ತಪ್ಪಾಗುತ್ತದೆಯೋ ಗಂಧದ ಮರವನ್ನು ಕಡಿದರೂ ಅಷ್ಟೇ ತಪ್ಪಾಗುತ್ತದೆ. ಗಂಧದ ಮರವು ಕೆಲವು ಕಡೆ ಖಾಸಗಿ ಜಮೀನುಗಳಲ್ಲಿವೆ, ಅದನ್ನು ಕಡಿದರೆ ತೊಂದರೆ ಏನೂ ಇಲ್ಲ. ಅದೇ ಮೈಸೂರು ಆಕ್ಟ್ ಪ್ರಕಾರ ಸರ್ಕಾರಿ ಜಮೀನಿನಲ್ಲಾಗಲಿ, ಖಾಸಗಿ ಜಮೀನಿನಲ್ಲಾಗಲಿ ಇರತಕ್ಕ ಗಂಧದ ಮರಗಳನ್ನು ಕಡಿದರೆ ಅಂಥವರ ಮೇಲೆ ಕೇಸನ್ನು ದಾಖಲ್ಮಾಡುವುದಕ್ಕೆ ವ್ಯವಸ್ಥೆ ಇದೆ. ಆದುದರಿಂದ ಈಗ ಬಳ್ಳಾರಿಯಲ್ಲಿರುವ ಎರಡು ಲೋಪಗಳನ್ನೂ ಹೋಗಲಾಡಿಸಬೇಕಾದರೆ ಮೈಸೂರು ಆಕ್ಟನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಇಲ್ಲಿನ ಆಕ್ಟನ್ನು ಬಳ್ಳಾರಿಗೂ ಅನ್ವಯಿಸಿದರೆ ನಮ್ಮಲ್ಲಿ ಮರಗಳು ಕಡಿಮೆಯಾಗಿರುವಂತೆ ನಿಮ್ಮಲ್ಲಿಯೂ ಕಡಿಮೆಯಾಗುತ್ತದೆ.

ಶ್ರೀ ಕೊಟ್ರಬಸವನಗೌಡ.—ಕಡಿಮೆ ಯಾಗುವುದಿಲ್ಲವೆಂದು ಹೇಳುತ್ತೇನೆ. ನಾನಾಗಲೇ ತಿಳಿಸಿದಂತೆ ಮೈಸೂರು ಆಕ್ಟಿಗೂ ಮದರಾಸು ಆಕ್ಟಿಗೂ ವ್ಯತ್ಯಾಸವಿದೆ. ಮದರಾಸು ಆಕ್ಟ್ ಪ್ರಕಾರ ಬೌಂಡರಿ ಬಿಟ್ಟು ಒಂದು ಅಡಿ ಮುಂದೆ ಹೋಗಿದ್ದರೂ ಸಹ ಇಲಾಖೆಯವರು ಅವರನ್ನೂ ಹಿಡಿದು ಕೇಸುಹಾಕುವುದಕ್ಕೆ ಆಗುವುದಿಲ್ಲ. ಎಲ್ಲವನ್ನೂ ನಾವು ಮಂತ್ರಿಗಳಿಗೆ ಹೇಳಿದ್ದೇವೆ. ಮೈಸೂರು ಕಾನೂನನ್ನು ಬಳ್ಳಾರಿಯಲ್ಲಿ ಇನ್ನೂ ಜಾರಿಗೆ ತರದಿರುವುದು ವಿಷಾದಕರವಾದ ಸಂಗತಿ.

ಸಂಡೂರು ಅರಣ್ಯ ಪ್ರದೇಶದಲ್ಲಿ ಶ್ರೀಗಂಧದ ಮರ ಬಹಳವಾಗಿದೆ. ನಮ್ಮ ಜಿಲ್ಲೆಯಲ್ಲಿ ಸಂಡೂರು ಫಾರೆಸ್ಟ್ thick forest. ಅರಣ್ಯ ಸಂಪತ್ತು ಚೆನ್ನಾಗಿದೆ. ಅನೇಕರು ಇದರಿಂದ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಕಾಡಿನಲ್ಲಿ ತಮಗೆ ಬೇಕು ಬೇಕಾದ ಮರಗಳನ್ನು ಕಡಿದು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಶ್ರೀಗಂಧದ ಮರಗಳನ್ನು ಕಡಿಯುತ್ತಾರೆ. ಸರ್ಕಾರದವರೇ ಇವುಗಳನ್ನೆಲ್ಲಾ ಮಾಡಿದರೆ ಬಹಳ ಲಾಭವಿದೆ. ಈ ಎಲ್ಲ ದೃಷ್ಟಿಯಿಂದಲೂ ಮೈಸೂರು ಕಾನೂನನ್ನು ಬಳ್ಳಾರಿ ಜಿಲ್ಲೆಗೆ ಅನ್ವಯಿಸದೆ ಇರುವುದು ವಿಷಾದಕರವಾದ ಸಂಗತಿ. ಮೈಸೂರು ಕಾನೂನನ್ನು ಬಳ್ಳಾರಿ ಜಿಲ್ಲೆಯಲ್ಲಿ ಜಾರಿಗೆ ತರುವುದರಿಂದ ಸರ್ಕಾರಕ್ಕೆ ಉಪಯೋಗವಾಗುವುದರಿಂದ ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಇದರಲ್ಲಿ ಲಂಚರುಷುವತ್ತುಗಳು ಜಾಸ್ತಿ ಎಂದು ಕೇಳಿದ್ದೇನೆ. ಅರಣ್ಯ ಇಲಾಖೆಗೆ ಸೇರಿದ ಪ್ರತಿಯೊಬ್ಬ ಫಾರೆಸ್ಟ್ ಗಾರ್ಡ್ ಸಹ ತಿಂಗಳಿಗೆ 100 ರೂಪಾಯಿ, 150 ರೂಪಾಯಿ ತಮ್ಮ ಮೇಲ್ಪಟ್ಟವರಿಗೆ ಕೊಡಬೇಕಂತೆ. ಹೀಗಿರಬೇಕಾದರೆ ಈ ಗಾರ್ಡು ಇದರ ಮೂರರಷ್ಟು ನಾಲ್ಕರಷ್ಟು ಸಂಪಾದನೆ ಮಾಡಲು ಪ್ರಯತ್ನ ಮಾಡುತ್ತಾರೆ. ಹೀಗೆ ಮಾಡುವಾಗ ಭಟ್ಟಿ ಇಳಿಸುವವರಿಗೆ ಈ ಅಡವಿಗಳಲ್ಲಿ ಅವಕಾಶಕೊಟ್ಟು ಹಣವನ್ನು 300-400 ರೂಪಾಯಿಗಳನ್ನು ತಾನು ಪಡೆದು ಅದರಲ್ಲಿ 100-150 ರೂಪಾಯಿ ಫಾರೆಸ್ಟರ್‌ಗೆ ಕೊಟ್ಟು ಉಳಿದುದನ್ನು ತಾನು ತೆಗೆದುಕೊಳ್ಳುತ್ತಾನೆ. ಈರೀತಿ ಸಾರೋದ್ಧಾರವಾಗಿ ನಡೆದುಕೊಂಡು ಬರುತ್ತಿದೆ. ಇವರಿಗೆ ಸಂಬಳ ಕೊಟ್ಟು, afforestation ಮಾಡುತ್ತೇವೆ ಎಂದು ಹೇಳುವುದು ಶುದ್ಧ ತಪ್ಪು. ಆದರೆ deforest ಮಾಡುವುದೇ ಅವರ ಕೆಲಸ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ನಿಗಾಕೊಟ್ಟು ಇಂಥದನ್ನೆಲ್ಲಾ ತಪ್ಪಿಸಬೇಕು ಎಂದು ಹೇಳುತ್ತೇನೆ

ಈ ಇಲಾಖೆಯಲ್ಲಿ Assistant Conservator of Forests, Chief Conservator of Forests, ಮುಂತಾದ ಅಧಿಕಾರಿಗಳು ಅರಣ್ಯಗಳನ್ನು ನೋಡಲು ಬಂದಾಗ ಮುಖ್ಯರಸ್ತೆಗಳಲ್ಲಿ ಬಂದು ನೋಡಿಕೊಂಡು ಹೋಗುತ್ತಾರೆ. ಹೀಗಿರುವಾಗ ಅರಣ್ಯದ ಒಳಭಾಗದಲ್ಲಿ ಕಾಡನ್ನು ಕತ್ತರಿಸುವುದು ಇವರಿಗೆ ಹೇಗೆ ತಿಳಿಯಬೇಕು. ಅಧಿಕಾರಿಗಳು ಸರಿಯಾಗಿ ತನಿಖೆ ಮಾಡದೆ ಇರುವುದರಿಂದಲೋ ಏನೋ ಕಾಡನ್ನು ಕತ್ತರಿಸಿ ಮರಗಳನ್ನು ಸಾಗಿಸುವುದು 3-4 ವರ್ಷಗಳಿಂದ ಈಚೆಗೆ ಮತ್ತಷ್ಟು ಹೆಚ್ಚಾಗಿದೆ. Supervision ಮತ್ತು Checking ಭಯವೇ ಇಲ್ಲದಂತಾಗಿದೆ. ಆದುದರಿಂದ ಮೇಲ್ಪಟ್ಟ ಅಧಿಕಾರಿಗಳು ಸ್ವಲ್ಪ ಶ್ರದ್ಧೆ ತೆಗೆದುಕೊಂಡು ರಸ್ತೆಗಳಲ್ಲಿ ಬಂದು ರಸ್ತೆಗಳ ಅಕ್ಕಪಕ್ಕಗಳಲ್ಲಿ ಮಾತ್ರ ನೋಡಿಕೊಂಡು ಹೋಗದೆ, ಮಧ್ಯ ಅರಣ್ಯದಲ್ಲಿ ಹೋಗಿ ತನಿಖೆ ಮಾಡಿದರೆ ಆಗ ಅವರ ಕೈ ಕೆಳಗಿನ ಅಧಿಕಾರಿಗಳು ಭಯಪಡುತ್ತಾರೆ. Ranger ಆಗಿ ಕೆಲಸ ಮಾಡುವವರು ತಮ್ಮ ಮಾಮೂಲು ಬಂದರೆ ಸುಮ್ಮನೆ ಇರುತ್ತಾರೆ. ಇದಕ್ಕಾಗಿ District Forest Officer, ಮತ್ತು Conservator of Forests ಆಗಾಗ್ಗೆ ಭೇಟಿ ಇತ್ತು ತನಿಖೆಮಾಡಿ afforestation scheme ಸರಿಯಾಗಿ ನಡೆಯುವಂತೆಯೂ ಮತ್ತು deforestation ಆಗದಂತೆಯೂ ನೋಡಿಕೊಳ್ಳಬೇಕು ಈ ವಿಷಯಗಳೆಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

* ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಸ್ವಾಮಿ, ಅರಣ್ಯಸಂಪತ್ತನ್ನು ಹೆಚ್ಚಿಸಬೇಕೆಂಬ ನಮ್ಮ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಪ್ರಾರ್ಥನೆ ಅರಣ್ಯ ರೋದನವೇ ಆಗಿದೆ ಎಂದು ಹೇಳುವುದರಲ್ಲಿ ಯಾವ ವಿಧವಾದ ಉತ್ಪ್ರೇಕ್ಷೆಯೂ ಇಲ್ಲವೆಂದು ನನಗನ್ನಿಸುತ್ತದೆ. ಯಾಕೆಂದರೆ ನಾನು ನೋಡುತ್ತಿದ್ದೇನೆ. ವರ್ಷೇ ವರ್ಷೇ ಅರಣ್ಯಗಳಲ್ಲಿ ಮರಗಳನ್ನು ನೆಡಸುವ ಕಾರ್ಯಕ್ರಮವನ್ನು ವ್ಯವಸ್ಥಿತ ರೂಪದಲ್ಲಿ ಸರ್ಕಾರದವರು ಹಾಕಿಕೊಂಡು ವನಮಹೋತ್ಸವಗಳ ಮುಖಾಂತರ, ಗಾಂಧಿಜಯಂತಿ, ಸ್ವಾತಂತ್ರ್ಯೋತ್ಸವ ಮೊದಲಾದ ಸಂದರ್ಭಗಳಲ್ಲಿ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡುತ್ತಿದ್ದಾರೆ. ಒಂದು ವಿಧವಾದ ಪರಿಣಾಮಕಾರಿಯಾದ ರೀತಿಯಲ್ಲಿ ಈ ವನ ಸಂಪತ್ತನ್ನು ಬೆಳೆಸುತ್ತಿಲ್ಲವೆಂದು ಹೇಳಿದರೆ ಅದರಲ್ಲಿ ಯಾವ ಆಶ್ಚರ್ಯವೂ ಕೂಡ ಇಲ್ಲ. ಅರಣ್ಯಸಂಪತ್ತನ್ನು ಹೆಚ್ಚಿಸುವುದಕ್ಕೆ ನಮ್ಮ ಅರಣ್ಯಗಳು ಹೆಚ್ಚು ಹೆಚ್ಚಾಗಬೇಕು. ಮೊದಲನೆಯದಾಗಿ ನಮ್ಮ ಅರಣ್ಯಗಳಲ್ಲಿ ಮತ್ತು ರಸ್ತೆಗಳ ಪಕ್ಕದಲ್ಲಿ ಮರಗಳನ್ನು ನೆಡುವ ಕಾರ್ಯಕ್ರಮಕ್ಕೆ ಹೆಚ್ಚುಗಮನ ಕೊಡಬೇಕೆಂದು ಸೂಚನೆ ಕೊಡ ಬಯಸುತ್ತೇನೆ. ರಸ್ತೆಗಳ ಪಕ್ಕಗಳಲ್ಲಿರುವ ಸಾಲು ಮರಗಳ ರೆಂಬೆಗಳನ್ನೂ ಮತ್ತು ಮರಗಳನ್ನೂ ವಿಶೇಷವಾಗಿ ಕಡಿಯುತ್ತಾ ಇದ್ದಾರೆ. ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ಮತ್ತು ಅರಣ್ಯ ಇಲಾಖೆಯವರ ಗಮನಕ್ಕೆ ತಂದರೆ ಅವರು ಅದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ, ಗಮನಕ್ಕೆ ತೆಗೆದುಕೊಳ್ಳುದಿಲ್ಲ. ಅರಣ್ಯದಲ್ಲಿ ಒಳ್ಳೆಯ ಮರಗಳಿರುತ್ತವೆ. ಈ ಮರಗಳನ್ನೆಲ್ಲ ಅಲ್ಲಲ್ಲಿ ಕಡಿಯುತ್ತಿದ್ದರೂ, ಹಳ್ಳಿಗಳಲ್ಲಿರುವ ಪಟೇಲರು ಮತ್ತು ಶ್ಯಾನುಭೋಗರು ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ಅರ್ಜಿಯನ್ನೂ ಕೊಡುತ್ತಿಲ್ಲ. ಆ ವಿಷಯವನ್ನು ತಿಳಿಸುವುದು ಕೂಡ ಇಲ್ಲ. ಅವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಅರಣ್ಯ ಇಲಾಖೆಯವರೇ ಆಗಲಿ, ಬೇರೆ ಇಲಾಖೆಯವರೇ ಆಗಲಿ, ಪಟೇಲ್ ಮತ್ತು ಶ್ಯಾನುಭೋಗರುಗಳಿಗೆ ಅರಣ್ಯಗಳಲ್ಲಿ ಮರಗಳನ್ನು ಕಡಿದುಹಾಕುವ ವಿಷಯವನ್ನು ತಿಳಿಸಬೇಕೆಂದು ಸರಿಯಾದ ಎಚ್ಚರಿಕೆಯನ್ನು ಕೊಟ್ಟು ಮರಗಳನ್ನು ಕಡಿಸುವ ಕೆಲಸವನ್ನು ನಿಲ್ಲಿಸಬೇಕೆಂದು ನನಗನ್ನಿಸುತ್ತದೆ.

ಶ್ರೀ ಮೂಡಲಗಿರಿಗೌಡರು ಅರಣ್ಯ ಇಲಾಖೆಯಿಂದ ಜಮೀನನ್ನು ಬಿಡಿಸಿ ರೈತರಿಗೆ ಕೊಡುವ ಕಾರ್ಯಕ್ರಮಕ್ಕೆ ಹೆಚ್ಚುಗಮನ ಕೊಡಬೇಕೆಂದು ಹೇಳುತ್ತಿದ್ದರು. ಯಾವ ಯಾವ ಊರುಗಳ ಹತ್ತಿರ ಇಂಥ ಜಮೀನು ಹೆಚ್ಚಾಗಿದೆಯೋ ಅಲ್ಲಿ ಮಾಡಬಹುದು. ಈಗ ನೋಡುವುದರಲ್ಲಿ ಯಾವ ಊರಿನ ಹತ್ತಿರವೂ ಗೋಮಾಳದ ಜಮೀನು ಹೆಚ್ಚಾಗಿಲ್ಲ. ಅರಣ್ಯದ ಇಲಾಖೆಯ ಜಮೀನು ಕೂಡ ಹೆಚ್ಚಾಗಿಲ್ಲ. ಮೂರನೆ ಒಂದು ಭಾಗದ ಜಮೀನನ್ನು ಗೋಮಾಳಕ್ಕಾಗಿ, ಅರಣ್ಯವಾಗಿ ಉಳಿಸಿಕೊಳ್ಳದೆ ಹೋದರೆ ದನಕರುಗಳ ಮೇವಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಈ ಅರಣ್ಯಗಳಲ್ಲಿ ಮರಗಳನ್ನು ಬೆಳೆಸುವುದರಕಡೆ ಗಮನ ಕೊಡಬೇಕು. ನಮಗೆ ಸ್ವರಾಜ್ಯ ಬಂದು 8-10 ವರ್ಷಗಳಾದವು. ನಮ್ಮ ಅರಣ್ಯಗಳೇನಾದರೂ ಅಭಿವೃದ್ಧಿಯಾಗಿದವು ಎಂದು ನೋಡಿದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಅರಣ್ಯಗಳಲ್ಲಿ ಕುರುಚಲು ಗಿಡಗಳು ಮಾತ್ರ ಇವೆಯೇ ಹೊರತು ಒಳ್ಳೆಯಜಾತಿ ಮರಗಳು ಯಾವುವೂ ಇಲ್ಲ. ಹಿಂದಿದ್ದ ಮರ ಕಡಿದುಹಾಕುತ್ತಿದ್ದಾರೆ. ಫಾರೆಸ್ಟ್ ಇಲಾಖೆ ನರ್ಸರಿಗಳಲ್ಲಿ ನಾಮ್ಕಾವಸ್ತೆ ಕೆಲವು ಗಿಡಗಳನ್ನು, ಸಸಿಗಳನ್ನು ಬೆಳೆಸುತ್ತಾರೆ. ಅವನ್ನು ಯಾವುದಾದರೂ ದನಕರುಗಳು ಮೇದು ಹೋಗುತ್ತವೆ, ಯಾರಾದರೂ ತೆಗೆದುಕೊಂಡು ಹೋಗಲೂಬಹುದು. ಅರಣ್ಯ ಇಲಾಖೆ ಗಿಡಗಳನ್ನೇನೋ ಹಾಕಿದರೂ ಅವು ಒಣಗಿ ಹೋಗುತ್ತವೆ. ಹೀಗಾಗಿ ಅರಣ್ಯ ಇಲಾಖೆಯಲ್ಲಿ ಒದಗಿಸಿರುವ ಹಣ ಸಿಬ್ಬಂದಿಗಾಗಿ ಖರ್ಚಾಗುತ್ತಿದೆಯೇ ಹೊರತು ಯಾವ ವಿಧವಾದ ಪ್ರಯೋಜನವೂ ಆಗುತ್ತಿಲ್ಲ. ಇಷ್ಟು ವಿಷಯ ಗಮನಕ್ಕೆ ತಂದು ಈ ಅರಣ್ಯ ಇಲಾಖೆಯಲ್ಲಿ ಮರಹಾಕಿ ಬೆಳೆಸುವ ಕಾರ್ಯಕ್ರಮವೇನಿದೆಯೋ ಅದನ್ನು ವಿಕೇಂದ್ರೀಕರಣಮಾಡಿ ಗ್ರಾಮಾಧಿಕಾರಿಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಆ ಕೆಲಸ ವಹಿಸಿ ಆ ಮೂಲಕ ಮರ ಬೆಳೆಸುವುದಕ್ಕೆ ಒಂದು ನಿರ್ದಿಷ್ಟವಾದ ಯೋಜನೆ ಹಾಕಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

*ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಇಷ್ಟು ಹೊತ್ತಿನವರೆಗೆ ಮಾನ್ಯ ಸದಸ್ಯರು ಎಲ್ಲರೂ ಅಡವಿ ಸಂಪತ್ತನ್ನು ಹೆಚ್ಚಿಸಬೇಕೆಂಬ ವಿಷಯದಲ್ಲಿ ಬಹಳ ತೀವ್ರವಾದ ಆಸಕ್ತಿಯನ್ನು ತೋರಿಸಿ ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದಕ್ಕೆ ನಾನಾ ವಿಧವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲಕ್ಕೂ ಒಂದೊಂದಾಗಿ ತೆಗೆದುಕೊಂಡು ಜವಾಬು ಹೇಳುವುದಕ್ಕೆ ಪ್ರಾರಂಭಿಸಿದರೆ ಬಹಳ ಕಾಲ ಹಿಡಿಯಬಹುದು. ಆದ್ದರಿಂದ ಪೂರ್ಣವಾಗಿ ಎಲ್ಲಕ್ಕೂ ಈಗ ಜವಾಬು ಹೇಳುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ ಅಂದುಕೊಂಡಿದ್ದೇನೆ. ಆದಕಾರಣ ಕೆಲವು ಮುಖ್ಯವಾದ ಅಂಶಗಳೇನಿವೆಯೋ ಅವುಗಳ ವಿಷಯವನ್ನು ಮಾತ್ರ ಹೇಳಿ ಆ ತರುವಾಯ ಮಾನ್ಯ ಸದಸ್ಯರೇನು ಹೇಳಿದ್ದಾರೋ ಆ ಪ್ರತಿಯೊಂದು ಅಂಶಕ್ಕೂ ನನ್ನ ತೀವ್ರವಾದ ಗಮನವನ್ನು ಕೊಟ್ಟು ಯಾವ ವಿಧವಾಗಿ ಅವುಗಳ ಬಗ್ಗೆ ಚರ್ಯೆ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತಿದ್ದೇನೆ.

ಮುಖ್ಯವಾಗಿ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಫಾರೆಸ್ಟೇಷನ್ನಿಗೆ ಬಹಳ ಹೆಚ್ಚಿನ ಹಣ ಕೊಡುವುದಕ್ಕೂ ಮತ್ತು ಹೆಚ್ಚು ಪ್ರದೇಶವನ್ನು ಅಫಾರೆಸ್ಟ್ ಮಾಡುವುದಕ್ಕೂ ಈಗ ಏರ್ಪಾಡು ಮಾಡಿದ್ದೇವೆಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಈಗ ನಾವು 85 ಲಕ್ಷ ರೂಪಾಯಿಗಳನ್ನು ಸಾಯಿಲ್ ಕನ್ಸರ್ವೇಷನ್ನಿಗೂ ಮತ್ತು ಅಫಾರೆಸ್ಟೇಷನ್ನಿಗೂ ಮೀಸಲಾಗಿಟ್ಟಿದ್ದೇವೆ. Afforestation of waste lands, pilot and administrative schemes have been included in this. ಇದರಲ್ಲಿ ಎಷ್ಟು ವಿಸ್ತೀರ್ಣ ನಾವು ಅಫಾರೆಸ್ಟೇಷನ್ ಮಾಡುತ್ತೇವೆಂದರೆ ಮೈದಾನ ಪ್ರದೇಶದಲ್ಲಿ ಈ ಐದು ವರ್ಷಗಳಲ್ಲಿ 60 ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದು ಅಂದುಕೊಂಡಿದ್ದೇವೆ. ಅದೂ ಅಲ್ಲದೆ ಯಾವುದೇ ಒಂದು ಕೆಲಸ ಮಾಡುವುದಕ್ಕೂ ಒಂದು ಸ್ಕೀಂ ತಯಾರಾಗಬೇಕು. ಅದಾದಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಮಲೆನಾಡು ಪ್ರದೇಶದಲ್ಲಿ, 14 ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದಿದೆ. ಮೊದಲನೆ ಪಂಚವಾರ್ಷಿಕ ಯೋಜನೆ ತಯಾರಾದರೆ ಒಂದು ಲಕ್ಷ ಎಕರೆಯಾದರೂ ಅಫಾರೆಸ್ಟೇಷನ್ ಮಾಡಬೇಕೆಂದಿದ್ದೆವು; ಅಷ್ಟು ಸಾಧ್ಯವಾಗಲಿಲ್ಲ. ಅದಕ್ಕೆ ನಾನು ಬಹಳ ವಿಷಾದಪಡುತ್ತಿದ್ದೇನೆ. ಈ ವರ್ಷ ಅದನ್ನು ಏಳು ಸಾವಿರ ಎಕರೆಯವರೆಗಾದರೂ ಮಾಡಲು ಪ್ರಯತ್ನಪಡುತ್ತಿದ್ದೇವೆ. ಆ ತರುವಾಯ ಮುಂದಿನ ಐದು ವರ್ಷ ಆಗುವವರೆಗೆ ಈಗ ಹೇಳಿರುವ ವಿಸ್ತೀರ್ಣ ತಯಾರುಮಾಡುವುದಕ್ಕೆ ಏರ್ಪಾಡು ಮಾಡು-

ತ್ತಿದ್ದೇವೆ. ಅನೇಕ ಸದಸ್ಯರು ಅಫಾರೆಸ್ಟೇಷರ್ಷ ವಿಷಯವನ್ನು ಬಹಳ ತೀವ್ರವಾಗಿ ಕಳಕಳಿಯಿಂದ ಹೇಳಿದ್ದಾರೆ. ಶ್ರೀ ಮುನಿಸ್ವಾಮಯ್ಯನವರು ಬೀಜ ಕೊಡಬೇಕೆಂದು ಹೇಳಿದ್ದಾರೆ. ಇನ್ನೊಬ್ಬ ಮಹನೀಯರು ಅಕ್ಕಪಕ್ಕದಲ್ಲಿರುವ ರೈತರಿಗೆ ಅಫಾರೆಸ್ಟೇಷನ್ ಮಾಡುವುದನ್ನು ವಹಿಸಿಬಿಡಿ ಎಂದು ಹೇಳಿದ್ದಾರೆ. ಈಗ ನಾವು ರೈತರ ಸಹಾಯ ಸಿಕ್ಕುವ ಕಡೆ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ಇಲ್ಲಿನವರೆಗೆ ನಮ್ಮ ಅನುಭವ ಅಷ್ಟು ಸುಖವಾಗಿಲ್ಲ. ಟಾಂಗಾ ಸಿಸ್ಟಂ ಇಟ್ಟು ಕುಮರಿ ಕಲ್ಟಿವೇಷನ್ನಿಗೆ ಕೊಟ್ಟಿರುವ ಕಡೆ ರೈತರು ಅಫಾರೆಸ್ಟೇಷನ್ ಮಾಡಿಲ್ಲ; ಕೆಲವರು ಮಾತ್ರ ಮಾಡಿದ್ದಾರೆ.

ಇನ್ನೊಂದು ವಿಷಯ. ಅಫಾರೆಸ್ಟೇಷನ್ ಜೊತೆಗೆ ಫಾರೆಸ್ಟ್ ಜಮೀನನ್ನು ರಿಲೀಸ್‌ಮಾಡಿ ಎಂದು ಹೇಳಿದ್ದಾರೆ. ಹಿಂದೆ ಫಾರೆಸ್ಟ್ ಜಮೀನನ್ನು ರಿಲೀಸ್ ಮಾಡಬಾರದೆಂದು ಈ ಮಾನ್ಯ ಸಭೆ ಬಹುಮತದಿಂದ ತೀರ್ಮಾನಮಾಡಿದೆ. ಅದನ್ನು ಬಹಳ ಶ್ರದ್ಧೆಯಿಂದ ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ. ಇದರೊಳಗೆ ಮುಖ್ಯವಾದ ಕಾರಣವೇನೆಂದರೆ ಈಗ ನಮಗೆ ಶೇಕಡ 14ರಷ್ಟು ಫಾರೆಸ್ಟ್ ಇದೆಯೆಂದು ಹೇಳುತ್ತಿದ್ದೇವೆ; ನಿಜವಾಗಿಯೂ ನೋಡಿದರೆ ಬೆಂಗಳೂರು, ತುಮಕೂರು, ಕೋಲಾರ ಈ ಪ್ರಾಂತಗಳಲ್ಲಿ ಕೇವಲ ಶೇಕಡ ಎಂಟರಷ್ಟು ಸಹ ಇಲ್ಲ. ನಾವು ಮಲೆನಾಡು ಮತ್ತು ಮೈದಾನ ಪ್ರದೇಶ ಎರಡೂ ಕೂಡಿಸಿದರೆ ಶೇಕಡ 14ರಷ್ಟು ಬರುತ್ತದೆ. ತಮಗೆ ತಿಳಿದಹಾಗೆ ಮಲೆನಾಡು ಶೇಕಡ 25—30ಕ್ಕಿಂತ ಹೆಚ್ಚಾಗಿರುವುದರಿಂದ ಸರಾಸರಿ ಇಷ್ಟಾಗುತ್ತದೆ.

ಆಮೇಲೆ ಭೂಮಿ ರೈತರಿಗೆ ಕೊಡಬೇಕೆಂದು ಹೇಳಿದ್ದಾರೆ. ಅಲ್ಲಿ ಭೂಮಿ ತೆಗೆದುಕೊಂಡು ಮಳೆಯಲ್ಲಿ ಬಿಸಿಲಲ್ಲಿ ಕೆಲಸಮಾಡಿದರೂ ಪೈರು ಏಳುವುದಿಲ್ಲ. ಪೈರಾಗುವುದಕ್ಕೆ ಚೆನ್ನಾಗಿ ಮಳೆ ಬರಬೇಕು. ಭೂಮಿ ಬೆಳೆದರೆ ತಾನೆ ಸಾರ್ಥಕವಾಗುವುದು! ಪೈರು ಬೆಳೆಯದಿರುವ ಸ್ಥಿತಿ ಕ್ರಿಯೇಟ್ ಮಾಡಿದರೆ ಭೂಮಿಯನ್ನು ತೆಗೆದುಕೊಂಡು ಮಾಡುವುದೇನು? ಇಲ್ಲಿಂದ ಬಳ್ಳಾರಿ ರಸ್ತೆಯಲ್ಲಿ ಹೋದರೆ ಅನೇಕ ಪ್ರದೇಶಗಳಿವೆ, ಅಲ್ಲಿ ಏನೂ ಬೆಳೆದಿಲ್ಲ. ಹೆಚ್ಚಾಗಿ ಮಳೆಯಾಗಿ ಅಲ್ಲೇನಾದರೂ ಬೆಳೆದರೆ ಸಾರ್ಥಕವಾಗುತ್ತದೆ. ಆದಕಾರಣ ಬೇಕಾದಷ್ಟು ಫಾರೆಸ್ಟ್ ಇರಬೇಕು. ಕೆಲವುಕಡೆ ಎರಡು ಎಕರೆ ಕೊಡಿ ಎಂದು ಕೆಲವರು ಸದಸ್ಯರು ಹೇಳಿದರು. ಈಗ ಒಂದು ಕಡೆ ಕೊಡಲು ಶುರುಮಾಡಿದರೆ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. It is a matter of degree. ಕೆಲವುಕಡೆ ನೂರು ಎಕರೆ ಪ್ರದೇಶವಿದೆ, ಅಲ್ಲಿ ಫಾರೆಸ್ಟಾಗುವುದಿಲ್ಲ, ಅಂಥಾದ್ದನ್ನೇಕೆ ವ್ಯವಸಾಯಕ್ಕೆ ಕೊಡಬಾರದು ಎಂದು ಕೇಳುತ್ತಾರೆ. ಆದರೆ ಫಾರೆಸ್ಟ್ ಬೆಳೆಯುವುದಕ್ಕೇ ಲಾಯಕ್ಕಾಗಿಲ್ಲದ ಭೂಮಿಯಲ್ಲಿ ಬತ್ತ, ರಾಗಿ ಬೆಳೆಯಲು ಸಾಧ್ಯವೆ? ಇವರು ಮಲೆನಾಡಿನ ವಿಷಯ ಹೇಳುತ್ತಿದ್ದಾರೆ. ಆ ರೀತಿಯಾಗಿ ನಮ್ಮ ಬೈಲು ದೇಶದಲ್ಲಿ ಒಂದು ಕಾಡೂ ಕೂಡ ಬೆಳೆಯುವುದಿಲ್ಲ. ಹೌದು ಸಾಗು ಮಾಡಿದರೆ ಆಗುತ್ತದೆ. ಅದೇ ರೀತಿ ನಮ್ಮ ಫಾರೆಸ್ಟ್ ಇಲಾಖೆಯವರೂ ಕೂಡ ಅಂಥ ಪ್ರದೇಶದಲ್ಲಿ ಒಂದು ಗುಂಡಿ ತೋಡಿ, ಬೀಜ ನೆಟ್ಟರೆ ಅಂಥ ಪ್ರದೇಶದಲ್ಲೂ ಗಿಡಗಳು ಬೆಳೆಯುತ್ತವೆ. ಇನ್ನು ಶ್ರೀ ಆರ್. ಮುನಿಸ್ವಾಮಯ್ಯನವರು ಅಲ್ಲಾಳಸಂದ್ರದ ಫಾರೆಸ್ಟ್ ವಿಚಾರ ಹೇಳಿದರು. ಆ ಜಮೀನನ್ನು ವ್ಯವಸಾಯಗಾರರಿಗೆ ಕೊಟ್ಟಿದ್ದೇವೆ. ಆದರೆ ಹಾಗೆ ಅಲ್ಲಿ ಜಮೀನನ್ನು ಎಂಥವರಿಗೆ ಕೊಡಲಾಗಿದೆ ಎಂದರೆ ಯಾರು ಯಾರು ತಿಪ್ಪಗೊಂಡನಹಳ್ಳಿ ಕೆರೆಯಕಟ್ಟಡದ ಸಂಬಂಧದಲ್ಲಿ ಜಮೀನನ್ನು ನೀರು ಮುಳುಗಡೆ ಮಾಡಿಕೊಂಡಿದ್ದರೋ ಅಂಥವರಿಗೆ ಮಾತ್ರ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಜಮೀನು ಕೊಡುವಂತೆ ಒಂದು ಏರ್ಪಾಡು ಮಾಡಿಕೊಂಡಿದ್ದೇವೆ. ಇದೇ ರೀತಿಯಾಗಿ ಇನ್ನೂ ಕೆಲಕೆಲವು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ರಿಜರ್ವಾಯರ್ ಇತ್ಯಾದಿಗಳನ್ನು ನಿರ್ಮಿಸತಕ್ಕ ಸಂದರ್ಭಗಳಲ್ಲಿ ಯಾರಯಾರ ಜಮೀನುಗಳು ನೀರು ಮುಳುಗಡೆ ಆಗಿರುತ್ತವೋ ಅಂಥವರುಗಳಿಗೆ ಮಾತ್ರ ಈ ಜಂಗಲುಗಳಲ್ಲಿ ಜಮೀನು ಕೊಡಬೇಕೆಂದು ಅಂದುಕೊಂಡಿದ್ದೇವೆ. ಈ ಜನರಿಗೆ ಜಮೀನು ಕೊಡುವುದಕ್ಕೆ ಇಂಥಕಡೆ ಬಿಟ್ಟರೆ ಬೇರೆ ಎಲ್ಲಿಯೂ ಅವಕಾಶವಿಲ್ಲ. ಅಂಥ ನಿರ್ವಾಹವಿಲ್ಲದ ಸಂದರ್ಭಗಳು ಬಂದಾಗ ಈ ಕಾಡುಗಳಲ್ಲಿಯೇ ಅವರಿಗೆ ಜಮೀನು ಕೊಡಬೇಕಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಜಮೀನಿಲ್ಲದವರಿಗೆ ಕೊಟ್ಟರೆ ಪರವಾ ಇಲ್ಲ. ಹಾಗೆ ಮಾಡದೆ ದೊಡ್ಡ ದೊಡ್ಡ ಜಮೀನ್ದಾರರಂಥ ನಮ್ಮಂಥವರಿಗೇ ತಾವು ಜಮೀನು ಕೊಡುತ್ತಿದ್ದೀರಿ. ಹೀಗೆ ಹೇಳಿ ಹಾಗೆ ಮಾಡತಕ್ಕದ್ದು ಅನ್ಯಾಯವಲ್ಲವೇ ಎಂದು ಕೇಳುತ್ತೇನೆ.

ಡಾ॥ ಆರ್. ನಾಗನಗೌಡ.—ಆ ರೀತಿಯಾಗಿ ಏನಾದರೂ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಆಗಿದ್ದರೆ ಅದನ್ನು ನಾನು ವಿಚಾರ ಮಾಡುತ್ತೇನೆ. ಇನ್ನು ಶ್ರೀ ಹುಚ್ಚಮಾಸ್ತಿಗೌಡರು ಹೇಳಿದರು—ನೀರು ಮುಳುಗಡೆ ಆಗತಕ್ಕಂಥ ಪ್ರದೇಶದಲ್ಲಿರುವ ಮರಗಳನ್ನು ತೆಗೆಯುತ್ತಿಲ್ಲ ಎಂದು. ಆದರೆ ನಾವು ಈಗಾಗಲೆ ಅನೇಕ ರಿಜರ್ವಾಯರ್‌ಗಳನ್ನು ಕಟ್ಟಿಸತಕ್ಕ ಪ್ರದೇಶಗಳಲ್ಲಿ ನೀರು ಮುಳುಗಡೆಯಾಗತಕ್ಕಂಥ ಪ್ರದೇಶದಲ್ಲಿರುವ ದೊಡ್ಡದೊಡ್ಡ ಬೆಲೆ ಬಾಳತಕ್ಕಂಥ ಮರಗಳನ್ನೆಲ್ಲಾ ತೆಗೆಸುತ್ತಿದ್ದೇವೆ. ನುಗು ಇತ್ಯಾದಿ ರಿಜರ್ವಾಯರ್ ಪ್ರದೇಶಗಳಲ್ಲಿ ಆ ರೀತಿ ನಡೆಸುತ್ತಿದ್ದೇವೆ. ಇನ್ನು ಶ್ರೀ ಪಿ. ಆರ್. ರಾಮಯ್ಯನವರು ರಿಸರ್ಚ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. Prevention of soil erosion and conservation of soil ಬಗ್ಗೆ ನಾವು ಈಗಾಗಲೆ ಖಾಯಂ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಕೇಂದ್ರ ಸರ್ಕಾರದವರು ಈ ರಿಸರ್ಚ್ ಬಾಬಿನಲ್ಲಿ ನಮಗೆ ಸಹಕಾರ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ ಆ ಸ್ಕೀಮು ಇನ್ನೂ ಜಾರಿಗೆ ಬಂದಿಲ್ಲ. ಇನ್ನು ಶ್ರೀಮಾನ್ ದೇವರಾಜ ಅರಸರು ಟ್ರೀಟ್‌ಮೆಂಟ್ ಆಫ್ ಟಿಂಬರ್ ಮತ್ತು ಬ್ಯಾಂಬೂ ಟ್ರಾನ್ಸ್‌ಪೋರ್ಟ್ ವಿಚಾರ ಹೇಳಿದರು. ನಮ್ಮಲ್ಲಿ ಟಿಂಬರ್ ಟ್ರೀಟ್‌ಮೆಂಟ್ ವಿಚಾರ ಬಹಳ ಯಶಸ್ವಿಯಾಗಿ ಆಗಿದೆ. ಆದರೆ ಬೊಂಬುಗಳನ್ನು ಸಾಗಿಸತಕ್ಕ ಖರ್ಚು ಬಹಳ ಬರುತ್ತದೆ. ಈ ದಿವಸ ಈ ಬೊಂಬುಗಳು ನಮ್ಮ ಬಳ್ಳಾರಿಗೆ ಬಂದರೆ ಅಲ್ಲಿ ನಾವು ಒಂದೊಂದಕ್ಕೆ ಒಂದೂವರೆ ರೂಪಾಯಿ ಕೊಡಬೇಕಾಗಿರುತ್ತದೆ. ಆದರೆ ಅದೇ ಬೊಂಬು ಶಿವಮೊಗ್ಗಾ ಕಾಡುಗಳಲ್ಲಿ ವಿಶೇಷವಾಗಿ ಹಾಳಾಗುತ್ತಿದೆ. ಅಂತೂ ಇದರ ಟ್ರಾನ್ಸ್‌ಪೋರ್ಟೇಷನ್ ಬಹಳ ದುಬಾರಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯಮಂತ್ರಿಗಳು ಅಪ್ಪಣೆಕೊಡಿಸುತ್ತಿರುವುದು—ಈ ಬೊಂಬುಗಳ ಟ್ರಾನ್ಸ್‌ಪೋರ್ಟ್ ಬಹಳ ಕಷ್ಟವಾಗುತ್ತದೆ ಎಂದು. ಆದರೆ ಅದೇ ಕಷ್ಟ ಟಿಂಬರ್ ಟ್ರಾನ್ಸ್‌ಪೋರ್ಟೇಷನ್ನಿಗೂ ಇದೆ. ಆದರೆ ಈ ಎರಡನ್ನೂ ಹೋಲಿಸಿ ನೋಡಿದರೆ ಟಿಂಬರ್‌ಗಿಂತ ಬೊಂಬುಗಳ ಸಾಗಾಣಿಕೆಗೆ ಖರ್ಚು ಕಡಮೆ ಆಗುತ್ತದೆ ಎಂದು ನಾನು ಹೇಳುತ್ತೇನೆ.

ಡಾ|| ಆರ್. ನಾಗನಗೌಡ.—ಟಿಂಬರ್‌ನಲ್ಲಿ ಕೆಲವು ಬಹಳ ವ್ಯಾಲ್ಯುಬಲ್ ಮೆಟೀರಿಯಲ್ಸ್ ಆಗುತ್ತವೆ. ಈ ದಿವಸ ಕೆಲವು ಹಳ್ಳಿಗಳಲ್ಲಿ—ಎಂದರೆ ತುಂಗಭದ್ರಾ ನದಿಯ ದಡದಲ್ಲಿರತಕ್ಕಂಥ ಗ್ರಾಮಗಳಲ್ಲಿ—ಹೋಗಿ ನೋಡಿದರೆ ಕೆಲಕೆಲವು ಮನೆಗಳಿಗೆ ಭಾರಿ ತೊಲೆಗಳನ್ನು ಹಾಕಿರುತ್ತಾರೆ. ಅವರನ್ನು ಕೇಳಿದರೆ ಅವು ತೆಪ್ಪದ ತೊಲೆಗಳು ಎಂದು ಹೇಳುತ್ತಾರೆ. ಹಾಗೆ ಅವರು ಹೇಳಲು ಕಾರಣವೇನೆಂದರೆ ಆ ತೊಲೆಗಳನ್ನು ಶಿವಮೊಗ್ಗಾ ಕಡೆಯಿಂದ ತೆಪ್ಪದ ಮೂಲಕ ಸಾಗಿಸಿತಕ್ಕಂಥ ತೊಲೆಗಳೆಂದು ಹೇಳುತ್ತಿದ್ದಾರೆ. ಏನೇ ಆಗಲಿ ಈ ಟಿಂಬರ್ ಮತ್ತು ಬೊಂಬುಗಳನ್ನು ತೆಪ್ಪದ ಮೂಲಕವೂ ಸಾಗಿಸಲು ಪ್ರಯತ್ನಮಾಡಲಾಗುತ್ತದೆ. ಇನ್ನು ಕೆಲವು ಮಾನ್ಯಸದಸ್ಯರು ಫಾಡರ್ ವಿಚಾರ ಹೇಳಿದರು. ಈ ದಿವಸ ಬಹಳ ಉತ್ತಮ ದರ್ಜೆಯ ಹುಲ್ಲು ಸಂಡೂರ್ ಅರಣ್ಯದಲ್ಲಿ ಬೆಳೆಯುತ್ತಿದೆ. ಮಳೆಯಿಲ್ಲದ ಕಾಲದಲ್ಲಿ ಈ ಹುಲ್ಲನ್ನು ನಾವು ಕಡಪ—ಬಳ್ಳಾರಿ ಇಂಥ ಕಡೆಗಳಿಗೆ ರವಾನೆಮಾಡುತ್ತಿದ್ದೇವೆ. ಆದರೆ ಬೆಂಗಳೂರಿಗೆ ಕಳುಹಿಸಬೇಕೆಂದರೆ ಚಾರ್ಜ್ ಬಹಳ ದುಬಾರಿ ಬೀಳುತ್ತದೆ ಇನ್ನು ಶಿವಮೊಗ್ಗಾ ಕಡೆಗಳಲ್ಲಿ ಈ ಹುಲ್ಲನ್ನು ಶೇಖರಣೆ ಮಾಡಿಕೊಂಡು ಬರಲು ಒಂದು ಹೊಸ ವಿಧಾನವನು (silage) ಆಚರಣೆಗೆ ತರಲಾಗುತ್ತಿದೆ. ಈಗಾಗಲೇ ಈ ರೀತಿ ಈ ದನಗಳ ಮೇವನ್ನು ಗುಂಡಿಗಳಲ್ಲಿ ಶೇಖರಣೆ ಮಾಡತಕ್ಕ ವಿಧಾನವನ್ನು ಜಾರಿಗೆ ತರಲು 6-7 ಗುಂಡಿಗಳಲ್ಲಿ ಪ್ರಯೋಗ ನಡೆಸಲಾಗುತ್ತಿದೆ.

ಇನ್ನು ಅರಣ್ಯಗಳಿಗೆ ಬೆಂಕಿ ಬೀಳತಕ್ಕ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂದು ಹೇಳಿದ್ದಾರೆ. ನಾವೂ ಸಹ ಹಾಗೇ ಮಾಡಬೇಕೆಂದು ಅಂದುಕೊಂಡಿದ್ದೇವೆ. ಇನ್ನು ನಾವು ಈ ದಿವಸ ಮಾಡುತ್ತಿರುವ ಪ್ಲಾಂಟಿಂಗ್ ವಿಚಾರವಾಗಿ ಖರ್ಚು ಬಹಳ ದುಬಾರಿ ಆಯಿತು ಎಂದು ರೈತರು ನೋಡಿ ನಗುತ್ತಿದ್ದಾರೆ ಎಂಬುದಾಗಿ ಕೆಲವರು ತಿಳಿಸಿದ್ದಾರೆ. ಆದರೆ ನಾವು ಈ ಬಾಬನ್ನು ಎಷ್ಟು ಮಿತವ್ಯಯದಿಂದ ನಡೆಸಬೇಕೋ ಅಷ್ಟು ಮಿತವ್ಯಯದಿಂದ ನಡೆಸುತ್ತಿದ್ದೇವೆ. ಇನ್ನು ನಮ್ಮ ಫಾರೆಸ್ಟ್ ಇಲಾಖೆಯವರು ಖಾಸಗೀ ಜನರಿಗೆ ಮರಗಳನ್ನು ಕೊಯ್ಯತಕ್ಕ ಗುಂಡಿಗಳ ಬಗ್ಗೆ ಲೈಸೆನ್ಸ್ ಕೊಡುತ್ತಿದ್ದಾರೆ, ಇದರಿಂದ ಅನೇಕ ರೀತಿಯಲ್ಲಿ ಅರಣ್ಯದಲ್ಲಿ ಮರಗಳ ಕಳವು ನಡೆಯುತ್ತದೆಂದೂ ಅದಕ್ಕಾಗಿ ಈ ಲೈಸೆನ್ಸ್‌ಕೊಡತಕ್ಕ ಪದ್ಧತಿಯನ್ನೇ ವಜಾ ಮಾಡಬೇಕೆಂದೂ ಹೇಳಿದ್ದಾರೆ. ಆದರೆ ಹೀಗೆ ಗುಂಡಿಗಳನ್ನು ಹಾಕಲು ಲೈಸೆನ್ಸ್ ತೆಗೆದುಕೊಳ್ಳಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ.

ಇನ್ನು ಗಂಧದ ಮರಗಳನ್ನು ಖಾಸಗೀ ಜನರ ಜಮೀನುಗಳಲ್ಲಿ ಬೆಳಸಿದರೆ ಅವರಿಗೆ ಇದರಿಂದ ಯಾವ ಪ್ರೋತ್ಸಾಹವೂ ದೊರೆಯುತ್ತಿಲ್ಲವೆಂದು ಹೇಳಿದರು. ಹೀಗೆ ಖಾಸಗೀ ಜಮೀನುಗಳಲ್ಲಿ ಬೆಳಸಿರತಕ್ಕ ಗಂಧದ ಮರಗಳಿಗೆ ಒಂದು ರೂಪಾಯಿನಿಂದ 20 ರೂಪಾಯಿಗಳವರೆಗೂ ಕಾಂಪೆನ್ಸೇಷನ್ ಮೊಬಲಗನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದು ಆಯಾ ಮರದ ಸೈಜಿನಮೇಲೆ ಹೋಗುತ್ತದೆ.

ಇನ್ನು ಕಾಡಾನೆ ಇತ್ಯಾದಿ ಮೃಗಗಳಿಂದ ಆಗತಕ್ಕ ಹಾವಳಿಯನ್ನು ತಡೆಗಟ್ಟಲು ಆ ಸಿಬ್ಬಂದಿ ವರ್ಗದವರಿಗೆ ಸಾಕಷ್ಟು ಕಾರ್ಟ್‌ರಿಡ್ಜ್‌ಗಳನ್ನು ಒದಗಿಸಿರಲಿಲ್ಲ ಎಂದು ಆಕ್ಷೇಪಣೆ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ನಮಗೂ ಕೂಡ ಒಂದೆರಡು ಕಂಪ್ಲೇಂಟ್ಸ್‌ಗಳು ಬಂದಿದ್ದವು. ಅಂಥಾದ್ದನ್ನು ತಡೆಗಟ್ಟಲು ನಾವು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅನೇಕ ಮಾನ್ಯಸದಸ್ಯರುಗಳು ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾವು ಸತತವಾಗಿ ಈ ಅರಣ್ಯ ಬಾಬಿನಿಂದ ಹೆಚ್ಚು ಲಾಭ ಬರುವಂತೆ ಮಾಡುವುದಕ್ಕೂ ಮತ್ತು ಈ ಅರಣ್ಯವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೂ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೇವೆ. ಆದರೆ ಈ ಇಲಾಖೆಗೇನೂ ಅಷ್ಟು ಹೆಚ್ಚು ಖರ್ಚಾಗುತ್ತಿಲ್ಲ. ತಾವು ಹಿಂದಿನ ಸಾಲುಗಳ ಖರ್ಚು ವೆಚ್ಚಗಳನ್ನು ನೋಡಿದರೆ ಅದು 41 ಲಕ್ಷ, ಅದರ ಮಾರನೆಯ ವರ್ಷ 44 ಲಕ್ಷ, ಅದರ ಮಾರನೆಯ ವರ್ಷ 47 ಲಕ್ಷ ರೂಪಾಯಿಗಳು ಖರ್ಚಾಗಿವೆ. ಈ ವರ್ಷ ಈ ಬಾಬಿಗೆ 54 ಲಕ್ಷದ 88 ಸಾವಿರ ರೂಪಾಯಿಗಳನ್ನು ಮಾತ್ರ ಕೇಳಿದ್ದೇವೆ.

ಹೋದ ವರ್ಷ ಡೆವಲಪ್‌ಮೆಂಟ್ ಸ್ಕೀಂಗೆ 2 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿತ್ತು. ಈ ವರ್ಷ 10 ಲಕ್ಷ 50 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ತಾವು ದಯಮಾಡಿ ಬಡ್ಜೆಟ್‌ವಾಲ್ಯೂಂ II ಪೇಜ್ 3ರಲ್ಲಿ ನೋಡಿದರೆ ಡೆವಲಪ್‌ಮೆಂಟ್ ಏನೇನು ಮಾಡಬೇಕೆಂದು ಅಂದು ಕೊಂಡಿದ್ದೇವೆ ಎಂಬುದು ಗೊತ್ತಾಗುತ್ತದೆ.

ಶ್ರೀಮಾನ್ ಹನುಮಯ್ಯನವರು ತಂಗಡಿ ಚಕ್ಕೆ ವಿಷಯ ಹೇಳಿದರು. ಹರಿಜನರೇ ಇದರಲ್ಲಿ ಕೆಲಸ ಮಾಡುವವರು, ಬಹಳ ಮಂದಿ ಇದರಿಂದ ಜೀವನ ಮಾಡುತ್ತಾ ಇದ್ದಾರೆ ಅವರಿಗೆ ಸೊಸೈಟಿ ಮುಖಾಂತರ ಸಹಾಯ ಕೊಡಬೇಕು ಎಂದು ಹೇಳಿದರು. ಸರ್ಕಾರದವರು ಏನೊಂದು ಸಹಾಯ ಮಾಡಿದರೂ ಕೂಡ ಅದು ಆ ಜನಗಳಿಗೆ ನೇರವಾಗಿ ಸಹಾಯವಾಗಬೇಕು. ಆ ಕೆಲಸದಲ್ಲಿ ಯಾರು ನಿರತರಾಗಿದ್ದಾರೋ ಅವರು ಒಂದು ಕೋ-ಆಪರೇಟೀವ್ ಸೊಸೈಟಿಮಾಡಿಕೊಂಡರೆ ಅವರಿಗೆ ಲೈಸೆನ್ಸ್ ಕೊಡುತ್ತೇವೆ. ಮದರಾಸಿನಲ್ಲಿ ಅನೇಕ ಕಡೆ ಕೊಟ್ಟಿದ್ದಾರೆ. ತಪ್ಪುಮಾಡುವುದಕ್ಕೆ ಸಾಧ್ಯವುಂಟು, ಇಲ್ಲ ಎಂದು ಹೇಳುವುದಿಲ್ಲ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಅಲ್ಲಿರುವ ತಂಗಡಿಚಕ್ಕೆ ತೆಗೆಯುವ ಹೆಣ್ಣುಮಕ್ಕಳು, ಗಂಡುಮಕ್ಕಳು ಎಲ್ಲಾ ಸೇರಿ ಒಂದು ಸೊಸೈಟಿ ಮಾಡಿಕೊಂಡರೆ ಅದರ ಲಾಭ, ಲುಕ್ಸಾನು ಎಲ್ಲಾ ಅವರಿಗೇ ಹೋಗುತ್ತದೆ. ಪ್ರೆಸಿಡೆಂಟರು, ಸೆಕ್ರೆಟರಿ ಮುಂತಾದವರು ಆನರೆರಿ ಆಗಿ ಕೆಲಸಮಾಡಬಹುದು ಅಥವಾ ನೂರಾರು ರೂಪಾಯಿ ಸಂಬಳ ಕೊಡುತ್ತೇವೆ ಎಂದರೆ ಕೊಡಿ, ಆಕ್ಷೇಪಣೆ ಏನೂ ಇಲ್ಲ. ಅಲ್ಲಿ ಆ ರೀತಿಯ ಒಂದು ಸಂಸ್ಥೆ ಇಲ್ಲ. ಆ ರೀತಿಯ ಒಂದು ಸಂಸ್ಥೆಯನ್ನು ಇಟ್ಟುಕೊಂಡರೆ ಚೆನ್ನಾಗಿರುತ್ತದೆ. ತಂಗಡಿಚಕ್ಕೆ ಹೊಡೆಯುವವರ ಕಷ್ಟ ಎಷ್ಟಿದೆ ಎಂಬುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ಯಾರು ತಂಗಡಿಚಕ್ಕೆ ಹೊಡೆಯುತ್ತಾರೆಯೋ ಅವರನ್ನು ಆ ಸೊಸೈಟಿಯ ಮೆಂಬರುಗಳನ್ನಾಗಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಆಗಲಿಕ್ಕಿಲ್ಲ ಎಂದು ನನ್ನ ಮನಸ್ಸಿಗೆ ತಿಳಿಯುತ್ತದೆ.

Mr. SPEAKER.—Who is to finance?

Dr. R. NAGAN GOWDA.—We can get plenty of finance from the co-operative movement, if the actual workers are the members. For instance there is a Marketing Society for jaggery producers. The members are all jaggery producers. Similarly society for sugar-cane growers.

ಯಾವುದೇ ಆಗಲೀ ಹಣ ಕೊಡುವುದಕ್ಕೆ ಅನುಕೂಲ ಇದೆ. ಆದರೆ ಸದಸ್ಯರು ಯಾರು ಆಗಬೇಕು ? ಅವರೇ ಆಗಬೇಕು. ಇದು ತಪ್ಪು. ಈ ವಿಷಯವಾಗಿ ಒಂದು ದಿವಸ ಕುಳಿತುಕೊಂಡು ಆಲೋಚನೆ ಮಾಡಬೇಕೆಂದು ನನ್ನ ಅಭಿಪ್ರಾಯ ಇದೆ.

*Sri A. BHEEMAPPA NAIK (Molakalmuru).—I would like to submit one thing. The Hon'ble Minister perhaps does not know that the shareholders are directly those persons, except one gentleman by name T. M. P. Pir who is an expert. All others are the workers, Adikarnatakas. They alone are the members. They are the actual workers and they are the members. Once Government gave it on certain basis and they were working. But suddenly Government wanted them to compete with others. They could not compete and inevitably they had to get money from somewhere else. In spite of requests for finance nothing has happened. Let the Minister appoint a committee today and ask them to give proposals by which all middle men can be eliminated and only the actual workers get the benefit. I will give proposals. Thereby Government will be getting much more than they are getting now. The middle men will all be eliminated and the whole thing will be worked in such a way that even financial help need not be given by Government. We will give such proposals. They do not think over that. They do not want to help them and they want to allow them to compete with others. That is the position. Anyway let him agree to appoint a committee. Within 15 days we will give proposals by which neither the Government nor the actual workers are adversely affected and at the same time the middle men are eliminated.

*Sri G. DUGGAPPA (Holalkere-Scheduled Castes).—For this only object of helping the people who are working on tangadi the society was organised on co-operative lines. With this object we are working. Perhaps there may be a clerk. Because there was no finance, we had to take the permission of the President who is not in the field. The President of that society is not working actually on tangadi but the thing is he knows the job well being well versed in the business of tangadi bark. The society is mainly meant for the poor people who are actually working. I wanted to make this clear to the Government. As Sri Bheemappa Naik said, will the Government at least now appoint a committee to go into the question of difficulties of the people and organise the tangadi bark finance on co-operative lines ?

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಈ ತಂಗಡಿ ಚಕ್ಕೆ ಹೊಡೆಯುವವರಿಗೆ ಸಹಾಯ ಮಾಡಬೇಕು ಎಂದು ಹೇಳುವುದರ ಉದ್ದೇಶ ಏನು ಎಂಬುದು ಸರ್ಕಾರದವರಿಗೆ ಗೊತ್ತಿದೆ. ಕೆಲವರು ಇಲ್ಲದ ಸಲ್ಲದ ಹಿನ್ನೆಲೆಯನ್ನು ಸರ್ಕಾರದವರಿಗೆ ಕೊಟ್ಟು ಆ ಯೋಜನೆ ಏನಾಗುತ್ತದೆಯೋ ನೋಡೋಣ ಎಂದು ಇದ್ದಾರೆ. ತಂಗಡಿ ಚಕ್ಕೆ ಹೊಡೆಯುವ ಈ ಬಡಜನರಿಗೆ ಸರ್ಕಾರದವರು ಸಾಧ್ಯವಾದ ಎಲ್ಲಾ ಸಹಾಯಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

Dr. R. NAGAN GOWDA.—There is only one point about which I wish to say a few words.

Mr. SPEAKER.—I think there is no difference of opinion between the Government and the Members in regard to the help to be given.

Dr. R. NAGAN GOWDA.—Yes ; but I wish to protest against what my Hon'ble friend Sri Bheemappa Naik said that Government have no mind to do this. I wish to tell him that if I have faith in one thing, it is in co-operation, and we as cultivators in our own native village have worked at it and helped ourselves. This society should have every one of the tangadi bark workers as its member. If they get profit from wages, they must either be kept in deposit in reserve fund for the society or should be distributed among the workers. That is the fundamental principle of a co-operative society and one cannot deny that. This is what happened in our society.

Sri A. BHEEMAPPA NAIK.—Have you seen how many members are there?

Sri D. DEVARAJ URS.—Mr, Speaker, Sir, you do not allow us to intervene in the debate but you are allowing others to intervene.

Dr. R. NAGAN GOWDA.—Now this is an important thing which has come up for discussion. I will only request my friend Sri Bheemappa Naik who has great faith in the co-operative movement and who has done much more than what I have done in this

(DR. R. NAGAN GOWDA.)

field and also my other friends, to create a real co-operative society for Chitaldrug District and work out the scheme. I am sure the Government will give them all the help that is needed in this respect. It does not matter even if the Government loses a small amount; but it must render help to the people. And the principle adopted while giving the grant to the society is the average for the last two or three years. That is the usual amount that would be given to a co-operative society without any competition or when putting it into action. It has been done in a large number of cases and I know about them. I only request my other friends to go ahead with the scheme and if they want any help from the Government, I will certainly give them the help and give whatever suggestions I am capable of.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಒಂದು ಕಮಿಟಿಯನ್ನು appoint ಮಾಡಬೇಕೆಂದು ಹೇಳಿದರು, ಅದಕ್ಕೆ ಉತ್ತರವನ್ನೇ ತಾವು ಕೊಡಲಿಲ್ಲ. ಸುಮ್ಮನೆ ತಲೆ ಸವರುವ ಮಾತುಗಳಿಂದೇನು ಪ್ರಯೋಜನ?

Mr. SPEAKER.—You must take the answer given by the Minister.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಒಂದು ಮುಖ್ಯವಾದ ಅಂಶವನ್ನು ಬಿಟ್ಟು ಬಿಟ್ಟಿದ್ದಾರೆ. ಶ್ರೀ ಹುಚ್ಚಮಾಸ್ತಿಗೌಡರು ಸರ್ಕಾರದವರ ಗಮನಕ್ಕೆ ತಂದು ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಬಂಡೀಪುರದ ಕಾಡಿನಲ್ಲಿ ಒಂದು ಹೋಟಲು ಕಟ್ಟಿ, ಈ ಹಣವನ್ನು Wild Life Preservation head ನಲ್ಲಿ ತೋರಿಸಿರುವುದು ಸರಿಯಲ್ಲ, ಇದು ನ್ಯಾಯವಾದ ಖರ್ಚಲ್ಲವೆಂದು ಹೇಳಿದ್ದಾರೆ. ಎರಡು ಲಕ್ಷ ರೂಪಾಯಿಗಳನ್ನು ಈ Head ನಲ್ಲಿ ಖರ್ಚು ಮಾಡುವುದು ಶುದ್ಧಾಂಗ ತಪ್ಪು, ದಯವಿಟ್ಟು ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರಕೊಡಬೇಕು.

Dr. R. NAGAN GOWDA.—Sir, the Government of India have come forward with this grant to build a Hotel and other things in Bandipur because they want to develop that area into a Tourists' Centre and that is why we have taken that amount into account here.

Sri K. PUTTASWAMY.—Is this grant made by the Government of India?

Dr. R. NAGAN GOWDA.—Yes. This amount has been earmarked for that purpose.

Sri K. PUTTASWAMY.—Even then I protest Sir, because that is also the people's money.

Dr. R. NAGAN GOWDA.—I quite agree with my Hon'ble friend, but the Government of India wants to have a Tourists' Centre there. The Government of India have got another sanctuary *viz*, Mudumali in the Madras State which is one of the finest wild life sanctuaries that I have known in India. A large number of tourists come and stay there. We must provide conveniences for those tourists.

My friend Sri, Kotra Basavanna Goud stated about some inconvenience caused in Bellary. We have not been able to introduce the Mysore Act into that area and there we are collecting licence fee for grazing sheep, cattle and buffaloes. That system has worked in Madras very well, in the sense that nobody can get into the forest without a licence. And then he was telling about the permission to be given for taking fencing materials. They could take it by paying 0-8-0 per cartload. The licences are now being issued.

Sri D. DEVARAJ URS.—What about my question regarding giving of licences for the raiyats to carry the green fuel whenever required?

Mr. SPEAKER.—While Government is giving licences to exploit fuel from the forest, why not that facility be extended to the raiyats? That is what the Hon'ble Member wants to know.

Dr. R. NAGAN GOWDA.—The other suggestion that was made by my friend Sri Bheemappa Naik is about appointing a Committee. That could be considered; but I would rather suggest to him to put up a proposal on some of the lines which would be helpful to the Tangadi Bark Workers. It is not that it should be absolutely satisfactory to Government, but it must be useful to the poor people that are working day and night there.

*ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೊರೇಷನ್ ಫಂಡಿನಿಂದ ಖರ್ಚು ಹಾಕಿ ನಿಮ್ನ ತರಗತಿಯವರಿಗೆ ಮರಮುಟ್ಟುಗಳನ್ನು ಕೊಡಬೇಕೆಂದಿದ್ದರೂ ಅರಣ್ಯ ಇಲಾಖೆಯವರು ಒಳ್ಳೆಯ ಮರಗಳನ್ನು ಕೊಡದೆ ಆಲದಮರ, ಅತ್ತಿಯಮರ ಮುಂತಾದುವುಗಳನ್ನು ಮಾತ್ರ ಕೊಡುತ್ತಿದ್ದಾರೆ. ಎಷ್ಟು ಒಳ್ಳೆಯ ಮರವನ್ನು ಕೊಡಬಹುದೋ ಅಷ್ಟು

ಒಳ್ಳೆಯ ಮರವನ್ನು ಕೊಡುತ್ತಿಲ್ಲ. ನೀವೇ ಪ್ರಯತ್ನ ಮಾಡಿ ಶಿವಮೊಗ್ಗ ಬೆಂಗಳೂರು ಕೋಲಾರಗಳ ನಡುವೆ ಒಂದು ಕೇಂದ್ರ ಡಿಪೋವೆಂದು ಮಾಡಿ ಅಲ್ಲಿ ಮರ ಮುಟ್ಟುಗಳನ್ನು ತಯಾರಿಸಿ ಎಲ್ಲರಿಗೂ ಸರಬರಾಯಿ ಮಾಡುವಂತೆ ಹೇಳಿದರೂ ಸರ್ಕಾರದವರು ಗಮನ ಕೊಟ್ಟಿಲ್ಲ. ಈಗ ಮರ ಮುಟ್ಟುಗಳನ್ನು ಸಾಗಿಸಿಕೊಂಡು ಬರಬೇಕಾದರೇ ಬಹಳ ದುಬಾರಿ ಖರ್ಚಾಗುತ್ತಿದೆ. ಈ ಕಷ್ಟವನ್ನು ಸರಿಪಡಿಸದೆ ಹೋದರೆ, ಸರ್ಕಾರದವರು ನಮ್ಮ ಜನರಿಗೆ ಎಡಗೈಯಲ್ಲಿ ಕೊಟ್ಟದ್ದನ್ನು ಬಲಗೈಯಲ್ಲಿ ತೆಗೆದುಕೊಳ್ಳುವಂತಾಗುತ್ತದೆ. ಅರಣ್ಯ ಶಾಖಾ ಮಂತ್ರಿಗಳು ಇದನ್ನು ದಯವಿಟ್ಟು ಗಮನಿಸಬೇಕೆಂದು ಹೇಳುತ್ತೇನೆ. ಇದೇ ವಿಷಯದಲ್ಲಿ ನಾನೊಂದು ಸೂಚನೆಯನ್ನೂ ಕಳುಹಿಸಿದ್ದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—Green Fuelನ್ನು ರೈತರು ತೆಗೆದುಕೊಂಡು ಹೋಗುವುದಕ್ಕೇಕೇ ಅವಕಾಶ ಕೊಡಕೂಡದು ?

ಡಾ॥ ಆರ್. ನಾಗನಗೌಡ.—ಲಾರಿಗಳವರ ಲೈಸೆನ್ಸ್ ತೆಗೆದುಕೊಂಡು ಕೂಪಿನಿಂದ ಸೌದೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದೆ. ಕೂಪುಗಳನ್ನು ಕೊಡಬೇಕಾದರೆ ಮುಂಚೆಯೇ 'ಕೂಪ್' ಎಂದು ಸೌದೆಯನ್ನು ಕತ್ತರಿಸುವ ಜಾಗವನ್ನು ಗೊತ್ತು ಮಾಡಿ 'ಕೂಪ್' ಎಂದು declare ಮಾಡಿ ಅನಂತರ ಲೈಸೆನ್ಸ್ ಕೊಡುವುದಕ್ಕೆ ಏರ್ಪಾಡು ಮಾಡಿದೆ. ಯಾರು ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೋ ಅವರು ಈ ಪ್ರದೇಶದಿಂದ ಲಾರಿಗಳ ಮುಖಾಂತರ ಸೌದೆಯನ್ನು ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ green wood ಬೇಕಾದರೆ ಅಲ್ಲಿಂದಲೇ ತೆಗೆದುಕೊಳ್ಳಬೇಕು. Dry wood ಬೇಕಾದರೆ ಕಾಡಿನಲ್ಲಿ ಎಲ್ಲಿಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್.—ಕೂಪಿನಿಂದ ತೆಗೆದುಕೊಳ್ಳುವುದು ಕಂಟ್ರಾಕ್ಟರುಗಳಿಗೆ ಮಾತ್ರ ಸಾಧ್ಯ. ಬೇರೆ ಜನರು ತೆಗೆದುಕೊಳ್ಳುವುದಕ್ಕೆ ಹೋದರೆ ಅವರು ಕೊಡುವುದಿಲ್ಲ. ಆದ್ದರಿಂದ ತಾವು ಈ ನ್ಯೂನತೆಯನ್ನು ಸರಿಮಾಡಿ ರೈತರಿಗೇ ಒಂದು ಕೂಪ್ ಮಾಡಿ ಅವರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿದರೆ. . . .

ಡಾ॥ ಆರ್. ನಾಗನಗೌಡ.—ಶ್ರೀ ದೇವರಾಜ ಅರಸ್‌ನವರು ಹೇಳಿದ್ದರಲ್ಲಿ ರೈತರಿಗೆ ಒಂದು ಕಷ್ಟವಿದೆಯೆಂದು ಗೊತ್ತಾಯಿತು. ಇದಕ್ಕೆ ಏನು ಮಾಡಬಹುದೆಂದರೆ, ಗ್ರಾಮದ ಹತ್ತಿರವೇ ಒಂದು ಕೂಪ್‌ಮಾಡಿ ಇಲಾಖೆಯವರನ್ನು ಯಾರನ್ನಾದರೂ ಇಟ್ಟು ರೈತರು ಯಾರು ಬರುತ್ತಾರೋ ಅವರಿಗೆ ಸೌದೆ ಮರ ಕೊಡುವಂತೆ ಏರ್ಪಾಡು ಮಾಡಬಹುದು. ಈ ಪ್ರಕಾರ ಒಂದು pilot scheme ಒಂದನ್ನು ಮಾಡುವ ಯೋಚನೆ ಮಾಡುತ್ತೇವೆ.

ಆ ಮೇಲೆ ಶ್ರೀಮಾನ್ ಪ್ರಭಾಕರ್‌ರವರು ಹೇಳಿದ್ದನ್ನು ಪರಿಶೀಲಿಸುತ್ತೇವೆ. ಏನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡಿಕೊಡುತ್ತೇವೆ. ಶ್ರೀಮಾನ್ ಹುಚ್ಚೇಗೌಡರು ನಾನು ವಿವರಗಳನ್ನು ಕೊಟ್ಟಾಗ ಇರಲಿಲ್ಲ. ಈಗ ಖರ್ಚು ಹೆಚ್ಚಾಗಿದೆ. ಯಾವ ಕಾರಣದಿಂದ ಹೆಚ್ಚಾಗಿದೆ ಎಂಬುದನ್ನು ಆಗಲೇ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಹೇಗೆ ಖರ್ಚು ಹೆಚ್ಚಾಗಿದೆ ? ಭದ್ರಾವತಿ ಕಾರ್ಖಾನೆಗೆ ಸೌದೆಯನ್ನು ಸರಬರಾಯಿ ಮಾಡುತ್ತಿರುವುದರಲ್ಲಿ overhead chargeಗಳು ಕೂಡ ಹುಟ್ಟುತ್ತಿಲ್ಲ. ಬೊಂಬುಗಳನ್ನು ಸಪ್ಲೈ ಮಾಡುವುದು ಕೂಡ ಲಾಭದಾಯಕವಾಗಿಲ್ಲ. ಕೆಲವು ಕಡೆ ಒಂದಾಣೆಗೆ ಒಂದಡಿ ಸೀನಿಯೊರೇಜ್ ಮೇಲೆ ಕೊಡುತ್ತೀರಿ. ಇನ್ನೊಂದು ಕಡೆ ನೀವೇ ಮಾಡಿ ಲುಕ್ಸಾನು ಹೊಂದುತ್ತಿದ್ದೀರಿ. ಇದೇಕೆ ಹೀಗೆ ಮಾಡುತ್ತೀರೆಂಬುದನ್ನು ತಿಳಿಸಬೇಕು.

ಡಾ॥ ಆರ್. ನಾಗನಗೌಡ.—Conservator of Forests ಸಾಮಾನ್ಯವಾಗಿ ಅರಣ್ಯವನ್ನು ನೋಡಿಕೊಳ್ಳುವುದಕ್ಕೆ ಇದ್ದಾರೆ. ಅಲ್ಲಿ ನಮಗೆ timber supply ಮಾಡುತ್ತಿದ್ದಾರೆ. ಖರ್ಚು ಎಂಟು ಲಕ್ಷ ಐವತ್ತು ಸಾವಿರ ಇದೆ. ಆದಾಯ, supply of bamboos to Paper Mills ಎರಡು ಲಕ್ಷ ಇದೆ. We get 2 lakhs and forty-five thousand of rupees, ಕೇವಲ seigniorage ಮಾತ್ರ ನಮಗೆ ಬರುವುದು. It is a factory that is supported by the Government. Supply of charcoal to Iron and Steel Works costs us 8 lakhs of rupees and we get 8 lakhs and fifty thousand rupees.

ಶ್ರೀ ಬಿ. ಹುಚ್ಚೇಗೌಡ.—ನಾವು ಏತಕ್ಕೆ supply ಮಾಡಬೇಕು ? ಅವರೇ ಮಾಡಿಕೊಳ್ಳಬಹುದಲ್ಲ.

ಡಾ॥ ಆರ್. ನಾಗನಗೌಡ.—Iron and Steel Worksನವರೇ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಅವರು ಇನ್ನೂ ಒಪ್ಪಿಕೊಂಡಿಲ್ಲ.

Mr. SPEAKER.—The question is :

"That a sum not exceeding Rs. 54,89,000 be granted to the Government to defray the charges which will come in course of payment during the year ending 31st day of March 1957, in respect of 'Forest'."

The motion was adopted.

DEMAND NO. 36—WORKING EXPENSES (FOREST).

X. FOREST—C(1) WOOD PRESERVATION PLANT—WORKING EXPENSES AND SEIGNIORAGE.

Mr. SPEAKER.—The question is :

"That a sum not exceeding Rs. 5,02,000 be granted to the Government to defray the charges which will come in course of payment during the year ending 31st day of March 1957, in respect of 'X. Forest—C(1) Wood Preservation Plant—Working Expenses and Seigniorage'."

The motion was adopted.

DEMAND NO. 33—STATIONERY AND PRINTING.

56. STATIONERY AND PRINTING.

Mr. SPEAKER.—The question is :

"That a sum not exceeding Rs. 26,06,000 be granted to the Government to defray the charges which will come in course of payment during the year ending 31st day of March 1957, in respect of 'Stationery and Printing'."

The motion was adopted.

DEMAND NO. 35-A.—COMMUNITY DEVELOPMENT, ETC.

63-B.—COMMUNITY DEVELOPMENT PROJECTS, NATIONAL EXTENSION SERVICE AND LOCAL DEVELOPMENT WORKS.

Mr. SPEAKER.—The question is :

"That a sum not exceeding Rs. 1,00,92,000 be granted to the Government to defray the charges which will come in course of payment during the year ending 31st day of March 1957 in respect of 'Community Development Projects, National Extension Service and Local Development Works'."

The motion was adopted.

Mr. SPEAKER.—The House will now rise and meet at 8-30 A.M. tomorrow.

The House rose at Thirty-five Minutes past Six of the Clock to meet again at Thirty Minutes past Eight of the Clock on Monday, 26th March 1956.

WD 2896—GPB—550—14-7-56